ಮಾಡಿ ತಮ್ಮ ವಿವೇಚನೆಯ ಮೂಲಕ ಕೊಡುವ ತೀರ್ಮಾನಕ್ಕೆ ಬದ್ಧರಾಗಬೇಕು ಎಂದು ತೀರ್ಮಾನ ಮಾಡಿದ್ದೆವು. ಆದರೆ ಮಾನ್ಯ ರಾಯರೆಡ್ಡಿಯವರು ಈ ಅವಕಾಶವನ್ನು ಉಪಯೋಗಿಸಿಕೊಂಡು ಬಹಳ ದೀರ್ಘವಾಗಿ ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರಿಗೆ ಮಾತನಾಡುವ ಹಕ್ಕಿದೆ, ಮಾತನಾಡಿದ್ದಾರೆ. ಅದರ ಬಗ್ಗೆ ಭಿನ್ನಾಭಿಪ್ರಾಯ ಏನೂ ಇಲ್ಲ. ಆದರೆ ಒಪ್ಪಂದದ ಪ್ರಕಾರ ನಾವು ನಡೆದುಕೊಳ್ಳಬೇಕಾಗಿತ್ತು ಎಂದು ಮಾತ್ರ ಹೇಳಲು ಬಯಸುತ್ತೇನೆ. ಸೌಜನ್ಯಕ್ಕಾದರೂ ಸರ್ಕಾರ ನಮ್ಮೊಡನೆ ಸಮಾಲೋಚಿಸಬೇಕಿತ್ತು ಎಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಮೂರು ಜನ ಹಿರಿಯ ಸದಸ್ಯರು ಮಾತನಾಡುವ ಸಂದರ್ಭದಲ್ಲಿ ಕೂಡ ಅದನ್ನು ಹೇಳಿದರು. ಮತ್ತೊಂದು ಕಡೆಗೆ ಸೌಜನ್ಯದಿಂದ ಜಿಲ್ಲಾಧಿಕಾರಿಗಳು ಇಂತಹ ಏರ್ಪಾಡುಗಳನ್ನು ಮಾಡಿದ್ದೇವೆ ಎಂದು ಹೇಳಿದರೆ, ಬೆಳಗಾವಿ ಉಸ್ತುವಾರಿ ಸಚಿವರು ಸೌಜನ್ಯಕ್ಕಾಗಿ ಒಂದು ಪೂರ್ವಭಾವಿ ಸಭೆಯನ್ನು ಕರೆದಿದ್ದೇನೆ ಎಂದು ಹೇಳಿದರೆ, ಅದನ್ನು ಸಂವಿಧಾನ ಬಾಹಿರ ಕ್ರಮ ಎಂದು ಹೇಳುವುದಾದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ. It is something like a pernicious argument ಎಂದು ಹೇಳಬೇಕಾಗುತ್ತದೆ.

3. ವಿತ್ತೀಯ ಕಾರ್ಯಕಲಾಪಗಳು:

2006-07ನೇ ಸಾಲಿನ ಪೂರಕ ಅಂದಾಜು (ಒಂದನೇ ಕಂತು) ಮಂಡನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ದಿನಾಂಕ 31.03.2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1ರಿಂದ 5, 7ರಿಂದ 15, 17ರಿಂದ 24 ಹಾಗೂ 26ರಿಂದ 28ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಈ ಬಂಡವಾಳ ಖಾತೆಯಲ್ಲಿ ಮಂಜೂರಾದ ಮತ್ತು ಅದನ್ನು ಭರಿಸಲು ಪೂರಕ ಅಂದಾಜುಗಳಲ್ಲಿ ಸೇರಿಸಲಾದ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಲಾದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

ಅಧ್ಯಕ್ಷರು : ವಿವರಣೆ ನೀಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೇ, ಅದಕ್ಕೂ ಮೊದಲು ನಮ್ಮದು ಒಂದು ಹಕ್ಕುಚ್ಯುತಿ ಪ್ರಸ್ತಾವ ಇದೆ.

4. ಹಕ್ಕುಚ್ಯುತಿ ಪ್ರಸ್ತಾವ

ವಿಷಯ: ಬೆಳಗಾವಿ ಅಧಿವೇಶನದ ಬಗ್ಗೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : Privilege Motion ಹಾಗೆಯೇ ಇಟ್ಟುಕೊಂಡು ಎಲ್ಲಾ ಕಾರ್ಯಕಲಾಪ ಪ್ರಾರಂಭ ಮಾಡಿದರೆ ಹೇಗೆ?

ಅಧ್ಯಕ್ಷರು : ಆಯಿತು. ನಾನು ಅವಕಾಶ ಕೊಡುತ್ತೇನೆಂದು ಹೇಳಿದ್ದೇನಲ್ಲಾ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈಗ ಅವಕಾಶ ಕೊಡಿ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, Privilege motion ಇದ್ದಾಗ ಯಾವುದೇ business ತೆಗೆದುಕೊಳ್ಳುವುದು ಕಷ್ಟವಾಗುತ್ತದೆ. ದಯಮಾಡಿ ಅದನ್ನು ನೋಡಿ.

ಶ್ರೀ ಬಸವರಾಜ ರಾಯರೆಡ್ಡಿ : ನಿನ್ನೆ ನಾವು ಹಕ್ಕು ಚ್ಯುತಿ ಸೂಚನೆ ಕೊಟ್ಟಿದ್ದೇವೆ.

ಶ್ರೀ ಕೆ. ಶ್ರೀನಿವಾಸ ಗೌಡ : ಮಾನ್ಯ ಅಧ್ಯಕ್ಷರೇ, privilege motion ಗೆ ಅವರು ಅವಕಾಶ ಕೇಳುತ್ತಿದ್ದಾರೆ. ಈ ತರಹ ಹಿಂದೆ privilege motion ಹಾಗೂ ಬೇರೆ ಯವುದೇ ವಿಷಯಗಳು ಸರ್ಕಾರದ ವಿರುದ್ಧ ಇದ್ದರೆ ಅದನ್ನು ತೆಗೆದುಕೊಳ್ಳುವುದಕ್ಕೆ ಏಕೆ ಹಿಂದೆ ಮುಂದು ನೋಡುತ್ತಿದ್ದೀರಿ? ಅದಕ್ಕೆ ಕಾರಣ ಏನು?

ಶ್ರೀ ಬಸವರಾಜ ರಾಯರೆಡ್ಡಿ : ನಾನೂ ಕೂಡ ಹಕ್ಕುಚ್ಯುತಿ ಸೂಚನೆಗೆ ಸಹಿ ಮಾಡಿ ಕೊಟ್ಟಿದ್ದೇನೆ. ದಯಮಾಡಿ ಅವಕಾಶ ಕೊಡಿ.

ಅಧ್ಯಕ್ಷರು : ಯಾರಾದರೂ ಒಬ್ಬರು ಪ್ರಸ್ತಾಪ ಮಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಈಗ ನಾವು, ಬಸವರಾಜ ರಾಯರೆಡ್ಡಿ, ಜೆ.ಸಿ. ಮಾಧುಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ರಮೇಶ್‌ಕುಮಾರ್‌ರವರು, ಮಾನ್ಯ ಖರ್ಗೆಯವರು, ಮಾನ್ಯ ವಾಟಾಳ್ ನಾಗರಾಜ್‌ರವರು, ಮಾನ್ಯ ರಾಜೇಂದ್ರನ್‌ರವರು, ನಾವೆಲ್ಲರೂ ಸಹಿ ಮಾಡಿ ತಮಗೆ ಏನೊಂದು ಹಕ್ಕುಚ್ಯುತಿ ಸೂಚನೆ ತಮಗೆ ಪ್ರಸ್ತಾಪ ಮಾಡಲು ಕೊಟ್ಟಿದ್ದೇವೆ. ಅದರ ಮುಖ್ಯ ಉದ್ದೇಶ ಇಷ್ಟೇ ಇರುವುದು. ನಮ್ಮ ಬೆಳಗಾವಿಯಲ್ಲಿ ನಡೆಯುವ ಅಧಿವೇಶನ ಏನಿದೆ, ಈ ಅಧಿವೇಶನ ಸರ್ಕಾರ ನಡೆಸುತ್ತಿದೆಯೇ ಅಥವಾ ಇದನ್ನು ಜಿಲ್ಲಾಡಳಿತ ನಡೆಸುತ್ತಿದೆಯೇ ಎನ್ನುವುದರ ಬಗ್ಗೆ ಸ್ಪಷ್ಟವಾದ ಉತ್ತರ ನಮಗೆ ಸರ್ಕಾರದಿಂದ ಬೇಕಾಗಿದೆ. ಏಕೆಂದರೆ, ಈ ಅಧಿವೇಶನ ಬೆಳಗಾಂನಲ್ಲಿ ನಡೆಯಬೇಕೆಂದು ತೀರ್ಮಾನವಾದ ನಂತರ ಅವೊತ್ತಿನಿಂದ ಮೊನ್ನೆಯವರೆಗೂ ಇಡೀ ಪತ್ರಿಕಾ ವರದಿಗಳನ್ನು ನೋಡಿದರೆ ಮತ್ತು ಇಲ್ಲಿರತಕ್ಕಂಥ ಜಿಲ್ಲಾಧಿಕಾರಿಗಳು ನಡೆಸಿರತಕ್ಕಂಥ ಪತ್ರ ವ್ಯವಹಾರಗಳನ್ನು ನೋಡಿದರೆ ಇಲ್ಲಿನ ಜಿಲ್ಲಾಡಳಿತ ಅಧಿವೇಶನ ನಡೆಸುತ್ತಿದೆ, ಸರ್ಕಾರ ನಡೆಸುತ್ತಿಲ್ಲ ಎಂಬ ಬಗ್ಗೆ ಸ್ಪಷ್ಟವಾದ ಅಭಿಪ್ರಾಯ ನಮಗೆಲ್ಲರಿಗೂ ಬಂದಿದೆ. ಇದು ಮೊದಲನೆಯದು. ಇದಕ್ಕೆ ಬೇಕಾದಂತಹ ದಾಖಲೆಗಳನ್ನು ನಾವು ನಿಮಗೆ ಕೊಟ್ಟಿದ್ದೇವೆ. ಅವರು ಬರೆದಿರುವಂತಹ ಪತ್ರಗಳು, ಮಾಡಿರುವ ಪತ್ರ ವ್ಯವಹಾರಗಳೆಲ್ಲವನ್ನೂ ಕೊಟ್ಟಿದ್ದೇವೆ.

ಎರಡನೆಯದಾಗಿ, ಬಹಳ ಮುಖ್ಯವಾಗಿ ಅಧಿವೇಶನವನ್ನು ಇಲ್ಲಿ ಕರೆಯಬೇಕಾದರೆ, ಇದೊಂದು ವಿಶೇಷವಾದ ಅಧಿವೇಶನ ಮತ್ತು ಬಹಳ ವರ್ಷಗಳಿಂದ ಬೆಳಗಾಂನಲ್ಲಿ ಅಧಿವೇಶನ ನಡೆಸಬೇಕೆಂಬುದು ಕರ್ನಾಟಕ ರಾಜ್ಯದ ಅದರಲ್ಲೂ ಪ್ರತ್ಯೇಕವಾಗಿ ಉತ್ತರ ಕರ್ನಾಟಕ ರಾಜ್ಯದ ಜನತೆಯ ಅಭಿಲಾಷೆಯಾಗಿತ್ತು. ಇಲ್ಲಿ ಅಧಿವೇಶನ ಕರೆಯುವ ಬಗ್ಗೆ ನಮ್ಮದೇನೂ ತಕರಾರು ಇಲ್ಲ,

ಯಾವುದೇ ಭಿನ್ನಾಭಿಪ್ರಾಯವಿಲ್ಲ. ಆದರೆ, ಈಗ ಅಧಿವೇಶನ ಕರೆದಂತಹ ವಿಧಾನ ಮತ್ತು ಇಲ್ಲಿ ತರಾತುರಿಯಲ್ಲಿ ನಡೆಸಿದಂತಹ ವ್ಯವಸ್ಥೆಗಳು ಮತ್ತು ಈ ಅಧಿವೇಶನಕ್ಕೆ ನಿರ್ದಿಷ್ಟವಾಗಿ ಯಾವುದೇ ಅಜೆಂಡಾ ಇಲ್ಲದೆ ಮಾಡಿರತಕ್ಕಂಥ ಈ ಅಧಿವೇಶನ ಹಾಗೂ ಈ ಅಧಿವೇಶನ ಕರೆಯುವುದಕ್ಕೆ ಮೊದಲು ವಿರೋಧ ಪಕ್ಷಗಳನ್ನು ಸರ್ಕಾರ ವಿಶ್ವಾಸಕ್ಕೆ ತೆಗೆದುಕೊಂಡು ಈ ಅಧಿವೇಶನದ ನಿರ್ಣಯ ಮಾಡಬೇಕಾಗಿತ್ತು. ಏಕೆಂದರೆ, ಇದು ವಿಶೇಷ ಅಧಿವೇಶನವಾಗಿದೆ. ತಾವೂ ಕೂಡ ವಿದೇಶದಲ್ಲಿದ್ದಿರಿ. ತಾವು ಅಲ್ಲಿದ್ದಂತಹ ಸಂದರ್ಭದಲ್ಲಿ ನಿಮ್ಮನ್ನು ಸಂಪರ್ಕಿಸಿರುವುದು, ಅದರ ಜೊತೆಗೆ ನೀವು 22ನೇ ತಾರೀಖು ವಿದೇಶದಿಂದ ವಾಪಸ್ಸು ಬಂದಿದ್ದು. ಇಲ್ಲಿ ನಿಮಗೆ ಒಂದು ಕ್ಯಾಂಪ್ ಆಫೀಸ್ ಇರಬೇಕು. ರೂಲ್ಸ್ ಪ್ರಕಾರ ಕ್ಯಾಂಪ್ ಆಫೀಸ್‌ವೊಂದನ್ನು ಮಾಡಬೇಕು. ಕ್ಯಾಂಪ್ ಆಫೀಸ್ ಮಾಡಿರುವುದರ ಬಗ್ಗೆ ಯಾವುದೇ ರೀತಿಯ ಮಾಹಿತಿಯನ್ನು ಸದಸ್ಯರುಗಳಿಗಾಗಲಿ ಅಥವಾ ವಿರೋಧ ಪಕ್ಷಗಳಿಗಾಗಲಿ ಕೊಟ್ಟಿಲ್ಲ. ಇದು ನಾವು ಯಾವ ಅಡ್ರೆಸ್‌ಗೆ, ಯಾರಿಗೆ ಕರೆಸ್ಪಾಂಡೆನ್ಸ್ ಮಾಡಬೇಕು? ನಾವೇನಾದರೂ ನೋಟೀಸ್ ಕೊಡಬೇಕಾದರೆ, ಯಾರಿಗೆ ಕೊಡಬೇಕು? ಯಾವ ಕಚೇರಿಗೆ ತಲುಪಿಸಬೇಕು ಎನ್ನುವ ಬಗ್ಗೆ ಯಾವುದೇ ರೀತಿಯಾದ ಮಾಹಿತಿ ನಮಗೆ ಇಲ್ಲ.

ಬಹಳ ಮುಖ್ಯವಾಗಿ ಇವೊತ್ತು ಅಧಿವೇಶನವನ್ನು ಇಲ್ಲಿ ನಡೆಸುತ್ತಿದ್ದೇವೆ. ಒಂದು ಅಜೆಂಡಾ ಇಲ್ಲ ಮತ್ತು ಪರಿಸ್ಥಿತಿ ಬಗ್ಗೆ ಹೇಳುವುದಾದರೆ ಎರಡು ರಾಜ್ಯಗಳ ಮಧ್ಯೆ ಇರುವ ಸಂಬಂಧದ ಬಗ್ಗೆ ಬಹಳ ಬಿಗುವಾದ ವಾತಾವರಣ ಇರತಕ್ಕಂಥ ಪರಿಸ್ಥಿತಿಯಲ್ಲಿ ಈ ಸಂದರ್ಭದಲ್ಲಿ ಇಲ್ಲಿ ಅಧಿವೇಶನ ನಡೆಸತಕ್ಕಂಥ ಅವಶ್ಯಕತೆ ಇತ್ತೇ? ನಾನು ಸಂದರ್ಭವನ್ನು ಹೇಳುತ್ತಿದ್ದೇನೆ. ಹಾಗಾಗಿ ನಾವು....

(ಅಡಚಣೆ)

ಶ್ರೀ ಎಂ.ಪಿ. ವೆಂಕಟೇಶ್ : ಇನ್ಯಾವ ಸಂದರ್ಭದಲ್ಲಿ ಮಾಡಬೇಕಾಗಿತ್ತು? ಇಂತಹ ಸಂದರ್ಭವೆಂದರೆ ಏನು ಅಂತಹ ಸಂದರ್ಭ?

ಒಬ್ಬ ಮಾನ್ಯ ಸದಸ್ಯರು : ಏನು ಹೆದರಿಕೊಂಡು ಹೋಗುವುದೇ? ಅವರಿಗೆ ಹೆದರಬೇಕೇ?

ಅಧ್ಯಕ್ಷರು : ತಾವು ಪ್ರಸ್ತಾಪ ಮಾಡಿದ್ದೀರಿ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಅವರು ಏನು ಮಾತನಾಡುತ್ತಾರೋ ಮಾತನಾಡಲಿ. ನಾವೂ ಮಾತನಾಡುತ್ತೇವೆ.

(ಅಡಚಣೆ)

ಒಬ್ಬ ಮಾನ್ಯ ಸದಸ್ಯರು : ಅಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರು ಪತ್ರಿಕಾಗೋಷ್ಠಿ ಮಾಡಿ ಅಧಿವೇಶನ ಮಾಡುವುದು ಸಧ್ಯಕ್ಕೆ ಬೇಡವೆಂದು ಹೇಳಿ. ಇದು ಬೇಕಾಗಿಲ್ಲವೆಂದು ಹೊರಗಡೆ ಹೋಗಿ ಹೇಳಲಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಧ್ಯಕ್ಷರೆ, ನಾವು ಶಾಸನಸಭೆ ಸದಸ್ಯರಾಗಿ ಇಲ್ಲಿ ಕುಳಿತುಕೊಳ್ಳಬೇಕೇ ಬೇಡವೇ? ಅಧಿವೇಶನ ಕರೆದದ್ದು ಸರಿ ಎಂದು ಎಲ್ಲರೂ ಹೇಳಿದರೆ, ಇವರ ಒಪ್ಪಿಗೆ ಕೇಳುತ್ತಾರೆ.

(ಅಡಚಣೆ)

ಅಧ್ಯಕ್ಷರು : ಎಷ್ಟು ಹೇಳಿದರೂ ಯಾರೂ ಕೇಳುವುದಿಲ್ಲ. ದಯಮಾಡಿ ಕುಳಿತುಕೊಳ್ಳಿ.

(ಅಡಚಣೆ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈ ರೀತಿ ಸದನ ನಡೆಸುವುದಕ್ಕಾಗುವುದಿಲ್ಲ. ನಾವು ಮೋಷನ್ ಮೂವ್ ಮಾಡಿದ್ದೇವೆ. ಉತ್ತರ ಕೊಡುವಾಗ ಅವರು ಏನು ಬೇಕಾದರೂ ಹೇಳಲಿ. ಮಾತನಾಡಲು ಎದ್ದು ನಿಂತಾಗ ಈ ರೀತಿ ಮಧ್ಯೆ ಅಡಚಣೆ ಮಾಡುವುದು ಸರಿಯಲ್ಲ.

ಅಧ್ಯಕ್ಷರು : ಶ್ರೀರಾಮರೆಡ್ಡಿಯವರೆ, ತಾವು ಏನು ಹೇಳಬೇಕೆಂದಿದ್ದೀರೋ, ಅದನ್ನು ಹೇಳಿ. ಮಾನ್ಯ ಸದಸ್ಯರು ಈ ರೀತಿ ಮಾಡುವುದು ಸರಿಯಲ್ಲ.

ಒಬ್ಬ ಮಾನ್ಯ ಸದಸ್ಯರು : ದಯಮಾಡಿ ನಾಲ್ಕು ಜನ ಯಾರನ್ನಾದರೂ ಸಸ್ಪೆಂಡ್ ಮಾಡಿ ಹೊರಗಡೆ ಕಳುಹಿಸಿ. ಆಗ ಎಲ್ಲವೂ ಸರಿಯಾಗುತ್ತದೆ. ನಾಲ್ಕು ಜನರನ್ನು ಎತ್ತಿ ಆಚೆ ಕಳಿಸಿ. ನೀವು ಕಠಿಣವಾದ ರೀತಿಯಲ್ಲಿ ಕ್ರಮ ಕೈಗೊಳ್ಳದಿದ್ದರೆ, ಅಧಿವೇಶನ ಸರಿಯಾದ ರೀತಿಯಲ್ಲಿ ನಡೆಯುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಲ್ಲಿ ಯಾರು ಸ್ಪೀಕರ್? ಹೇಳಿ. ನೀವೇ? ಅವರೇ?

(ಅಡಚಣೆ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾವು ನಮ್ಮ ಅಭಿಪ್ರಾಯಗಳನ್ನು ಹೇಳುತ್ತಿದ್ದೇವೆ. ಅವರೇನಾದರೂ ಮಾತನಾಡಿದರೆ ಅದಕ್ಕೆ ಸರ್ಕಾರ ಉತ್ತರ ಕೊಡಲಿ. ಅಥವಾ ಅದಕ್ಕೆ ಅವಕಾಶ ತೆಗೆದುಕೊಂಡು ಉತ್ತರ ಕೊಡಲಿ. ಆದರೆ, ಮಧ್ಯೆ ಮಾತನಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಎಂ.ಪಿ. ವೆಂಕಟೇಶ್ : ನಿಮಗೆ ಮಾತನಾಡಲು ಅಧ್ಯಕ್ಷರು ಅವಕಾಶ ಕೊಟ್ಟಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾವು ಮೋಷನ್ ಮೂವ್ ಮಾಡುತ್ತಿದ್ದೇವೆ.

ಶ್ರೀ ಬಸವರಾಜ ರಾಯರೆಡ್ಡಿ : ವೆಂಕಟೇಶ್‌ರವರು x x x ಏಕೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇದು ನಮ್ಮ ಹಕ್ಕು. ನಾವು ಮೋಷನ್ ಮೂವ್ ಮಾಡುತ್ತಿದ್ದೇವೆ. ಉತ್ತರ ಕೊಡುವಾಗ ಬೇಕಾದರೆ ವೆಂಕಟೇಶ್ ಅವರೇ ಸರ್ಕಾರದ ಪರವಾಗಿ ಕೊಡಲಿ, ನಮ್ಮದೇನೂ ತಕರಾರಿಲ್ಲ. ಆದರೆ, ಮಧ್ಯೆ ಎದ್ದು ನಿಂತು ಮಾತನಾಡುವುದು ಸರಿಯಲ್ಲ. ಸದನ ಈ ರೀತಿ ನಡೆಯುವುದಕ್ಕಾಗುವುದಿಲ್ಲ. ಯಾರಾದರೂ ಮಾತನಾಡುವಾಗಲೂ ಮಧ್ಯೆದಲ್ಲಿ ಎದ್ದು ನಿಂತು 'ಹೋ' ಎಂದು ಕೂಗಿದರೆ ಹೇಗೆ? ಇಲ್ಲಿ ಯಾರು ಮಾತನಾಡಬಾರದೆಂದೇ?

ಅಧ್ಯಕ್ಷರು : ಈಗ ಎಲ್ಲವೂ ಸುಸೂತ್ರವಾಗಿ ನಡೆಯಬೇಕು.

ಶ್ರೀ ಬಸವರಾಜ ರಾಯರೆಡ್ಡಿ : ಅಧ್ಯಕ್ಷರೆ, ನೀವು ವೆಂಕಟೇಶ್‌ರವರಿಗೆ ಹೇಳಬೇಕು. ಅವರು ಯಾವಾಗಲೂ x x x

ಅಧ್ಯಕ್ಷರು : ಯಾರಾದರೂ ನನ್ನ ಅನುಮತಿ ಪಡೆದು ಮಾತನಾಡಲು ಎದ್ದು ನಿಂತುಕೊಂಡಾಗ ಉಳಿದವರೆಲ್ಲರೂ ಎದ್ದು ನಿಂತುಕೊಂಡು ಕೂಗಾಡುವುದು ಸರಿಯಲ್ಲ. ಎಷ್ಟು ಸಲ ಹೇಳಿದರೂ ಕೂಡ ಮತ್ತೆ ಮತ್ತೆ ನೀವು ಅದನ್ನೇ ರಿಪೀಟ್ ಮಾಡಿದರೆ, ಏನು ಮಾಡುವುದಕ್ಕಾಗುತ್ತದೆ? ಇದು ಸರಿಯಲ್ಲ.

---

x ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಹಾಗೂ ಕಾನೂನು ಸಂಸದೀಯ ವ್ಯವಹಾರಗಳ ಸಚಿವರು): ನಿನ್ನೆ ಸದನದ ಕಾರ್ಯಕಲಾಗಳ ಸಲಹಾ ಸಮಿತಿಯ ಸಭೆಯಲ್ಲಿ ಈ ವಿಚಾರಗಳೆಲ್ಲವೂ ಚರ್ಚೆಯಾಯಿತು. ಬಹಳ ಮಧುರವಾದ, ಸೌಹಾರ್ದಯುತವಾದ ರೀತಿಯಲ್ಲಿ ಅಧಿವೇಶನವನ್ನು ನಡೆಸಿಕೊಂಡು ಹೋಗಬೇಕೆಂಬ ನಿರ್ಣಯ ಕೂಡ ಆಯಿತು. ನಿನ್ನೆ ಮಾತನಾಡಿದ ಪ್ರಕಾರ, ಹಕ್ಕುಚ್ಯುತಿ ವಿಷಯಕ್ಕೆ ಸಂಬಂಧಿಸಿದಂತೆ ತಾವು ನಿರ್ಣಯ ಕೊಡಿ. ನಾವು ಈಗಾಗಲೇ ವಿಷಯ ಪ್ರಸ್ತಾಪ ಮಾಡಿರುವುದರಿಂದ ಆ ವಿಚಾರವನ್ನು ಅಂತಿಮಗೊಳಿಸಬೇಕಾದ್ದು ಸರಿ ಎಂಬ ಮಾತು ವ್ಯಕ್ತವಾಗಿದ್ದರಿಂದ ಈ ಎಲ್ಲಾ ವಿವರಗಳ ಕುರಿತು ರೆಡ್ಡಿಯವರು ಚರ್ಚೆ ಮಾಡಬೇಕಾದ್ದಿಲ್ಲ. ಹಕ್ಕುಚ್ಯುತಿ ಪ್ರಸ್ತಾವ ತಮಗೆ ಕೊಟ್ಟಿದ್ದಾರೆ. ನಾವು ಅದರ ತಾಂತ್ರಿಕ ಕಾರಣಗಳನ್ನು ಎತ್ತುವುದಾಗಲಿ, ಮತ್ತೊಂದಾಗಲಿ, ಆ ಪ್ರಶ್ನೆಯೇ ಇಲ್ಲ. ತಾವು ಒಬ್ಬರು ಮೆನ್‌ಶನ್ ಮಾಡಿದ ನಂತರ ತಾವು ಅದರ ಬಗ್ಗೆ ನಿರ್ಣಯ ಕೊಟ್ಟರೆ ಅದು ಮುಕ್ತಾಯವಾಗುತ್ತದೆ. ಆದುದರಿಂದ, ಇದರ ಬಗ್ಗೆ ಎಲ್ಲರೂ ಮಾತನಾಡಬೇಕೆನ್ನುವುದಾದರೆ, ಮತ್ತೆ ನಿನ್ನೆ ಏನಾಯಿತೆಂಬುದು ತಮಗೆ ಗೊತ್ತಿದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಅಧ್ಯಕ್ಷರೆ, ನಾನು ತಮ್ಮಲ್ಲಿ ಇಷ್ಟೇ ಮನವಿ ಮಾಡಿಕೊಳ್ಳುವುದು. ಸದನದ ನಿಯಮಾವಳಿಗನುಸಾರವಾಗಿ ನಿಮ್ಮ ಅನುಮತಿ ಪಡೆದು ಒಬ್ಬ ಸದಸ್ಯರು ಎದ್ದು ನಿಂತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದಾಗ, ಅವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ವೇಳೆಗೆ ಬಹುಶಃ ಬೇರೆ ಅಭಿಪ್ರಾಯ ಹೊಂದಿರುವಂತಹವರು ಇದ್ದರೆ, ಅವರು ತಮ್ಮ ಅನುಮತಿ ಪಡೆದು ಪುನಃ ತಮ್ಮ ವಾದ ಮಂಡಿಸಬಹುದು.

ಒಬ್ಬ ಮಾನ್ಯ ಸದಸ್ಯರು : ಪ್ರತಿ ಸಲವೂ ನೀವೆಲ್ಲರೂ ಅನುಮತಿ ಪಡೆದೇ ಮಾತನಾಡಿದ್ದೀರಾ?

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಅವರು ಎದ್ದು ನಿಂತಿದ್ದಾಗಲೇ 'ದಢಾರ್' ಎಂದು ಎದ್ದು, ತಮ್ಮ ಮೇಲೆ ಬೀಳುವುದು ಸರಿಯಲ್ಲ. ತಾವೂ ಅದನ್ನು ಸಹಿಸಿಕೊಂಡರೆ, ನಮಗೇನು ಅನುಮಾನ ಬರುತ್ತದೆ ಗೊತ್ತೇ? ನಮ್ಮ ಅಭಿಪ್ರಾಯಗಳನ್ನು ನಾವೇ ಮುಕ್ತವಾಗಿ ಇಲ್ಲಿ ವ್ಯಕ್ತಪಡಿಸಬಹುದೇ? ಬೇಡವೇ? ತಮ್ಮಿಂದ ನಮಗೆ ರಕ್ಷಣೆ ಇದೆಯೇ? ಇಲ್ಲವೇ? ನಾವು ಒಂದೊಂದು ಸಲ ಮಾತನಾಡಲು ಎದ್ದು ನಿಂತಾಗಲು ಅವರು ಅರ್ಧರ್ಧ ಡಜನ್ ಸಂಖ್ಯೆಯಲ್ಲಿ ಈ ರೀತಿ ಎದ್ದು ನಿಂತರೆ, ಎಲ್ಲೋ ಒಂದು ಕಡೆ ಹೆದರಿ ನಾವು ಸುಮ್ಮನಿರಬೇಕಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು : ಹಾಗಾದರೆ, ಇನ್ನು ಮೇಲೆ ಎಲ್ಲರಿಗೂ ಅನುಮತಿ ಕೊಟ್ಟ ನಂತರವೇ ಮಾತನಾಡಬೇಕು. ಅನುಮತಿ ಕೊಡದೇ ಮಾತನಾಡಕೂಡದು.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ತಾವು ಅಧ್ಯಕ್ಷ ಸ್ಥಾನದಲ್ಲಿ ಕುಳಿತಿದ್ದೀರಿ. ಕಲಾಪಗಳನ್ನು ನಡೆಸಬೇಕಾಗುತ್ತದೆ. ಬೆಂಗಳೂರು ಬಿಟ್ಟು ಬಹಳ ದೂರ ಪ್ರಯಾಣ ಮಾಡಿದ್ದೇವೆ. ಅನೇಕ ಜನರು ನಮ್ಮ ಮಾಲೀಕರು ಯಾರಿದ್ದಾರೆ, ನಮ್ಮ ನಾಯಕರು, ಅವರು ನಮ್ಮ ಯೋಗ್ಯತೆ ಪರೀಕ್ಷಿಸುವುದಕ್ಕೆ

---

x ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ನಮ್ಮನ್ನು ಒಳಗೆ ಕಳುಹಿಸಿರುವವರು. ಅವರು ಇಲ್ಲಿ ಬಂದು ಕುಳಿತಿದ್ದಾರೆ. ನಿಯಮಾವಳಿಗೆ ಸ್ವಲ್ಪ ಗೌರವ ಕೊಟ್ಟು ನಾಲ್ಕೈದು ದಿವಸಗಳ ಕಾಲ ಅವರು ನಡೆದುಕೊಂಡರೆ, ಅನಂತರ, ಅವರ ಖುಷಿಗೆ ತಕ್ಕಂತೆ ನಡೆದುಕೊಳ್ಳಲಿ. ಇದು ಸರಿ ಹೋಗುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು : ನಾವು ಒಳ್ಳೆಯ ಮಾತನಾಡುತ್ತೇವೆ. ಅವರೂ ಹಾಗೇ ನಡೆದುಕೊಳ್ಳಲಿ. ಅವರು ವಿಧಾನಸಭೆಯಲ್ಲಿ ಹೇಗೆ ನಡೆದುಕೊಳ್ಳುತ್ತಾರೆಂಬುದು ಗೊತ್ತಿದೆ.

ಮಾನ್ಯ ಸದಸ್ಯರು : ಹಿಂದಿನ ಸಭೆಯಲ್ಲಿ ಅವರು ಮಾಡಿದ್ದೆಲ್ಲವನ್ನೂ ನೋಡಿದ್ದೇವೆ.

ಶ್ರಿ ಕೆ.ಆರ್. ರಮೇಶ್‌ಕುಮಾರ್ : ಆಯಿತು, ಬಹಳ ಸಂತೋಷ. ನಮಗೆ ಯಾರ ಶಿಫಾರಸ್ಸೂ ಬೇಕಾಗಿಲ್ಲ. ಇವರ್‍ಯಾರಿಂದಲೂ ಪದಕ ಸ್ವೀಕರಿಸುವುದಕ್ಕೆ ನಾವು ಬಂದಿಲ್ಲ. ನಮ್ಮ ಯೋಗ್ಯತಾನುಸಾರ ನಮಗೆ ಅವಕಾಶ ಸಿಕ್ಕಿದಾಗ ಕೆಲಸ ಮಾಡಿದ್ದೇವೆ. ತಮ್ಮಲ್ಲಿ ನಮ್ಮ ಮನವಿ ಏನೆಂದರೆ, ಸದನ ನಡೆಸುವ ಜವಾಬ್ದಾರಿ ತಮ್ಮ ಹೆಗಲ ಮೇಲಿದೆ. ದಯಮಾಡಿ ಈ ರೀತಿ ಸದಸ್ಯರ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ನಿರ್ಬಂಧಪಡಿಸುವುದು ಇದೆಯೆಲ್ಲಾ, ಇದು ನಮ್ಮ ಸದನದ ಗೌರವಕ್ಕೆ ಮೆರುಗು ತರುವುದಿಲ್ಲ. ದಯಮಾಡಿ ಈ ಅಂಶವನ್ನು ನೀವೂ ಗಮನದಲ್ಲಿಟ್ಟುಕೊಳ್ಳಬೇಕು. ಇಲ್ಲದೇ ಹೋದರೆ, ಇದರ ಪೂರ್ಣ ಅಪಕೀರ್ತಿಗೆ ತಾವು ಹೊಣೆಯಾಗುತ್ತೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಒಂದು ನಿಮಿಷ. ನಾವು ಇಲ್ಲಿ ಮಾಡುತ್ತಿರುವುದು ತಪ್ಪಾದಲ್ಲಿ, ನಮ್ಮನ್ನು ಆಚೆ ಕಳುಹಿಸಿ. ನಾವು ಹೋಗುವುದಕ್ಕೆ ತಯಾರಿದ್ದೇವೆ. ಆದರೆ, ಬೇಜವಾಬ್ದಾರಿಯಿಂದ ವರ್ತಿಸುವುದಕ್ಕೆ ನಾವು ಇಲ್ಲಿಗೆ ಬಂದಿಲ್ಲ. ಮತ್ತೆ ಏನು ಸಭೆ ನಡೆಸುತ್ತಿದ್ದೀರಿ? ನಿನ್ನೆ ತಾವು ಏನು ಹೇಳಿದಿರಿ? ನಾಳೆ ಬೆಳಿಗ್ಗೆ ಪ್ರಸ್ತಾಪಿಸುವುದಕ್ಕೆ ನಿಮಗೆ ಅವಕಾಶ ಕೊಡುತ್ತೇನೆ, ಅನಂತರ ರೂಲಿಂಗ್ ಕೊಡುತ್ತೇನೆ ಎಂದಿರಿ. ನಾವೂ ಅಷ್ಟೇ ಸೌಜನ್ಯದಿಂದ ಒಪ್ಪಿದ್ದೇವೆ. ಸರ್, ಮೋಷನ್ ಮೂವ್ ಮಾಡಿರುವುದರಿಂದ ಅದನ್ನು ವಿತ್‌ಡ್ರಾ ಮಾಡುವುದಕ್ಕೆ ಬರುವುದಿಲ್ಲ. ವಿಷಯವನ್ನು ರೈಸ್ ಮಾಡುವುದಕ್ಕೂ ಈ ಸಭೆಯಲ್ಲಿ ಬಿಡುವುದಿಲ್ಲವೆಂದರೆ ಹೇಗೆ? ತಾವು ಹೇಳಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈಗ ನಾವು ನಮ್ಮ ಅಭಿಪ್ರಾಯ ಹೇಳಬೇಕೋ ಅಥವಾ ಅವರ ಅಭಿಪ್ರಾಯವನ್ನು ನಾವು ಹೇಳಬೇಕೋ? ಎರಡರಲ್ಲಿ ಒಂದನ್ನು ತೀರ್ಮಾನ ಮಾಡಿ. ಅವರ ಅಭಿಪ್ರಾಯದ ಪ್ರಕಾರ ನಾವು ಮಾತನಾಡುವುದಾದರೆ, ನಾವು ಇಲ್ಲಿ ಕುಳಿತುಕೊಳ್ಳುವ ಅವಶ್ಯಕತೆಯೇ ಇಲ್ಲ.

(ಮಾನ್ಯ ಸದಸ್ಯರಾದ ಶ್ರೀ ಎಂ.ಪಿ. ವೆಂಕಟೇಶ್‌ರವರು ಮಧ್ಯೆ ಎದ್ದು ನಿಂತು ಮಾತನಾಡುತ್ತಿದ್ದರು)

ಶ್ರೀ ಬಸವರಾಜ ರಾಯರೆಡ್ಡಿ : ಮತ್ತೆ ಮತ್ತೆ ಆ ತರಹ XX ಬರಬಾರದು.

(ಅಡಚಣೆ)

ಅಧ್ಯಕ್ಷರು : ದಯಮಾಡಿ ಕೇಳಿ. ಏಕೆ ಈ ರೀತಿ ಮಾಡುತ್ತೀರಿ? ಸುಮ್ಮನೆ ಈ ರೀತಿ ಮಾತನಾಡಿದರೆ ಹೇಗೆ?

ಶ್ರೀ ಎಂ.ಪಿ. ವೆಂಕಟೇಶ್ : ಅವರು ಸದನದಲ್ಲಿ ಗೌರವಯುತವಾಗಿ ನಡೆದುಕೊಂಡರೆ ಸಾಕು.

ಅಧ್ಯಕ್ಷರು : ಅವರು ಪ್ರಿವಿಲೇಜ್ ನೋಟೀಸ್ ಕೊಟ್ಟಿದ್ದರೆ, ಅದನ್ನು ಪ್ರಸ್ತಾಪ ಮಾಡುತ್ತಾರೆ. ಅವರು ಏನು ಹೇಳುತ್ತಾರೆಂಬುದನ್ನು ನೀವು ಕೇಳಬೇಕು.

ಶ್ರೀ ಹೆಚ್.ಡಿ. ಬಸವರಾಜು : ಇಲ್ಲಿ ನ್ಯಾಯೋಚಿತವಾಗಿ ಅವರು ಏನು ಪ್ರಸ್ತಾವನೆ ಬೇಕಾದರೂ ಮಾಡಲಿ, ಬೇಡವೆಂದು ಹೇಳುವುದಿಲ್ಲ. ಆದರೆ, ಅವರೂ ಮಂತ್ರಿಗಳಾಗಿ ಕೆಲಸ ಮಾಡಿದವರು. 'ಗೂಳಿಗಳ ತರಹ" ಎಂದರೆ ಏನರ್ಥ? ನಮ್ಮನ್ನು ಯಾವ ಮಟ್ಟಕ್ಕೆ ಎಳೆಯುತ್ತಿದ್ದಾರೆ?

(ಅಡಚಣೆ)

An Hon Member : He is using an un parliamentary word.

ಅಧ್ಯಕ್ಷರು : ನಾನು ಮಾನ್ಯ ಶ್ರೀರಾಮರೆಡ್ಡಿಯವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ.

ಶ್ರೀ ಹೆಚ್.ಡಿ. ಬಸವರಾಜ್ : ಕಡತದಿಂದ ಆ ಪದ ಹೋಗಬೇಕು.

ಶ್ರೀ ಎಂ.ಪಿ. ವೆಂಕಟೇಶ್ : ಕಡತದಿಂದ ಆ ಪದವನ್ನು ತೆಗೆಯಬೇಕು.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ x ಏನೆಂದು ಗೊತ್ತೇ? ದುಡಿಯುವ ಎತ್ತಿಗೆ ಶಿಸ್ತು ಇರುತ್ತದೆ. ದುಡಿಯುವ ಎತ್ತು ಸರಿಯಾಗಿ ದುಡಿಯುತ್ತದೆ. ಆದರೆ ಈ xx ಏನು xxx

ಶ್ರೀ ಎಂ.ಪಿ. ವೆಂಕಟೇಶ್ : xx ಕಡತದಿಂದ ತೆಗೆಸಿ ಹಾಕಬೇಕು.

(ಅಡಚಣೆ)

ಒಬ್ಬ ಮಾನ್ಯ ಸದಸ್ಯರು : ಅವರೆಲ್ಲಾ x ರಾಯರೆಡ್ಡಿ x

(ಅಡಚಣೆ)

ಶ್ರೀ ಹೆಚ್.ಡಿ. ಬಸವರಾಜ್ : ಗೌರವಾನ್ವಿತ ಸದಸ್ಯರಿಗೆ ಈ ರೀತಿ ಹೇಳಿದರೆ ಹೇಗೆ? ಅದನ್ನು ಕಡತದಿಂದ ತೆಗೆದು ಹಾಕಬೇಕು.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಹೆಚ್.ಡಿ. ಬಸವರಾಜ', ಶ್ರೀ ಎಂ.ಕೆ. ಪಟ್ಟಣಶೆಟ್ಟಿ ಹಾಗೂ ಶ್ರೀ ಹೆಚ್.ಕೆ. ಕುಮಾರಸ್ವಾಮಿಯವರು ಸದನದ ಬಾವಿಯಲ್ಲಿ ಧರಣಿ ನಿರತರಾದರು.)

ಅಧ್ಯಕ್ಷರು : ದಯಮಾಡಿ ನಿಮ್ಮ ನಿಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳಿ.

---

x ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

(ಅಡಚಣೆ)

(ಈ ಹಂತದಲ್ಲಿ ಧರಣಿ ನಿರತ ಮಾನ್ಯ ಸದಸ್ಯರು ಧರಣಿಯನ್ನು ಹಿಂತೆಗೆದುಕೊಂಡು ತಮ್ಮ ತಮ್ಮ ಸ್ಥಾನಗಳಿಗೆ ಹಿಂದಿರುಗಿದರು)

ಅಧ್ಯಕ್ಷರು : ಅವರು ಏನು ಹೇಳಬೇಕೋ ಅದನ್ನು ಹೇಳಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ : ಈ ತರಹದ ಪದ ಬಳಕೆ ಮಾಡುವುದರಿಂದ ಸದನದ ಗೌರವ ಹೆಚ್ಚಾಗುವುದಿಲ್ಲ. ಹೇಳಬೇಕಾಗಿರತಕ್ಕಂಥದ್ದನ್ನು ತಾವು ಹೇಳಬೇಕಾಗುತ್ತದೆ. ಬೇರೆಯವರಿಗೆ ಪ್ರಚೋದನಾತ್ಮಕವಾಗಿ ಮತ್ತೊಂದು ಪದ ಬಳಸಲಿಕ್ಕೆ ಅದು ಅವಕಾಶ ಕಲ್ಪಿಸಿಕೊಟ್ಟಂತಾಗಬಾರದು. ಮಾನ್ಯ ರಾಯರೆಡ್ಡಿಯವರು ಹಿರಿಯ ಸದಸ್ಯರಾಗಿದ್ದಾರೆ. ಬಹಳ ವರ್ಷಗಳಿಂದ ಈ ಸದನದಲ್ಲಿ ಕೆಲಸ ಮಾಡಿದ್ದಾರೆ. ಲೋಕಸಭಾ ಸದಸ್ಯರಾಗಿ ಸಹ ಕೆಲಸ ಮಾಡಿದ್ದಾರೆ. ಇಂತಹ ಪದವನ್ನು ಅವರು ದಯಮಾಡಿ ಬಳಸಬಾರದು. ಅವರು ಒಪ್ಪುವುದಾಗಿದ್ದರೆ, ಆ ಪದದ ಬಗ್ಗೆ ಅವರು ವಿಷಾದವನ್ನು ವ್ಯಕ್ತಪಡಿಸಬಹುದು. ಆ ಪದ ಬಳಸಿದ ಬಗ್ಗೆ ವಿಷಾದ ಅಭಿವ್ಯಕ್ತಗೊಳಿಸುವುದಕ್ಕೆ ಮಾನ್ಯ ಸದಸ್ಯರಿಗೆ ಮುಜುಗರ ಆಗುವುದಾದರೆ, ಮಾನ್ಯ ಅಧ್ಯಕ್ಷರು ಆ ಪದವನ್ನು ಕಡತದಿಂದ ತೆಗೆಸಿ ಹಾಕಬಹುದು. ನಮ್ಮ ಕಡೆಯ ಸದಸ್ಯರು ಕೂಡ x ಎನ್ನುವಂತಹ ಪದವನ್ನು ಬಳಸಿದ್ದರೆ, ಅದು ಕಡತದಲ್ಲಿ ಹೋಗಿದ್ದರೆ, ಅದನ್ನೂ ಕೂಡ ಕಡತದಿಂದ ತೆಗೆದು ಹಾಕಬೇಕೆಂದು ನಾನು ಮಾನ್ಯ ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ಎರಡನ್ನೂ ಕೂಡ ಕಡತದಿಂದ ತೆಗೆದು ಹಾಕಬೇಕು.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಂಸದೀಯ ಸಚಿವರು ದಯಮಾಡಿ ನಾನು ಹೇಳಿದ್ದನ್ನು ಅರ್ಥ ಮಾಡಿಕೊಳ್ಳಬೇಕು. ಕಡತವನ್ನು ತರಿಸಿ ನಾನೇನು ಮಾತನಾಡಿದ್ದೇನೆ ಎಂಬುದನ್ನು ನೋಡಿ. ನಾನು ಅವರನ್ನು x ನುಗ್ಗುತ್ತಾರೆ ಎಂದು ಹೇಳಿದ್ದೇನೆಯೇ ವಿನಃ ಅವರನ್ನು x ಎಂದು ಕರೆದಿಲ್ಲ.

ಒಬ್ಬ ಮಾನ್ಯ ಸದಸ್ಯರು : xx ಎಂದಿರುವುದು ಮತ್ತು xx ಎಂದಿರುವುದು ಎರಡೂ ಕಡತದಲ್ಲಿ ಇರಲಿ ಬಿಡಿ.

(ಅಡಚಣೆ)

ಶ್ರೀ ಬಸವರಾಜ ರಾಯರೆಡ್ಡಿ : ನಾನು ಮಾನ್ಯ ವೆಂಕಟೇಶರವರನ್ನು x ಎಂದು ಕರೆಯಲಿಲ್ಲ. x ಎಂದು ಹೇಳಿದೆ ಅಷ್ಟೇ.

ಒಬ್ಬ ಮಾನ್ಯ ಸದಸ್ಯರು : ನಾವೂ ಸಹ x ತರಹ ಎಂದು ಹೇಳಬಹುದು.

Sri Basavaraja Rayareddy: I dont care. ಇಂತದ್ದಕ್ಕೆ ನಾನು care ಮಾಡುವುದಿಲ್ಲ.

ಶ್ರೀ ಹೆಚ್. ಆಂಜನೇಯ : ನಾವು x ಅಲ್ಲ, ನಾವು ಮನುಷ್ಯರ ತರಹ ಇದ್ದೇವೆ.

---

x ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

(ಅಡಚಣೆ)

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಸಭೆ ಶಿಸ್ತಿನಿಂದ ಹಾಗೂ ನಿಯಮಾವಳಿಯ ವ್ಯಾಪ್ತಿಯಲ್ಲಿ ನಡೆಯಬೇಕೆಂಬುದಷ್ಟೇ ನನ್ನ ಉದ್ದೇಶವಾಗಿತ್ತು. ಯಾರನ್ನೂ ದೂಷಿಸುವ ಉದ್ದೇಶ ನನ್ನದಾಗಿರಲಿಲ್ಲ. ಮಾನ್ಯ ಸದಸ್ಯರಿಗೆ ಸರಿಯಾಗಿ ವರ್ತನೆ ಮಾಡಲಿಕ್ಕೆ ಮಾನ್ಯ ಅಧ್ಯಕ್ಷರು ಹೇಳಬೇಕು. ಬೇರೆ ಸದಸ್ಯರು ಮಾತನಾಡುವಂತಹ ಸಂದರ್ಭದಲ್ಲಿ ಅವರು ಸರಿಯಾಗಿ ಮಾತನಾಡಲಿ. ನಾನೇನೂ ಮಾನ್ಯ ವೆಂಕಟೇಶ್‌ರವರನ್ನು x ಎಂದು ಕರೆಯಲಿಲ್ಲ ಎಂಬುದನ್ನು ನಾನಿಲ್ಲಿ ಸ್ಪಷ್ಟಪಡಿಸುತ್ತೇನೆ. ಅವರ ಬಗ್ಗೆ ನನಗೆ ಗೌರವ ಇದೆ. ನಾನು ಅವರಿಗೆ x ವರ್ತಿಸಬೇಡಿ ಎಂದಷ್ಟೇ ಹೇಳಿದೆ. ದಯಮಾಡಿ ತಾವು ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಿ.

ಅಧ್ಯಕ್ಷರು : ಮಾನ್ಯ ರಾಯರೆಡ್ಡಿಯವರು ಬಳಸಿರತಕ್ಕಂಥ ಶಬ್ದ ಅಥವಾ ಬೇರೆಯವರೇನಾದರೂ ಹೇಳಿರುವ ಶಬ್ದದ ಬಗ್ಗೆ ನಾನು ಪರಿಶೀಲಿಸಿ ಅದನ್ನು ಕಡತದಿಂದ ತೆಗೆಸಿ ಹಾಕುತ್ತೇನೆ.

(ಅಡಚಣೆ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. ಇಲ್ಲಿ ಸರಿಯಾಗಿ ಕೇಳುವುದಿಲ್ಲ ನಿಜ. ಹಾಗೆಂದು ಎಲ್ಲಾ ಸದಸ್ಯರು ತಮಗೆ ಇಷ್ಟ ಬಂದ ಹಾಗೆ ಎದ್ದು ನಿಂತು ಮಾತನಾಡುವುದು ಸರಿಯಲ್ಲ. ಯಾವ ಸದಸ್ಯರಿಗೂ ಇದು ಗೌರವ ತರುವುದಿಲ್ಲ. ಜನ ನೋಡುತ್ತಿದ್ದಾರೆ, ನಿಮಗೆ ಇಷ್ಟ ಬಂದ ರೀತಿಯಲ್ಲಿ ನಡೆದುಕೊಳ್ಳುವುದು ಸರಿಯಲ್ಲ. ಇದು ನಿಜ. ಇಲ್ಲಿ ಮೈಕ್ ಸರಿಯಾಗಿ ಕೇಳುವುದಿಲ್ಲ, ಹಾಗೂ ಇನ್ನಿತರ ಕೆಲವು ತೊಂದರೆಗಳಿವೆ. ಇದನ್ನು ಪ್ರತಿಯೊಬ್ಬ ಜನ ಪ್ರತಿನಿಧಿಗಳಾದವರು ಅರ್ಥ ಮಾಡಿಕೊಂಡು, ಸರಿಯಾದ ರೀತಿಯಲ್ಲಿ behave ಮಾಡಬೇಕಾಗುತ್ತದೆ. ಈ ತರಹ ಆದರೆ ಹೇಗೆ? ಮಾನ್ಯ ಶ್ರೀರಾಮರೆಡ್ಡಿಯವರೇ, ತಾವು ಮಾತನಾಡುವುದನ್ನು ಮುಂದುವರೆಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಕಡೆಯದಾಗಿ ಒಂದು ವಿಚಾರವನ್ನು ಪ್ರಸ್ತಾಪ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ. ನಾನು ಪ್ರಾರಂಭದಲ್ಲೇ ಹೇಳಿದೆ. ಸರ್ಕಾರ ಅಥವಾ ಮಾನ್ಯ ರಾಜ್ಯಪಾಲರಿಗೆ ಮಾತ್ರ ಈ ಸದನವನ್ನು ಕರೆಯಲಿಕ್ಕೆ ಅಧಿಕಾರ ಇದೆ. ಆದರೆ ಇಲ್ಲಿ ದಿನಾಂಕ 19.09.2006 ರಂದು ಬೆಳಗಾವಿ ಜಿಲ್ಲಾಧಿಕಾರಿಗಳಾದ ಶ್ರೀಮತಿ ಶಾಲಿನಿ ರಜನೀಶ್‌ರವರು ವಿಧಾನಸಭೆಯ ಎಲ್ಲಾ ಸದಸ್ಯರುಗಳಿಗೆ ಪತ್ರವನ್ನು ಬರೆದು ಅಧಿವೇಶನದ ಬಗ್ಗೆ ಮಾಹಿತಿಯನ್ನು ನೀಡುತ್ತಾ ಪತ್ರವನ್ನು ಈ ರೀತಿ ಪ್ರಾರಂಭಿಸಿರುತ್ತಾರೆ. ಘನ ಕರ್ನಾಟಕ ಸರ್ಕಾರದ ನಿರ್ಣಯದಂತೆ ದಿನಾಂಕ 25.09.2006 ರಿಂದ 29.09.2006 ರವರೆಗೆ ಬೆಳಗಾವಿಯಲ್ಲಿ ನಡೆಯಲಿರುವ ವಿಧಾನ ಮಂಡಲ ಐತಿಹಾಸಿಕ ವಿಶೇಷ ಅಧಿವೇಶನದಲ್ಲಿ ಭಾಗವಹಿಸಲು ಆಹ್ವಾನಿಸುತ್ತಾ ಇದಕ್ಕಾಗಿ ಮಾಡಲಾಗಿರುವ ವ್ಯವಸ್ಥೆಗಳ ಬಗ್ಗೆ ತಿಳಿಸಿರುತ್ತಾರೆ. ಇವರು ಸಂವಿಧಾನದ ಅನುಚ್ಛೇದ 187ರಂತೆ ನೇಮಕವಾಗಿರುವುದಿಲ್ಲ. ಇದು ಸಂವಿಧಾನಕ್ಕೆ ಎಸಗಿರುವ ಅಪಚಾರ, ರಾಜ್ಯಪಾಲರಿಗೆ ಮಾಡಿರುವ

---

x ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಅವಮಾನ ಹಾಗೂ ಸಭಾಧ್ಯಕ್ಷರಿಗೆ ಹಾಗೂ ವಿಧಾನಮಂಡಲದ ಸಚಿವಾಲಯಕ್ಕೆ ಇರುವ ಅಧಿಕಾರವನ್ನು ಪೂರ್ಣವಾಗಿ ಕಸಿದುಕೊಂಡು ಸಾರ್ವಭೌಮತ್ವವನ್ನು ತೋರಿಸಿ ಸದನಕ್ಕೆ ಹಾಗೂ ಮಾನ್ಯ ಸದಸ್ಯರುಗಳ ಘನತೆಗೆ ಕುಂದು ತರುವಂತಾಗಿದೆ. ಈ ಅಧಿವೇಶನವನ್ನು ಅಧಿಕೃತವಾಗಿ ಕರೆಯುವ ಅಧಿಕಾರ ನಿಯಮ 174(1)ರ ಪ್ರಕಾರ ಮಾನ್ಯ ರಾಜ್ಯಪಾಲರಿಗೆ ಮಾತ್ರ ಇರುತ್ತದೆ. ಇದು ಸರ್ಕಾರದ ಒಂದು ಕಾರ್ಯಕ್ರಮವೆಂದು ಬಿಂಬಿಸುವಂತೆ ಪತ್ರವನ್ನು ಬರೆದಿರುವುದು ಹಕ್ಕುಚ್ಯುತಿಯಾಗಿರುತ್ತದೆ. ಆದ್ದರಿಂದ ಇದು ಹಕ್ಕುಚ್ಯುತಿಯಾಗುತ್ತದೆ ಎಂದು ನಾನು ಸ್ಪಷ್ಟವಾಗಿ ಹೇಳಿ, ಇದಕ್ಕೆ ತಾವು ರೂಲಿಂಗ್ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ,......

ಅಧ್ಯಕ್ಷರು : ಈಗಾಗಲೇ ಅವರು ಪ್ರಸ್ತಾಪ ಮಾಡಿದ್ದಾರೆ. ಮತ್ತೆ ತಾವೂ ಪ್ರಸ್ತಾಪಿಸುವುದು ಬೇಡ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಸದನದ ವೇಳೆ ಅನಾವಶ್ಯಕವಾಗಿ ಹಾಳಾಗುತ್ತಿದೆ.

ಅಧ್ಯಕ್ಷರು : ಎಲ್ಲರೂ ತಮಗೆ ಇಷ್ಟ ಬಂದ ರೀತಿ ನಡೆದುಕೊಳ್ಳುವುದಾದರೆ, ನಾನೇನೂ ಮಾಡಲಿಕ್ಕಾಗುವುದಿಲ್ಲ. ಈಗಾಗಲೇ ಅವರು ಪ್ರಸ್ತಾಪ ಮಾಡಿದ್ದಾರೆ. ಎಲ್ಲರೂ ಮತ್ತೆ ಮತ್ತೆ ಅದನ್ನೇ ಪ್ರಸ್ತಾಪ ಮಾಡುವ ಅಗತ್ಯ ಇಲ್ಲ. ನಿನ್ನೆ Business Advisory Committee ಯಲ್ಲಿ ಏನು ತೀರ್ಮಾನವಾಯಿತು. ಒಬ್ಬರು ಪ್ರಸ್ತಾಪ ಮಾಡುವುದಕ್ಕೆ ಮಾತ್ರ ಅವಕಾಶ ಕೊಡುತ್ತೇನೆ ಎಂದು ನಿರ್ಧಾರವಾಗಿತ್ತು. ತಾವು ದಯಮಾಡಿ ಇದನ್ನು ಅರ್ಥ ಮಾಡಿಕೊಳ್ಳಬೇಕು. ಬೇರೆ ಬೇರೆ ಸದಸ್ಯರು ಇತರೆ ಬೇರೆ ಬೇರೆ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೋರಿದ್ದಾರೆ. ಈಗಾಗಲೇ ಅವರು ಪ್ರಸ್ತಾಪ ಮಾಡಿದ್ದಾರಲ್ಲಾ ಅಷ್ಟು ಸಾಕು.

ಶ್ರೀ ಆರಗ ಜ್ಞಾನೇಂದ್ರ : ಜಿಲ್ಲಾಧಿಕಾರಿಗಳು ಕಾರ್ಯಕ್ರಮ ಇದೆ ಎಂದು ಗೌರವಯುತವಾಗಿ ಒಂದು ಪತ್ರ ಬರೆದರೆ, ಇದು ತಪ್ಪು, ಇದು ಹಕ್ಕುಚ್ಯುತಿಯಾಗುತ್ತದೆ ಎಂದು ವಿನಾಕಾರಣ ಸಭೆಯ ಸಮಯವನ್ನು ಹಾಳು ಮಾಡುತ್ತಿದ್ದಾರೆ. ಜಿಲ್ಲಾಧಿಕಾರಿಗಳು ಗೌರವ ಕೊಟ್ಟು ಪತ್ರ ಬರೆದರೆ, ಅದನ್ನೇ ಒಂದು ದೊಡ್ಡ issue ಮಾಡುವಂತಹ ಅವಶ್ಯಕತೆ ಇಲ್ಲವೆಂದು ನನಗನ್ನಿಸುತ್ತದೆ. ಇದರಿಂದ ನಮ್ಮ ಸದಸ್ಯರ ಹಕ್ಕುಚ್ಯುತಿ ಹೇಗೆ ಆಗುತ್ತದೆ? ಸರ್ಕಾರದ ನಿರ್ಧಾರ ಮಾಡಿದಂತೆ ನಿಮ್ಮನ್ನು ಸ್ವಾಗತ ಮಾಡುತ್ತಿದ್ದೇನೆ ಎಂಬಂತಹ ಶಬ್ದಗಳನ್ನು ಅವರು ಪ್ರಯೋಗ ಮಾಡಿದ್ದಾರೆ. ಅನವಶ್ಯಕವಾಗಿ ಸದನದ ಸಮಯವನ್ನು ಹಾಳು ಮಾಡುವಂತಹ ಅವಶ್ಯಕತೆ ಇಲ್ಲ. ತಾವು ಈ ಬಗ್ಗೆ ರೂಲಿಂಗ್ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ತಾವು ರೂಲಿಂಗ್ ಕೊಡಬೇಕೆಂದೇ ನಾವೂ ಕೂಡ ಕೇಳುತ್ತಿದ್ದೇವೆ. ನಮ್ಮ ವಾದವನ್ನು ಕೇಳಿ ರೂಲಿಂಗ್ ಎಂದಷ್ಟೇ ನಾವು ಕೇಳುತ್ತಿದ್ದೇವೆ.

ಅಧ್ಯಕ್ಷರು : ನಾನು ಆಗಲೇ ಕೇಳಿದ್ದೇನೆ. ಮಾನ್ಯ ಶ್ರೀರಾಮರೆಡ್ಡಿಯವರು ಎಲ್ಲವನ್ನೂ ಹೇಳಿದ್ದಾರೆ.............

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ತಾವು ಕರೆಯಬೇಕಾಗಿತ್ತು. ತಾವೇ ಮಾಡಿರುವ ಶಾಸನ 220ರ ನಿಯಮ ಇಟ್ಟುಕೊಂಡು ನಾವು ಮಾತನಾಡುತ್ತಿದ್ದೇವೆ. ದಯಮಾಡಿ ಅದಕ್ಕೆ ಅವಕಾಶ ಕೊಡಿ. ಇಲ್ಲಿ ವಿಧಾನ ಸಭೆ ಅಧಿವೇಶನ ನಡೆಯುವುದನ್ನು ಎಲ್ಲರಿಗಿಂತ ಹೆಚ್ಚಾಗಿ ಸ್ವಾಗತ ಮಾಡುವವರು ನಾವೇ. ಅದರಲ್ಲೇನೂ ಎರಡು ಅಭಿಪ್ರಾಯವಿಲ್ಲ. ಇಲ್ಲಿ ಶಾಸನಸಭೆ ನಡೆಸಬೇಕು ಎಂದು ನಿರ್ಧರಿಸಿರುವುದನ್ನು ನಾವೆಲ್ಲರೂ ಸ್ವಾಗತಿಸುತ್ತೇವೆ. ಆದರೆ ಶಾಸನಸಭೆ ಹೇಗೆ ನಡೆಯಬೇಕು? ಯಾರು ನಡೆಸಬೇಕು? ಎಲ್ಲಿ ನಡೆಸಬೇಕು ಎಂಬುದಕ್ಕೆ ಕಾನೂನು ಇದೆ. ನಿಮಗೆ ಇಷ್ಟ ಬಂದಂತೆ ನಡೆಸಿಕೊಂಡು ವಿಜಯೋತ್ಸಾಹ ಆಚರಣೆ ಮಾಡಲಿಕ್ಕೆ ಬಂದಿದ್ದೀರಾ ಅಥವಾ ನೀವು ಯಾವುದಾದರೂ ಪಕ್ಷದ ರಾಜಕೀಯ ಮಾಡಲಿಕ್ಕೆ ಬಂದಿದ್ದೀರಾ? ನಾನು ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರಬಯಸುತ್ತೇನೆ.

ಅಧ್ಯಕ್ಷರು : ದಯವಿಟ್ಟು ನಾನು ಹೇಳುವುದನ್ನು ಕೇಳಿ. ನಿನ್ನೆ ಯಾರಾದರೂ ಒಬ್ಬರು ಸಹಿ ಹಾಕಿರುವವರೆಲ್ಲರ ಪರವಾಗಿ ಮಾತನಾಡಲು ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೆ. ಅದರಂತೆ ಮಾನ್ಯ ಶ್ರೀರಾಮರೆಡ್ಡಿಯವರು ಮಾತನಾಡಿದ್ದಾರೆ. ಇದರ ಬಗ್ಗೆಯೇ ಎಲ್ಲರೂ ಮಾತನಾಡಬೇಕೆಂದರೆ ಹೇಗಾಗುತ್ತದೆ? ಇನ್ನೂ ಅನೇಕ ವಿಷಯಗಳಿವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಿನ್ನೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುತ್ತೇನೆಂದು ತಾವು ಹೇಳಿದ್ದೀರಿ.

ಅಧ್ಯಕ್ಷರು : ಹೌದು, ಅದರಂತೆ ಅವರು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸಾರ್, ನಾನು ತಮ್ಮ ಗಮನಕ್ಕೆ ಇಷ್ಟೇ ತರಬಯಸುತ್ತೇನೆ. ಶಾಸನಸಭೆ ಅಂಗೀಕಾರ ಮಾಡಿರುವ ನಿಯಮಾವಳಿಗಳ ನಿಯಮ 220ರ ಕೆಳಗೆ ಈ ರೀತಿ ಹೇಳಲಾಗಿದೆ. ಈ ವಿಷಯವನ್ನು ಅಧ್ಯಕ್ಷರ ಪರಿಶೀಲನೆಗಾಗಿ ಒಪ್ಪಿಸತಕ್ಕದ್ದು ಮತ್ತು ಅವರ ತೀರ್ಮಾನವು ಅಂತಿಮವಾಗಿರತಕ್ಕಂಥದ್ದು ಎಂದು ಶಾಸನಸಭೆಯ ನಿಯಮ ಇರುವುದು. ತಮಗೆ ಯವತ್ತು ಬಂತು ಈ ಶಾಸನಸಭೆಯನ್ನು ಮಾಡಬೇಕು ಎನ್ನುವ ವಿಚಾರ, ತಾವು ಯಾವತ್ತು ನಿರ್ಣಯಾವನ್ನು ತೆಗೆದುಕೊಂಡಿರಿ, ಯಾವ ಯಾವತ್ತು ಕ್ಯಾಂಪ್‌ನ್ನು ಇಲ್ಲಿ ಹಾಕಿದ್ದೀರಿ, ತಾವು ಯಾರು ಯಾರಿಗೆ ಇಲ್ಲಿ ವ್ಯವಸ್ಥೆಯನ್ನು ಮಾಡುವುದಕ್ಕೆ ಆದೇಶವನ್ನು ಕೊಟ್ಟಿರಿ, ತಾವು ಈ ಸಭೆಯಲ್ಲಿ ಏನೇನು ಚರ್ಚೆಯಾಗಬೇಕೆಂದು ನಿರ್ಣಯವನ್ನು ತೆಗೆದುಕೊಂಡಿರಿ, ತಾವು ಯಾವತ್ತು ರಾಜ್ಯಪಾಲರಿಗೆ ಈ ನೋಟೀಫಿಕೇಶನ್‌ನ್ನು ಹೊರಡಿಸಬೇಕೆಂದು ತೀರ್ಮಾನ ತೆಗೆದುಕೊಂಡು ಹೇಳಿದಿರಿ ಎಂದು ಅಧ್ಯಕ್ಷರ ಆಫೀಸ್‌ನಿಂದ ಮಾಹಿತಿಯನ್ನು ಮಾತ್ರ ಪಡೆಯುವುದಕ್ಕೆ ಸಂಬಂಧಪಟ್ಟಂತೆ ಮಾತ್ರ ನಾನು ಬಯಸುತ್ತೇನೆ. ಇದನ್ನು ನೀವು ಮಾಡಿದ್ದೀರಿ. ಸರ್ಕಾರ ಮಾಡತಕ್ಕಂಥದ್ದನ್ನು ಮಾಡಿದ್ದರೆ ನಾವು ಪ್ರಶ್ನೆ ಮಾಡುತ್ತಿರಲಿಲ್ಲ. ಸರ್ಕಾರದವರು ಮಾಡಿದ್ದರೆ ಅದನ್ನು ವಿರೋಧ ಮಾಡುವುದಕ್ಕೆ ನನಗೆ ಇಷ್ಟವಿಲ್ಲ.

12.00 P.M.

ಆದರೆ ನೀವೇ ಮಾಡಿರುವಂಥ ನಿಯಮದ ಅಧ್ಯಕ್ಷರಿಗೆ ಮಾತ್ರ ಅಧಿಕಾರವಿರುವುದು. ಅಕಸ್ಮಾತ್ ಅಧ್ಯಕ್ಷರು ಊರಿನಲ್ಲಿ ಇರಲಿಲ್ಲವೆಂದರೆ, ಅಧ್ಯಕ್ಷರ availability ಇರಲಿಲ್ಲವೆಂದರೆ, ಆ ಅಧಿಕಾರವನ್ನು ನಿಯೋಜನೆಯನ್ನು ಮಾಡತಕ್ಕಂಥದ್ದು ತಾವು ಉಪಾಧ್ಯಕ್ಷರಿಗೆ; ಬೇರೆ ಯಾರಿಗೂ ಮಾಡುವುದಕ್ಕೆ ತಮಗೆ ಅಧಿಕಾರವಿಲ್ಲ. ಇದೊಂದು ಶಾಸನಸಭೆ ಸಾರ್, ಬೇಕಾಬಿಟ್ಟಿಯಾಗಿ ಶಾಸನ ಮಾಡುವುದಕ್ಕೆ ಆಗುವುದಿಲ್ಲ. ಇನ್ನೊಂದು ವಿಚಾರ ಅಧ್ಯಕ್ಷರೆ, ನೀವು ಅವೊತ್ತು ಕರ್ನಾಟಕದಲ್ಲಿ ಇರಲಿಲ್ಲವೆನ್ನುವ ಮಾಹಿತಿ ನಮಗೆ ಇದೆ. ಶಾಸನಸಭೆಗೆ ಎಷ್ಟು ದಿವಸಗಳ ಮೊದಲೇ ನೋಟೀಸ್‌ನ್ನು ಕೊಡಬೇಕಾಗಿತ್ತು ಎಂಬುದನ್ನು ತಾವು ಹೇಳಬೇಕು. ನಾನು ಗೌರವಯುತವಾಗಿ ಹೇಳುತ್ತೇನೆ. ಡಿ.ಸಿ.ಯವರು ನಮಗೋಸ್ಕರ ಬಹಳ ಶ್ರಮವನ್ನು ತೆಗೆದುಕೊಂಡಿದ್ದಾರೆ. ಅದು ಖಾಸಗಿ ವಿಷಯವಾಯಿತು. ಶಾಸನ ಸಭೆಯನ್ನು ನಡೆಸತಕ್ಕಂಥವರು ಯಾರು? ಶಾಸನಸಭೆಯನ್ನು ನಡೆಸುವುದಕ್ಕೆ ನಿಮ್ಮ ಸೆಕ್ರೆಟರಿಯೆಟ್ ಸತ್ತುಹೋಗಿತ್ತೇ? ಏಕೆ ನಿಮ್ಮ ಸೆಕ್ರೆಟರಿಯೇಟ್‌ನವರು ನಿಮಗೆ ಕಾಗದ ಬರೆಯಲಿಲ್ಲ? ಏಕೆ ನಿಮ್ಮ ಸೆಕ್ರೆಟರಿಯೇಟ್‌ನವರು ನಿಮ್ಮ ಹತ್ತಿರ ಮಾತುಕತೆಯನ್ನು ಮಾಡಲಿಲ್ಲ? ಯಾರು ನಡೆಸಬೇಕಾಗಿತ್ತು. ಈ ಶಾಸನಸಭೆಯನ್ನು ಎಂದು ನಾವು ಕೇಳಬಾರದೆ? ಏನು ಅಜೆಂಡಾವನ್ನು ಇಟ್ಟುಕೊಂಡು ಬೆಳಗಾವಿಯಲ್ಲಿ ಶಾಸನಸಭೆಯನ್ನು ನಡೆಸುತ್ತೀರಿ ಎಂದು ನಾವು ಕೇಳಬಾರದೆ? ಇದೇನು ವಿಶೇಷ ಶಾಸನಸಭೆಯೇ? ಇದೊಂದು ವಿಶೇಷ ಶಾಸನಸಭೆಯ ಅಧಿವೇಶನ ಎಂದು ಡಿ.ಸಿ.ಯವರು ಬರೆಯುತ್ತಾರೆ. ನಮಗೆ ಸ್ಪೀಕರ್ ಆಫೀಸ್‌ನವರು ಕಳುಹಿಸಿರುವ ನೋಟೀಸ್‌ನಲ್ಲಿ ನಾವು ವಿಶೇಷ ಶಾಸನಸಭೆಯ ಅಧಿವೇಶನ ಮಾಡುತ್ತಿದ್ದೇವೆ ಎಂದು ಬರೆದಿದ್ದೀರಾ? ನೀವು adjourned Assembly Session ನನ್ನು revoke ಮಾಡುತ್ತೇವೆ ಎಂದು ಮಾತ್ರ ಕೊಟ್ಟಿದ್ದೀರಿ. ಆದರೆ ಡಿ.ಸಿ.ಯವರು ನಮಗೆ ಬರೆದಿರುವ ಕಾಗದದಲ್ಲಿ ವಿಶೇಷ ಅಧಿವೇಶನ ಎಂದಿದ್ದಾರೆ. ಏನಿದೆ ಈ ವಿಶೇಷ ಅಧಿವೇಶನದಲ್ಲಿ ಎಂಬುದನ್ನು ಹೇಳಬೇಕಲ್ಲಾ. ನಾವು ನಿರೀಕ್ಷೆ ಮಾಡಿದ್ದೆವು. ನಾವು ನಿನ್ನೆಯ ದಿವಸ ಇಲ್ಲಿಗೆ ಬಂದ ತಕ್ಷಣ What made you to call Assembly Session in Belgaum ಎನ್ನುವ ಬಗ್ಗೆ ತಾವು ಒಂದು ಹತ್ತು ನಿಮಿಷ ಮಾತನಾಡುತ್ತೀರಿ, ಅದಕ್ಕೇನಾದರೂ ಪೂರಕವಾಗಿ ಮಾತನಾಡುತ್ತೀರಿ, ಬಹುಷಃ ನಮಗೆಲ್ಲಾ ಸಮಜಾಯಿಷಿ ಕೊಡುತ್ತೀರಿ ಎಂದು ನಾವು ತಿಳಿದುಕೊಂಡಿದ್ದೆವು. ಈ ಬಗ್ಗೆ ತಮ್ಮ ಕಛೇರಿಯಿಂದ ಏನೂ ಮಾಹಿತಿ ಇಲ್ಲ, ನಿಮಗೇ ಏಕೆ ಅಧಿಕಾರ ಇರುವುದು, ತಮಗೆ ಇರುವ ಅಧಿಕಾರವನ್ನು ಬಳಸಿ ಅವರನ್ನು ಕರೆದು ಹೇಳಬೇಕಾಗಿತ್ತು.

ಶ್ರೀ ಅಮರಗೌಡ ಲಿಂಗನಗೌಡ ಬಯ್ಯಾಪುರ್ : ಅವರಿಗೆ ಮಾತನಾಡಲು ಬೇರೆ ವಿಚಾರವಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ತಾವು ಎಲ್ಲಾ ಪಕ್ಷದವರನ್ನೂ ಕರೆದು ಅವರೆಲ್ಲರ ಮಾತುಗಳನ್ನು ಕೇಳಿ ಆಮೇಲೆ ಒಂದು ನಿರ್ಧಾರವನ್ನು ತೆಗೆದುಕೊಳ್ಳುತ್ತೀರಿ ಎಂದೇ ತಮಗೆ ಅಧಿಕಾರವನ್ನು ಶಾಸನದಲ್ಲಿ ಕೊಟ್ಟಿರುವುದು.

ಶ್ರೀ ಹೆಚ್.ಸಿ. ಬಾಲಕೃಷ್ಣ : ಸ್ವಾಮಿ, ನಮ್ಮ ತಾಲ್ಲೂಕಿನಲ್ಲಿ ಎಲ್ಲಾ ಕಡೆ ಬರ ಬಂದಿದೆ. ಅದನ್ನು ಚರ್ಚೆ ಮಾಡಿ. ಅದನ್ನು ಬಿಟ್ಟು ಇದ್ಯಾವುದೋ ಕೆಲಸಕ್ಕೆ ಬಾರದ್ದನ್ನು ಚರ್ಚೆಗೆ ತೆಗೆದುಕೊಳ್ಳಬೇಡಿ. ನಮ್ಮ ತಾಲ್ಲೂಕಿನಲ್ಲಿ ಬರ ಬಂದು ಜನರು ಸಾಯುತ್ತಿದ್ದಾರೆ.

(ಅಡಚಣೆ)

ಶ್ರೀ ಎಂ.ಪಿ. ವೆಂಕಟೇಶ್ : ಮಾನ್ಯ ಅಧ್ಯಕ್ಷರೆ, ಬರಗಾಲದಂಥ ವಿಷಯವನ್ನು ಚರ್ಚೆ ಮಾಡುವುದನ್ನು ಬಿಟ್ಟು ಯಾವುದೋ ಕ್ಷುಲಕ ವಿಚಾರವನ್ನು ಚರ್ಚೆ ಮಾಡುವುದು ಸರಿ ಅಲ್ಲ.

(ಅಡಚಣೆ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಬರಗಾಲದ ಚರ್ಚೆ ಮಾಡಿ, ದಯಮಾಡಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಚರ್ಚೆ ಮಾಡಿ. ಅಲ್ಲಿ ಫ್ಲಡ್ ಬಂದಿದೆ. ದಯಮಾಡಿ ಅದರ ಬಗ್ಗೆ ಚರ್ಚೆ ಮಾಡಿ. ಇವರು ಮಾಡುವುದೆಲ್ಲಾ ಪೇಪರ್‌ನಲ್ಲಿ ಹೆಸರು ಬರಲಿ ಎಂದು, ಈ ರೀತಿ ಮಾತನಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಬೇಜವಾಬ್ದಾರಿಯಿಂದ ಈ ಸದನ ನಡೆಯಬಾರದು. ಈ ಸದನ ಶಿಸ್ತಿಲ್ಲದೇ ಬೇಜವಾಬ್ದಾರಿಯಿಂದ ನಡೆಸುವುದಕ್ಕಾಗುವುದಿಲ್ಲ. ಈ ಸದನವನ್ನು ನೀವು ಆ ರೀತಿ ನಡೆಸಿದರೆ ತಪ್ಪು ಮಾಡಿದಂತಾಗುತ್ತದೆ.

(ಅಡಚಣೆ)

ಶ್ರೀ ಎಂ.ಪಿ. ವೆಂಕಟೇಶ್ : ವಾಟಾಳ್ ನಾಗರಾಜ್ ರವರಿಗೆ ಬೇಕಾಗಿರುವುದು ಪ್ರಚಾರ. ಪ್ರಚಾರ ಬಿಟ್ಟರೆ ಬೇರೆ ಏನೂ ಇಲ್ಲ. ವಾಟಾಳ್ ನಾಗರಾಜ್‌ರವರಿಗೆ ದಿನವೂ ಬೆಳಗ್ಗೆ ಪೇಪರ್‌ನಲ್ಲಿ ಅವರದ್ದು ವಿಷಯ ಇರಬೇಕು.

(ಅಡಚಣೆ)

ಮಾನ್ಯ ಸದಸ್ಯರೊಬ್ಬರು : ಮಾನ್ಯ ಅಧ್ಯಕ್ಷರೇ, ಈ ಬೆಳಗಾವಿ ಅಧಿವೇಶನ ಬೆಳಗಾವಿಗೆ ಸಂಬಂಧಪಟ್ಟ ಹಾಗೆ ಮತ್ತು ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಚರ್ಚೆ ಸೀಮಿತವಾಗಿರಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಸದನವನ್ನು ಶಿಸ್ತಿನಿಂದ ನಡೆಸಬೇಕು ಮತ್ತು ಕಾನೂನು ಪ್ರಕಾರ ನಡೆಸಬೇಕು. ಅದನ್ನು ಬಿಟ್ಟು ಬೇರೆ ರೀತಿ ನಡೆಸುವುದಕ್ಕಾಗುವುದಿಲ್ಲ.

ಅಧ್ಯಕ್ಷರು : ನಾನು ಎಲ್ಲಾ ಸದಸ್ಯರುಗಳಲ್ಲಿ ವಿನಂತಿ ಮಾಡುವುದೇನೆಂದರೆ,...

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಯಾರೇ ಸದಸ್ಯರು ಈ ಸದನದಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡತಕ್ಕಂಥ ಸಂದರ್ಭದಲ್ಲಿ.......

(ಅಡಚಣೆ)

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸ ಸಭೆ ನಡೆಯಿತು. ಸಂಸದೀಯ ಸಚಿವರು ಈಗಾಗಲೇ ನಾವು ನಿರ್ಣಯ ಮಾಡಿದ ಹಾಗೆ ಇವತ್ತು ಸದನದಲ್ಲಿ ಪ್ರಸ್ತಾಪ ಮಾಡುತ್ತೇವೆ. ಅದರ ಮೇಲೆ ಸಭಾಧ್ಯಕ್ಷರಾದ ತಾವು ನಿರ್ಣಯ ಕೊಡುವುದು ಎಂದು ಹೇಳಿದ್ದೇವೆ. Privilege motion ಅನ್ನು ಏತಕ್ಕೆ ಕೊಟ್ಟಿದ್ದೇವೆ ಎನ್ನುವ ಬಗ್ಗೆ

ನಮ್ಮ ಅನಿಸಿಕೆಗಳನ್ನು ಹೇಳಬೇಕಾಗುತ್ತದೆ. ಆ ವಿಷಯಗಳ ಬಗ್ಗೆ ಮಾನ್ಯ ಸದಸ್ಯರುಗಳು ಮಾತನಾಡುತ್ತಿದ್ದಾರೆ. ಇವತ್ತು ಇಲ್ಲಿ ಒಂದು ಬ್ರಿಗೇಡ್ ಆಗಿಬಿಟ್ಟಿದೆ. ಎಲ್ಲರೂ ಒಟ್ಟಿಗೆ ಎದ್ದು ನಿಂತು ಸರ್ಕಾರದ ಕಾರ್ಯಕಲಾಪಗಳಿಗೆ ಮತ್ತು ಗಡಿ ಭಾಗದ ಬಗ್ಗೆ ವಿರೋಧ ಪಕ್ಷದವರು ಪ್ರಸ್ತಾಪ ಮಾಡುವುದಕ್ಕೆ ಆಗದಂತೆ ಮಾಡುತ್ತಿದ್ದಾರೆ. ಆದರೆ ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಇವತ್ತು ನಾವು ಮತ್ತು ನಮ್ಮ ಸದಸ್ಯರುಗಳು ಏನು ಪ್ರಸ್ತಾಪವನ್ನು ಮಾಡುತ್ತೇವೆ ಅದನ್ನು ಸಂಸದೀಯ ವ್ಯವಹಾರಗಳ ಮಂತ್ರಿಗಳಾದ ತಾವು ಕೇಳಬೇಕು. ತಮ್ಮ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ತಾವು ಹಿರಿಯರಾಗಿದ್ದೀರಿ. ನಿನ್ನೆ ಕೂಡ ತಮ್ಮ ಎದುರಿಗೆ ಪ್ರಸ್ತಾಪ ಆಗಿದೆ. ಮಾನ್ಯ ಮಾಧುಸ್ವಾಮಿಯವರು, ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಮಾನ್ಯ ಶ್ರೀರಾಮರೆಡ್ಡಿಯವರೂ ಹೇಳಿದ್ದಾರೆ. ನಾವು ಪ್ರಸ್ತಾಪ ಮಾಡುತ್ತೇವೆ. ಪ್ರಸ್ತಾಪ ಮಾಡಿದ ಮೇಲೆ ಅಧ್ಯಕ್ಷರು ನಿರ್ಣಯ ಕೊಡಬೇಕು. ಆದರೆ ಇವತ್ತು ಪ್ರಸ್ತಾಪ ಮಾಡುವುದಕ್ಕೇ ಅನುಕೂಲ ಮಾಡಿಕೊಡದಿದ್ದರೆ ಹೇಗೆ? ಈ ಸದನವನ್ನು ನಿಯಮವನ್ನು ಉಲ್ಲಂಘಿಸಿ ನಡೆಸಿದರೆ ಹೇಗೆ? ಈಗ ನೀತಿ ಬಾಹಿರವಾಗಿ ಸದನ ನಡೆಯುತ್ತಿದೆ. ಆದರೂ ಕೂಡ ರಾಜ್ಯದ ಹಿತ ದೃಷ್ಟಿಯಿಂದ ಗಡಿ ಭಾಗದಲ್ಲಿ ನಡೆಯುತ್ತಿರುವ ಈ ಒಂದು ಅಧಿವೇಶನಕ್ಕೆ ಅಡ್ಡಗಾಲು ಹಾಕಬಾರದು ಎನ್ನುವ ದೃಷ್ಟಿಯಿಂದ we are participating in the discussion. ಆದರೆ ನೀವು ಆ ಕಡೆ ಹೆಚ್ಚಿನ ಸಂಖ್ಯೆಯಲ್ಲಿ ಇದ್ದೀರಿ ಎಂದು ಈ ರೀತಿ ಮಾಡಬಾರದು. ಮಾನ್ಯ ಮಾಧುಸ್ವಾಮಿಯವರು, ಮಾನ್ಯ ಶ್ರೀರಾಮರೆಡ್ಡಿಯವರು ಪ್ರಸ್ತಾಪ ಮಾಡುವುದನ್ನು ಕೇಳಿ. ಕೇಳಿದ ಮೇಲೆ ಅಧ್ಯಕ್ಷರೇ, ತಾವು ನಿರ್ಣಯ ಕೊಡಿ. ಮಾತನಾಡುವುದಕ್ಕೆ ಅವಕಾಶ ಕೊಡದ ಹಾಗೆ ವಾತಾವರಣ ಸೃಷ್ಟಿಯಾಗಬಾರದು. ಗಡಿ ಭಾಗದಲ್ಲಿ ನಡೆಯುತ್ತಿರುವ ಅಧಿವೇಶನಕ್ಕೆ ಸಂಪೂರ್ಣವಾದಂಥ ಬೆಂಬಲವನ್ನು ತಮಗೆ ಕೊಡಬೇಕೆಂದು ನಮಗೆ ಇದೆ. ಆ ವಿಚಾರದಲ್ಲಿಯೇ ನಾವು ಇಲ್ಲಿಗೆ ಬಂದಿದ್ದೇವೆ. ಆದರೆ, ಗೊಂದಲದ ವಾತಾವರಣವನ್ನು ಇದೇ ರೀತಿಯಾಗಿ ಮುಂದುವರಿಸಿಕೊಂಡು ಹೋದರೆ ನಾವು ಇದನ್ನು ಖಂಡಿಸಬೇಕಾಗುತ್ತದೆ. ಇದನ್ನು ವಿರೋಧ ಮಾಡಬೇಕಾಗುತ್ತದೆ ಮತ್ತು ಈ ರೀತಿಯ behaviour ಏನಿದೆ, ಇದರ ಬಗ್ಗೆ ನಾವು ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ.ಪಿ. ರೇಣುಕಾಚಾರ್ಯ : ನೀವು ಹೀಗೇ ಮಾಡಿದರೆ ಈ ರಾಜ್ಯದ ಜನರು ತಮಗೆ ಛೀಮಾರಿ ಹಾಕುತ್ತಾರೆ.

(ಅಡಚಣೆ)

ಒಬ್ಬ ಮಾನ್ಯ ಸದಸ್ಯರು : ನಿಮ್ಮ ವರ್ತನೆ ಏನು ಚೆನ್ನಾಗಿದೆಯೇ?

(ಅಡಚಣೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಈ ರೀತಿಯ ಅವರ ವರ್ತನೆ ನಮ್ಮನ್ನು ಬುಲ್‌ಡೋಜ್ ಮಾಡಿದ ಹಾಗಾಗುತ್ತದೆ. ದಬ್ಬಾಳಿಕೆಯನ್ನು ಖಂಡಿಸಿ ನಾವು ಹೊರಗೆ ಹೋಗುತ್ತೇವೆ.

(ಅಡಚಣೆ)

(ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಇವರು ಮಾಡುತ್ತಿರುವುದು ಸರಿಯಾದುದ್ದೇ? ನಮಗೆ ಮಾತನಾಡುವುದಕ್ಕೂ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

(ಅಡಚಣೆ)

ಶ್ರೀ ಆಲ್ಕೋಡ್ ಹನುಮಂತಪ್ಪ : ಇದು ಗೌರವಸ್ಥರ ನಡವಳಿಕೆ ಅಲ್ಲ. ಈ ರೀತಿ ಪುಸ್ತಕ ಎಸೆಯುವುದಾಗಲಿ, ಪೇಪರ್ ಎಸೆಯುವುದಾಗಲಿ, ಅಸಭ್ಯವಾದಂತಹ ವರ್ತನೆಯಾಗಲಿ ಮಾಡಬಾರದು. ನೀವು ಸೀನಿಯರ್ ಲೀಡರ್ ಇದ್ದೀರಿ, ಸಭ್ಯವಾದಂತಹ ವರ್ತನೆ ಮಾಡಬೇಕಾಗುತ್ತದೆ. ಅಸಭ್ಯವಾದಂತಹ ರೀತಿಯಲ್ಲಿ ಪೇಪರ್ ಎಸೆಯುವುದಾಗಲಿ ಕಾಗದ ಪತ್ರಗಳನ್ನು ಎಸೆಯುವುದಾಗಲಿ, ಅದನ್ನು ಹರಿದು ಹಾಕುವುದಾಗಲಿ, ಇದು ಸರಿಯಾದ ವರ್ತನೆಯಾಗುವುದಿಲ್ಲವೆಂದು ಅನಿಸುತ್ತದೆ.

ಒಬ್ಬರು ಮಾನ್ಯ ಸದಸ್ಯರು : ಮಾನ್ಯ ವಾಟಾಳ್ ನಾಗರಾಜ್ ಅವರ ವರ್ತನೆ ಬಹಳ....

(ಅಡಚಣೆ)

ಅಧ್ಯಕ್ಷರು : ಇಲ್ಲಿ ನಿಂತು ಏಕೆ ಮಾತನಾಡುತ್ತೀರಿ? ತಾವು ನಿಮ್ಮ ಸ್ಥಾನಗಳಿಗೆ ಹೋಗಿ ಮಾತನಾಡಿ. ಇಲ್ಲಿ ಏಕೆ ಮಾತನಾಡುತ್ತೀರಿ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೇ, 15 ನಿಮಿಷಗಳ ಕಾಲ....

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಈಗ ಏನು ಘಟನೆ ನಡೆದಿದೆ.....

ಅಧ್ಯಕ್ಷರು : ಆಯಿತು, ನಿಮ್ಮ ಸ್ಥಾನಗಳಿಗೆ ಹೋಗಿ......

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೇ, 15 ನಿಮಿಷಗಳ ಕಾಲ ಸದನವನ್ನು ಮುಂದೂಡಿ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಈಗ ಏನು ಘಟನೆ ನಡೆದಿದೆ, ಅದು ಯಾರಿಗೂ ಕೂಡ ಗೌರವ ತರುವಂತಹ ನಡವಳಿಕೆ ಅಲ್ಲ. ಈಗ ಈ ವಿಚಾರದಲ್ಲಿ ಇವತ್ತು ಯಾರೇ ಆಗಿರಲಿ, ಒಂದು ಪಕ್ಷದಲ್ಲಿ ಇರುವವರಾಗಿರಲಿ ಅಥವಾ ಸದಸ್ಯರಾಗಿರಲಿ, ಎಲ್ಲರಿಗೂ ತಮ್ಮ ಅಭಿಪ್ರಾಯವನ್ನು ಹೇಳುವುದಕ್ಕೆ ಸರ್ವ ಸ್ವತಂತ್ರ ಇದೆ. ಆ ಕಾರಣಕ್ಕೆ ಅವರು ಬಳಸಿದ ಭಾಷೆಯಾಗಲಿ ಹಾಗೂ ಅವರು ಅಭಿಪ್ರಾಯ ವ್ಯಕ್ತ ಮಾಡಿರತಕ್ಕಂಥಾದ್ದರ ಬಗ್ಗೆ ನಮಗೆ ಭಿನ್ನಾಭಿಪ್ರಾಯ ಇದ್ದರೆ ಅವರು ಮಾತನಾಡುವಂತಹ ವಿಚಾರಗಳನ್ನು ನಾವು ತಡೆಹಿಡಿಯುವಂತಹ ಅಧಿಕಾರ ನಮಗೆ ಇಲ್ಲ. ನಿನ್ನೆ ಕೂಡ ಈ ವಿಚಾರ ಪ್ರಸ್ತಾಪವಾಗಿದೆ. ಅವರು ಹಕ್ಕುಚ್ಯುತಿ ವಿಚಾರದಲ್ಲಿ ಏನೋ ಮಂಡನೆ ಮಾಡಿ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದರು. ಅದಕ್ಕೆ ಸರ್ಕಾರದ ವತಿಯಿಂದ ಉತ್ತರ ಕೊಡುತ್ತಿದ್ದೆವು. ಆ ಉತ್ತರವನ್ನು ಆಲಿಸಿದ ಮೇಲೆ ತಾವು ಅಂತಿಮವಾಗಿ ತೀರ್ಮಾನವನ್ನು ಕೊಡುತ್ತಿದ್ದೀರಿ. ಆದುದರಿಂದ ನಮ್ಮ ಸದಸ್ಯರ ಕಾರಣಕ್ಕೆ ಮಾನ್ಯ ವಿರೋಧ ಪಕ್ಷದವರಿಗೆ ಏನಾದರೂ ಮುಜುಗರವಾಗಿದ್ದರೆ, ಅವರು ಇದರ ಬಗ್ಗೆ ತೀಕ್ಷ್ಣವಾಗಿ ಪ್ರತಿಕ್ರಿಯೆ ತೋರಿಸಿದ್ದರೆ, ಅದಕ್ಕೆ ವಿಷಾದವನ್ನು ನಮ್ಮ ಪಕ್ಷದವರ ಪರವಾಗಿ ವ್ಯಕ್ತ ಮಾಡುತ್ತೇನೆ. ಈ ರೀತಿ ಆದಾಗ ಪ್ರತಿಯೊಂದು ವಿಚಾರಕ್ಕೂ

ಕೂಡ ಸಭಾತ್ಯಾಗ ಮಾಡುವುದು ಸರಿಯಲ್ಲ ಅಥವಾ ಸಭಾತ್ಯಾಗ ಮಾಡುವಂತಹ ಸಂದರ್ಭದಲ್ಲಿ ಅವರು ಬಹಳ ಗಂಭೀರವಾಗಿ ಸಭಾತ್ಯಾಗವನ್ನು ಮಾಡಬಹುದಾಗಿತ್ತು. ಆದರೆ ಮಾನ್ಯ ಸದಸ್ಯರು ತೀರ ಭಾವನಾತ್ಮಕವಾಗಿ ಭಾವೋದ್ವೇಗಕ್ಕೆ ಒಳಗಾಗಿ ಪೂರಕ ಅಂದಾಜು ಪುಸ್ತಕಗಳನ್ನು ಶಸ್ತ್ರಗಳನ್ನಾಗಿ ಬಳಸಿ ಒಗೆದಿದ್ದು, ಅದು ಇಲ್ಲಿ ನಮ್ಮ ಸಚಿವಾಲಯದ ಅಧಿಕಾರಿಗಳ ತಲೆ ಮೇಲೆ ಕೂಡ ಬಿತ್ತು. ಇದು ನಮ್ಮ ಕರ್ನಾಟಕ ವಿಧಾನಮಂಡಲದ ನಡವಳಿಕೆಗಳಿಗೆ ಭೂಷಣಪ್ರಾಯವಾಗಿರತಕ್ಕಂಥದ್ದಲ್ಲ. ನಾನು ತಮ್ಮ ಮೂಲಕ ಮಾನ್ಯ ವಿರೋಧ ಪಕ್ಷದ ನಾಯಕರುಗಳಿಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಸಭೆಯಲ್ಲಿ ತಾವು ದಯವಿಟ್ಟು ಸಹಕರಿಸಬೇಕು, ಬಂದು ಮಾತನಾಡಬೇಕು. ಅದೇ ರೀತಿಯಾಗಿ ನಾನೀಗಾಗಲೇ ನಮ್ಮ ಪಕ್ಷದ ಸದಸ್ಯರ ಹಾಗೂ ನಮ್ಮ ಸಮ್ಮಿಶ್ರ ಸರ್ಕಾರದ ಇತರ ಸದಸ್ಯರೆಲ್ಲರ ಪರವಾಗಿ ಹೇಳುವುದೇನೆಂದರೆ, ತಮಗೆ ಏನಾದರೂ ಮುಜುಗರವಾಗಿದ್ದರೆ ಮತ್ತೊಂದು ಸಲ ನಾನು ವಿಷಾದವನ್ನು ವ್ಯಕ್ತ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೇ, ತಾವು ದಯವಿಟ್ಟು 15 ನಿಮಿಷಗಳ ಕಾಲ ಅಥವಾ ಅರ್ಧ ಗಂಟೆ ಕಾಲ ಮುಂದಕ್ಕೆ ಹಾಕಿ. ನಾನು ಅವರ ಜೊತೆ ಮಾತನಾಡುತ್ತೇನೆ. ದಯವಿಟ್ಟು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳತಕ್ಕಂಥಾದ್ದು ಇಷ್ಟೆ, ಮುಜುಗರ ಹಾಗೂ ಬೇಸರ ಉಂಟು ಮಾಡತಕ್ಕಂಥ ವಿಷಯ ಬಂದಿರಲಿ, ಅದರ ಬಗ್ಗೆ ನಾವು ಪ್ರತಿಕ್ರಿಯೆ ಮಾಡದೇ ಮೌನವಾಗಿದ್ದರೆ ಇದು ಹತ್ತು ನಿಮಿಷದಲ್ಲಿ ಮುಗಿದು ಹೋಗುತ್ತಿತ್ತು. ಆದುದರಿಂದ ದಯವಿಟ್ಟು ಸಹಕಾರ ಮಾಡಬೇಕು ಎಂದು ಹೇಳುತ್ತಾ, ನಮ್ಮ ಸದಸ್ಯರಿಗೆ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಾವು ದಯವಿಟ್ಟು ಅರ್ಧ ಗಂಟೆ ಕಾಲ ಈ ಸಭೆಯನ್ನು ಮುಂದಕ್ಕೆ ಹಾಕಿದ ಮೇಲೆ ಅವರ ಭಾವೋದ್ವೇಗ ಕಡಿಮೆಯಾಗಬಹುದು ಎಂದು ನಾನು ಭಾವಿಸಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಸದನ ಕೇವಲ ಎರಡು ದಿವಸ ಇರುವಂತಾದ್ದು. ತಾವು 15 ನಿಮಿಷ ಸದನವನ್ನು ಮುಂದಕ್ಕೆ ಹಾಕಿ, ಎಲ್ಲರನ್ನು ಕರೆದು ಮಾತನಾಡಿ. ವಿರೋಧ ಪಕ್ಷದವರು ಯಾರು ಇಲ್ಲದೇ ಚರ್ಚೆ ಮಾಡುವುದು ಸೂಕ್ತವಲ್ಲವೆಂಬುದು ನನ್ನ ಭಾವನೆ. ಅದಕ್ಕೆ ತಾವು ತೀರ್ಮಾನವನ್ನು ತೆಗೆದುಕೊಳ್ಳಿ, ಸದನವನ್ನು ಮುಂದೆ ಹಾಕಿ ತಮ್ಮ ಕಚೇರಿಗೆ ಎಲ್ಲರನ್ನೂ ಕರೆಯಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಸದನವನ್ನು ಅರ್ಧ ಗಂಟೆ ಕಾಲ ಮುಂದೂಡುತ್ತಿದ್ದೇನೆ.

(ಸದನದ ಕಲಾಪವನ್ನು 12 ಗಂಟೆ 14 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಅರ್ಧ ಗಂಟೆ ನಂತರ ಸೇರಲು ನಿಶ್ಚಯಿಸಿತು.)

1.50 P.M.

(ಸದನವು 1–58 ನಿಮಿಷಕ್ಕೆ ಸಮಾವೇಶಗೊಂಡಿತು.)

ಮಾನ್ಯ ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ಅಧ್ಯಕ್ಷರು : ಮಾಧುಸ್ವಾಮಿಯವರೇ, ನೀವು ಮಾತನಾಡಿದ್ದು complete ಆಯಿತಲ್ಲವೇ?

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಮಾತನಾಡುತ್ತಿದ್ದೆ, ಅಷ್ಟಕ್ಕೇ ನಿಂತುಹೋಯಿತು.

ಅಧ್ಯಕ್ಷರು : ಆಯಿತು, ಮಾತನಾಡಿ ಮುಗಿಸಿಬಿಡಿ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಪಾರ್ಲಿಮೆಂಟರಿ ಮಿನಿಸ್ಟರ್ ಈ ಬಗ್ಗೆ ಮಾತನಾಡಲಿ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಮತ್ತು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ದಿವಸ ನಡೆದ ಘಟನೆ ಅದೊಂದು ವಿಷಘಳಿಗೆ ಎಂದು ನಾವು ಮರೆಯಬೇಕು ಮತ್ತು ಇದರಿಂದ ನಮ್ಮ ಸದನಕ್ಕೆ ದೊಡ್ಡ ಗೌರವವೇನು ಬರುವುದಿಲ್ಲ. ಯಾರೇ ಸದಸ್ಯರು ಮಾತನಾಡಿದಾಗ ಅವರ ಅಭಿಪ್ರಾಯಗಳನ್ನು ವ್ಯಕ್ತವಾಡಲಿಕ್ಕೆ ಅವರಿಗೆ ಸಂಪೂರ್ಣವಾದಂತಹ ಸ್ವಾತಂತ್ರ್ಯ ಇರುತ್ತದೆ. ಎಲ್ಲೋ ಕೆಲವೊಂದು ಸಂದರ್ಭಗಳಲ್ಲಿ ಭಾವಾತಿರೇಕಕ್ಕೆ ಒಳಗಾದಂಥ ಸಂದರ್ಭದಲ್ಲಿ ಸಂಸದೀಯ ನಡವಳಿಕೆಗೆ ತಕ್ಕದ್ದಲ್ಲದ ಭಾಷೆಯನ್ನು ಬಳಸಿದಾಗ ಮಾತ್ರ ಆಕ್ಷೇಪಣೆಗಳನ್ನು ಎತ್ತಬಹುದು. ಅದು ಸಂಸದೀಯ ಭಾಷೆ ಹೌದೋ ಅಲ್ಲವೋ ಎನ್ನುವ ನಿರ್ಣಯ ತಮ್ಮ ವಿವೇಚನೆಗೆ ಬಿಟ್ಟಿರತಕ್ಕಂಥ ವಿಷಯ. ಆ ಸಂದರ್ಭದಲ್ಲಿ ನಾವೆಲ್ಲರೂ ಕೂಡ ಮಾತನಾಡುವಂಥವರಿಗೆ ಅಡ್ಡಿಯನ್ನು ಮಾಡತಕ್ಕಂಥದ್ದೂ ಕೂಡ ಸಾಧುವಾದುದ್ದಲ್ಲ ಮತ್ತು ಅಂಥ ಉದ್ದೇಶಕ್ಕಾಗಿಯೇ ಇಂಥ ಸದನಗಳನ್ನು ಪ್ರಜಾಪ್ರಭುತ್ವದಲ್ಲಿ ಏರ್ಪಾಡು ಮಾಡಿಲ್ಲ. ಈ ದೃಷ್ಟಿಯಿಂದ ನಮಗೆ ನೇರವಾಗಿ ಮನಸ್ಸಿಗೆ ನೋವು ಮಾಡುವಂತಹ ಮಾತುಗಳನ್ನು ಆಡಿದರೂ ಕೂಡ ನಾವು ಸಂಯಮದಿಂದ ಇರಬೇಕೆಂಬುದೇ ಒಂದು ನಡವಳಿಕೆ. ಆ ಕಾರಣದಲ್ಲಿ ಆಡಳಿತ ಪಕ್ಷದವರಿಗೆ ಹೆಚ್ಚಿನ ಜವಾಬ್ದಾರಿಯಿರುತ್ತದೆ. ವಿರೋಧ ಪಕ್ಷದವರು ಆ ವಿಚಾರವನ್ನು ಪ್ರಸ್ತಾಪ ಮಾಡುತ್ತಾರೆ. ಅದಕ್ಕೆ ನಾವು ಉತ್ತರವನ್ನು ಕೊಡಬೇಕಾಗುತ್ತದೆ. ಆದ್ದರಿಂದಲೇ ಈ ಮಾತುಗಳು ಇರುವುದು "They have their say and we have our way", ನಮಗೆ ಹೆಚ್ಚಿನ ಜವಾಬ್ದಾರಿಯಿರುವುದರಿಂದ ನಾವು ಹೆಚ್ಚು ಪ್ರೇರೇಪಿತರಾಗಿ ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬಾರದು. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಯಾರೇ ಆಗಿರಲಿ, ಅವರು ಸದುದ್ದೇಶದಿಂದ ಮಾತ್ರ ಮಾತನಾಡಿರುತ್ತಾರೆಯೇ ವಿನಃ ಅದರಲ್ಲಿ ದುರುದ್ದೇಶವಿದೆಯೆಂದು ಯಾರೂ ಕೂಡ ಭಾವಿಸಬಾರದು. ಮಾತನಾಡಿದ ಮಾತಿಗೆ ತಮ್ಮ ಮನಸ್ಸಿಗೆ ನೋವಾಗಿದ್ದರೆ ಅದಕ್ಕೆ ನಾನು ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಅದಕ್ಕೆ ತಾವು ಸಭಾತ್ಯಾಗ ಮಾಡಿ ಹೋದ ನಂತರವೂ ಕೂಡ ನಾನು ಈ ವಿಷಯವನ್ನು ವ್ಯಕ್ತಪಡಿಸಿದ್ದೇನೆ. ನಾವೆಲ್ಲಾ ಹೋಗಿ ತಮ್ಮಲ್ಲಿ ವಿನಂತಿ ಮಾಡಿಕೊಂಡ ಸಂದರ್ಭದಲ್ಲಿ ತಾವು ದೊಡ್ಡ ಮನಸ್ಸು ಮಾಡಿ ಮಾನ್ಯ ಸ್ಪೀಕರ್‌ರವರ ಛೇಂಬರ್‌ನಲ್ಲಿ ಕಲೆತು ಹಿಂದೆ ನಾವೇನು ಕಾರ್ಯಕಲಾಪಗಳ ಪಟ್ಟಿಯಲ್ಲಿ ನಿರ್ಣಯ ಮಾಡಿದ್ದೆವು, ಆ ಪಟ್ಟಿಯ ಪ್ರಕಾರ ಹಕ್ಕುಚ್ಯುತಿಗೆ ಸಂಬಂಧಪಟ್ಟವರು ಮಾತನಾಡಬೇಕು, ಎಲ್ಲರಿಗೂ ಸಹ ಎರಡು, ಮೂರು ನಿಮಿಷ ನಿನ್ನೆ ನಿರ್ಧಾರವಾದಂತಹ ರೀತಿಯಲ್ಲಿ ಚರ್ಚೆಗೆ ಅವಕಾಶ ಮಾಡಿದ ಮೇಲೆ, ಸರ್ಕಾರ ಉತ್ತರ ಕೊಟ್ಟ ಮೇಲೆ ತೀರ್ಮಾನ ಕೊಡುವುದು ತಮಗೆ ಸೇರಿದ್ದು ಎಂಬುದಾಗಿ ನಿರ್ಧರಿಸಲಾಗಿದೆ. ಮತ್ತೊಂದು ಸಲ ನಾನು ಹೇಳುತ್ತೇನೆ. ನಾವು ಯಾರೂ

ಕೂಡ ದುಡುಕಿನ ರೀತಿಯಲ್ಲಿ ವರ್ತಿಸುವುದಿಲ್ಲ, ಅದೇ ರೀತಿಯಾಗಿ ವಿರೋಧಪಕ್ಷದವರೊಂದಿಗೆ ವಿರೋಧಪಕ್ಷದ ಕೆಲವು ನಾಯಕರು ಹೊರಗಡೆ ಹೋಗುವಂಥ ಸಂದರ್ಭಗಳಲ್ಲಿ ಪೂರಕ ಅಂದಾಜುಗಳಿಗೆ ಕೊಟ್ಟಿರತಕ್ಕಂಥ ಪುಸ್ತಕಗಳನ್ನು ತೂರಿ ಹರಿದು ಹಾಕಿರುವಂಥಾದ್ದು ಕೂಡ, ನಾವು ಗದ್ದಲ ಮಾಡಿದಾಗ ಯಾವ ರೀತಿ ಭೂಷಣ ಬರುವುದಿಲ್ಲವೋ ಆ ರೀತಿ ಪುಸ್ತಕಗಳನ್ನು ತೂರುವುದರಿಂದಲೂ ಕೂಡ ಭೂಷಣ ಬರುವುದಿಲ್ಲ. ಅದು ಮಾನ್ಯ ಉಪ ಸಭಾಪತಿಗಳ ತಲೆಯ ಮೇಲೆ ಬಿತ್ತು, ಇಲ್ಲಿಯ ನಮ್ಮ ಕಾರ್ಯದರ್ಶಿಗಳವರ ತಲೆಯ ಮೇಲೆ ಬಿತ್ತು. ಈ ತರಹದಲ್ಲಿ ಆದರೆ ಬಹುತೇಕವಾಗಿ ಕರ್ನಾಟಕದ ಈ ವಿಧಾನಸಭೆ ಮತ್ತು ವಿಧಾನಪರಿಷತ್ತು ಭಾರತ ದೇಶದಲ್ಲಿ ತನ್ನ ಸುಸಂಸ್ಕೃತ ನಡವಳಿಕೆ, ಸಜ್ಜನಿಕೆಗಾಗಿ ಹೆಸರು ಪಡೆದುಕೊಂಡಿದೆ. ಆದ್ದರಿಂದ ತಾವು ದಯವಿಟ್ಟು ಇದನ್ನು ಇಲ್ಲೇ ಒಂದು ವಿಷಘಳಿಗೆ ಎಂದು ಮರೆತು ನಾನು ಈಗ ವ್ಯಕ್ತಪಡಿಸಿದ ವಿಷಾದವನ್ನು ತಾವು ಸ್ವೀಕಾರ ಮಾಡಿ ಮುಂದಿನ ಕಾರ್ಯಕಲಾಪಗಳಿಗೆ ತಾವು ಅನುವು ಮಾಡಿಕೊಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ನಾನು ಈ Privilege Motion ಅನ್ನು ಏತಕ್ಕೆ ತಂದೆ ಎಂದು ಹೇಳುವುದು ತೀರಾ ಅವಶ್ಯಕವಾಗಿದೆ. ಏಕೆಂದರೆ ಪತ್ರಿಕೆಗಳಲ್ಲಿ ಇವತ್ತು ನಮ್ಮ ಬಗ್ಗೆ ಮಾತನಾಡಿದ್ದಾರೆ. ಇವೆಲ್ಲಾ ಮಾಡಲಿಕ್ಕೆ ಬೆಳಗಾವಿಗೆ ಬರಬೇಕಾಗಿತ್ತೇ, ಇದನ್ನೆಲ್ಲಾ ಬೆಂಗಳೂರಿನಿಂದ ಬೆಳಗಾವಿಗೂ ತಂದು ಮಾಡಬೇಕಾಗಿತ್ತೇ? ಆದರೆ ಈ ಶಾಸನ ಸಭೆ ಸದಸ್ಯರಾಗಿ ಒಂದು ಶಾಸನಸಭೆ ನಿಯಮಬದ್ಧವಾಗಿ ನಡೆಯುತ್ತಿದೆಯೇ ಇಲ್ಲವೇ ಅದಕ್ಕೆ ಏನಾದರೂ ಉತ್ತರವನ್ನು seek ಮಾಡಬೇಕಾದುದು ನನ್ನ ಹಕ್ಕು ಎಂದು ತಿಳಿದುಕೊಂಡು ಆ ಹಕ್ಕಿಗೆ ಚ್ಯುತಿಯಾಗಿದೆಯೆಂದು ಹೇಳುತ್ತೇನೆ. ಅದಕ್ಕೆ ಪೂರಕವಾಗಿ ಕೌಲ್ ಅಂಡ್ ಶಕ್ದರ್‌ನ, chapter-17 ಅನ್ನು ಕೋಟ್ ಮಾಡಿ ಹೇಳುತ್ತೇನೆ. 'For fixing a sitting of the House, the Speaker's power is absolute and the consent of the Government is neither necessary nor sought'. ತಾವು ಅರ್ಥ ಮಾಡಿಕೊಳ್ಳಬೇಕು. 'For fixing the sitting of the House, the Speaker's power is absolute and the consent of the Government is neither necessary not sought. However, the Speaker normally goes by the general wish of the House or the recommendation of the Business Advisory Committee as adopted by the House'. ನಾವು ಅದನ್ನೇ ತಮಗೆ ಕೇಳಿದ್ದು. ತಾವು ಬಿಸಿನೆಸ್ ಅಡ್ವೈಸರಿ ಕಮಿಟಿಯನ್ನು ಕರೆಯಲಿಲ್ಲ. ತಾವು ಡಿಸಿಷನ್ ತೆಗೆದುಕೊಂಡಿದ್ದೀರಿ ಎಂದು ನಾವು ತಿಳಿದುಕೊಳ್ಳಲಿಕ್ಕೆ ಯಾವುದೇ ಮಾರ್ಗದರ್ಶನವಿಲ್ಲ. ಮುಂದುವರಿದು ಅದರಲ್ಲಿ ಹೇಳುತ್ತಾರೆ ನೋಡಿ, '...the nature of the business, Government of Private Members' to be transacted on the days on which sittings have been

fixed and allotment of days for answering questions pertaining to various Ministries of the Government arranged in five groups', ಎಂದು ಓದಿಕೊಂಡು ಬಂದು, 'This information is also published in the Bulletin along with the other information on various matters connected with the commencement of the session'. ತಾವು ಅರ್ಥ ಮಾಡಿಕೊಳ್ಳಬೇಕು, ಯಾವ ಬುಲೆಟಿನ್, ಯಾವ ಮಾಹಿತಿಯನ್ನು ನಮಗೆ ಕೊಟ್ಟಿದ್ದೀರಿ, ಯಾವ ವಿಷಯದ ಬಗ್ಗೆ ಚರ್ಚೆ ಮಾಡಲಿಕ್ಕೆ ನಮ್ಮನ್ನು ಇಲ್ಲಿ ಕರೆದಿದ್ದೀರಿ, ಅದು ನಿಯಮ, ನಾನು ಕೇಳುತ್ತೇನೆ. This information is bound to be given to us. ನಮಗೆ ಬಂದಿಲ್ಲ. ಬೆಳಗಾವಿಯಲ್ಲಿ ಯಾವ ಉದ್ದೇಶಕ್ಕೆ ಅಧಿವೇಶನ ನಡೆಯುತ್ತಿದೆ ಅದಕ್ಕೆ ಪೂರಕವಾಗಿ ನಾವು ಸಿದ್ಧರಾಗಿ ಇಲ್ಲಿಗೆ ಬರಬೇಕಿತ್ತು, ನಾವು ಬೇಕಾದಷ್ಟು ಮಾಹಿತಿಯನ್ನು ಕಲೆಕ್ಟ್ ಮಾಡಬೇಕಾಗಿತ್ತು, ಇಲ್ಲಿ ಮಾತನಾಡಬೇಕಾಗಿತ್ತು. ಒಂದು ಐತಿಹಾಸಿಕ ಸಮಾವೇಶವೆಂದು ತಾವೇನು ಕರೆದಿದ್ದೀರಿ, ಅದರಲ್ಲಿ ನಾವು ಭಾಗಿಗಳಾಬೇಕಿತ್ತು. ನಮ್ಮನ್ನು ಕತ್ತಲಲ್ಲಿ ಇಟ್ಟು ಇಲ್ಲಿ ಯಾವ ವಿಷಯದ ಬಗ್ಗೆ ಚರ್ಚೆಮಾಡುತ್ತೀರಿ ಎಂಬ ಬಗ್ಗೆ ಮಾಹಿತಿಯನ್ನು ಕೊಡದೇ ದಿಡೀರ್ ಎಂದು ಇಲ್ಲಿ ಅಧಿವೇಶನವನ್ನು ಕರೆದು ಸಭೆಯನ್ನು ನಡೆಸುತ್ತಿದ್ದೀರಿ. ಇದರಿಂದ ನಮ್ಮ ಹಕ್ಕಿಗೆ ಚ್ಯುತಿಯಾಗಿದೆ ಎಂದು ನಾನು ಕೇಳೇ ಕೇಳುತ್ತೇನೆ ಸರ್, 'Any change in the programme of sittings as shown in the Provisional Calendar of Sittings and notified in the Bulletin may be made as and when considered necessary and announced by the Speaker in the House. Such changes are to be published in the Bulletin'. ನೀವು ಹೌಸ್‌ನಲ್ಲಿ ಏನಾದರೂ ಅನೌನ್ಸ್ ಮಾಡುವಿರಾ ಎಂದು ನಿಮ್ಮನ್ನು ನಿನ್ನೆ ನಾವು ಕೇಳಿದೆವು, ಏನಾದರೂ ಇದರ ಬಗ್ಗೆ ಮಾಹಿತಿಯನ್ನು ಕೊಡುವಿರಾ, ಏತಕ್ಕೆ ಇಲ್ಲಿ ಅಧಿವೇಶನ ನಡೆಸುತ್ತಿದ್ದೀರಿ ಎಂದು ತಾವು ಹೇಳುತ್ತೀರಿ ಎಂದು. You are bound to announce it in the House. ನೀವು ಹೇಳಬೇಕಾಗಿತ್ತು, ಇಲ್ಲವೇ ತಾವು ಬುಲೆಟಿನ್ ಆದರೂ ಹೊರಡಿಸಬೇಕಾಗಿತ್ತು, ಈ ಕಾರಣಕ್ಕಾಗಿ ನಾವು ಬೆಳಗಾವಿಯಲ್ಲಿ ಒಂದು ಶಾಸನಸಭೆ ಅಧಿವೇಶನವನ್ನು ನಡೆಸುತ್ತಿದ್ದೇವೆ, ಇಂತಿಂಥ ಪ್ರಮುಖವಾದ ವಿಚಾರಗಳು ಚರ್ಚೆಗೆ ಬರುತ್ತದೆ, ಇದು ವಿಶೇಷ ಅಧಿವೇಶನವೇ ಅಥವಾ ರೆಗ್ಯುಲರ್ ಅಧಿವೇಶನವೇ? ನಿಮ್ಮ ನೋಟಿಫಿಕೇಷನ್‌ನಲ್ಲಿ Continued Assembly ಎಂದು ಬರುತ್ತದೆ, ಡಿ.ಸಿ. ಹಾಗೂ ಎಲ್ಲಾ ಅಧಿಕಾರಿಗಳು ಕಳುಹಿಸಿರುವ ಮಾಹಿತಿಯಲ್ಲಿ ವಿಶೇಷವಾದ ಒಂದು ಐತಿಹಾಸಿಕ ಅಧಿವೇಶನ ಇಲ್ಲಿ ನಡೆಯುತ್ತಿದೆ ಎಂಬ ಮಾಹಿತಿ ಬರುತ್ತದೆ. ಹಾಗಾದರೆ ಅಜೆಂಡಾ ಏನು, ಎಲ್ಲಿ ಕೊಟ್ಟಿದ್ದೀರಿ? Government Business ಮಾಡಲಿಕ್ಕೆ ನಾನು questions allow ಮಾಡುವುದಿಲ್ಲವೆಂದು ಹೇಳಿದ್ದೀರಿ. Questions allow ಮಾಡಲಿಲ್ಲವೆಂದರೆ automatic ಆಗಿ Zero Hour ಹೋಯಿತು, Zero Hour ನಲ್ಲಿ notice ಕೊಡಬೇಕೋ ಬೇಡವೋ ಎನ್ನುವುದು ಗೊತ್ತಾಗುವುದಿಲ್ಲ.

Because we have no time. ಸರ್ಕಾರ ಇಲ್ಲಿ ಶಾಸನಸಭೆ ಏರ್ಪಾಡು ಮಾಡಿದ್ದಕ್ಕಾಗಿ ಬಹಳ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ. ಇಲ್ಲಿ ಅಧಿವೇಶನ ಆಗಬೇಕಾಗಿತ್ತು, ಉತ್ತರ ಕರ್ನಾಟಕದಲ್ಲಿ ಏನಾದರೂ ಒಂದು ಆಗಿ ಇಡೀ ರಾಜ್ಯ ಒಂದು ಎನ್ನುವ ಭಾವನೆ ತರಲಿಕ್ಕೆ ಮಾಡುವ ತಮ್ಮೆಲ್ಲಾ ಪ್ರಯೋಗಗಳನ್ನು ಒಪ್ಪುತ್ತೇವೆ, ಆದರೆ ಆ ಎಲ್ಲಾ ಪ್ರಯೋಗ, ಪ್ರಯತ್ನ ಶಾಸನಕ್ಕೆ ಅಧೀನವಾಗಿರಬೇಕೆಂಬುದು ನಮ್ಮ ವಾದ. you are the custodian of all this. ತಾವು ಇಲ್ಲಿ ಕುಳಿತುಕೊಂಡು ಏನು ಶಾಸನಗಳು ನಿಯಮಗಳು ರಚನೆಯಾಗಿವೆ ಅದನ್ನು ರಕ್ಷಿಸುವಂಥ ಪೀಠದಲ್ಲಿ ಕುಳಿತಿರುವವರು, ನಮಗೆ ಆ ಬಗ್ಗೆ ಮಾಹಿತಿ ಕೊಡಬೇಕು. ನಿಮ್ಮ ಜವಾಬ್ದಾರಿ ಅದು. ನಾನು ತಮ್ಮ ದೊಡ್ಡ ಸ್ಥಾನವನ್ನು ಚಾಲೆಂಜ್ ಮಾಡಲಿಕ್ಕೆ ನಿಂತಿಲ್ಲ. ಅಧಿವೇಶನ ಯರು ಕರೆದಿದ್ದಾರೆ ಎಂಬುದು ನಮಗೆ ಗೊತ್ತಾಗಬೇಕಲ್ಲಾ. ನಮಗೆ ಇವತ್ತು ತಮ್ಮ ಕಚೇರಿಯಿಂದ ಮಾಹಿತಿಯಿಲ್ಲ. ಸೆಕ್ರೆಟೇರಿಯೆಟ್‌ನಿಂದ ಮಾಹಿತಿ ಇಲ್ಲ. ನಮಗೆ ಎಲ್ಲಾ ಹಳೆಯ ನ್ಯೂಸ್‌ನಿಂದ ಹಿಡಿದು ಇಲ್ಲೇನು ಅಧಿವೇಶನ ನಡೆಯುತ್ತದೆ, ಸರ್ಕಾರದಿಂದ ಮಾಹಿತಿ ಬರುತ್ತಿದೆ. 16–17ನೇ ತಾರೀಖು ಈ ಅಧಿವೇಶನದ ಬಗ್ಗೆ ಮೊಟ್ಟಮೊದಲನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಮಾತನಾಡುತ್ತಾರೆ, ತಾವು ಮಾತನಾಡಲಿಲ್ಲ, ತಾವು ಯಾವತ್ತೂ ಹೇಳಲಿಲ್ಲ, 25ನೇ ತಾರೀಖಿನಿಂದ ಶಾಸನಸಭೆ ಕರೆದಿದ್ದೇವೆಂದು ತಾವು ಯಾವತ್ತೂ ಹೇಳಲಿಲ್ಲ. ಮಾಧ್ಯಮಕ್ಕೂ ಹೇಳಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಶ್ರೀ ಮಾಧುಸ್ವಾಮಿ, ಶ್ರೀ ವಾಟಾಳ್ ನಾಗರಾಜ್, ಶ್ರೀರಾಮರೆಡ್ಡಿಯವರ ಹತ್ತಿರ ವಿನಂತಿ ಮಾಡುವುದು ಇಷ್ಟೇ. ತಾವೇನು ಪ್ರಿವಿಲೇಜ್ ಮೋಷನ್ ಮೂವ್ ಮಾಡಿದ್ದೀರಿ, ಅದೊಂದು ಸೂಕ್ಷ್ಮವಾದ ವಿಷಯ. ಪ್ರಪ್ರಥಮವಾಗಿ ಇಷ್ಟು ಕಡಿಮೆ ಅವಧಿಯಲ್ಲಿ ಎಲ್ಲಾ ಅಧಿಕಾರಿಗಳು ಇಲ್ಲಿ ಸೇರಿ ಶಕ್ತಿ ಮೀರಿ ಈ ವಿಶೇಷ ಅಧಿವೇಶನ ನಡೆಯಲಿಕ್ಕೆ ಕೆಲಸ ಮಾಡಿದ್ದಾರೆ. ಮುಂದಿನ ವರ್ಷಗಳಲ್ಲಿ ಶಾಶ್ವತವಾಗಿ ಈ ಭಾಗದಲ್ಲಿ ಅಧಿವೇಶನ ನಡೆಸಬೇಕೆಂದು ನಾವು ಚರ್ಚೆ ಮಾಡಿದ್ದೇವೆ. ಆದರೆ ಈಗ ತರಾತುರಿಯಲ್ಲಿ ಈ ಅಧಿವೇಶನ ನಡೆಸಲು ಯಾರು ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ ಅವರಿಗೆ ನಮ್ಮ ಹೇಳಿಕೆಗಳಿಂದ ನೋವಾಗುತ್ತದೆ. ಇದು ಸೂಕ್ಷ್ಮವಾದ ವಿಷಯ. ಮುಂದಿನ ದಿನಗಳಲ್ಲಿ ಇದು ಸರಿಹೋಗುತ್ತದೆ, ಇದನ್ನು ಹೆಚ್ಚು ಪ್ರಸ್ತಾಪ ಮಾಡುವುದು ಬೇಡವೆಂಬುದು ನನ್ನ ಅಭಿಪ್ರಾಯ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸರ್, ನಾನು ಸರ್ಕಾರದ ಬಗ್ಗೆ ಒಂದೇ ಒಂದು ಮಾತನ್ನೂ ಆಡಿಲ್ಲ. ನೀವು arrangements ಮಾಡಿದ್ದೀರಿ, ನಿಮ್ಮ ಇಲಾಖೆಯನ್ನು involve ಮಾಡಿದ್ದಾರೆ. Thanks to Deputy Commissioner, Thanks to your Regional Commissioner. ನಾನು ಅದನ್ನು ಹೇಳುತ್ತಿಲ್ಲ, ಶಾಸನಸಭೆ ಸರ್ಕಾರಕ್ಕೆ ಅಧೀನ ಆಗ ಕೂಡದು ಎಂಬುದು ನಮ್ಮ ಮಾತು, ಇವತ್ತು ಮಂತ್ರಿಗಳಾಗಿರುತ್ತೀರಿ, ನಾಡಿದ್ದು ಇಲ್ಲಿ ಕುಳಿತುಕೊಳ್ಳುತ್ತೀರಿ. ನಾಳೆ ನೀವು ಇಲ್ಲಿ ನಿಂತುಕೊಂಡು ಮಾತನಾಡಬೇಕಾಗುತ್ತದೆ. ಶಾಸನಸಭೆಯನ್ನು ತಾವು ಸರ್ಕಾರಕ್ಕೆ

ಅಧೀನ ಮಾಡಿದ್ದು ಏತಕ್ಕೆ? ನೀವು ಶಾಸನಸಭೆಯನ್ನು ಏಕೆ ಸರ್ಕಾರಕ್ಕೆ ಅಧೀನ ಮಾಡಿದಿರಿ? ಸರ್ಕಾರಿ ಕಾರ್ಯಕ್ರಮ ಏತಕ್ಕೆ ಮಾಡಿದಿರಿ? ಸರ್ಕಾರಿ ಕಾರ್ಯಕ್ರಮ ಮಾಡಿದರೆ ನೀವು ನಮಗೆ ಹೇಳಬೇಕಾಗಿತ್ತು, ಒಂದು ಉತ್ಸವ ಮಾಡೋಣ, ಸಮಾರಂಭ ಮಾಡೋಣವೆಂದು ಹೇಳಿದ್ದರೆ ನಾವೆಲ್ಲಾ ಕೂಡ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದೆವು. ನಿಮ್ಮಷ್ಟೇ concern ನಮಗೂ ಇತ್ತು. ನೀವು ಕರೆದಿರುವುದು ಶಾಸನಸಭೆ, ಶಾಸನಸಭೆ ಇಡೀ ರಾಜ್ಯಕ್ಕೆ, ಯಾವುದೋ ಒಂದು ಪ್ರಾಂತ್ಯಕ್ಕಲ್ಲ. ನೀವು ರಿಕ್ವೆಸ್ಟ್ ಮಾಡಿದ್ದೀರಿ, ಈ ಭಾಗದ ಜನರ ಪ್ರಮುಖವಾದ ವಿಷಯಗಳನ್ನು ಚರ್ಚೆ ಮಾಡಿ ಎಂದು ಈ ಭಾಗಕ್ಕೆ ನಾವು ಬಂದುಬಿಟ್ಟಿದ್ದೇವೆ. ಶಾಸನಸಭಾ ಅಧ್ಯಕ್ಷರಾಗಿ ನಿಯಮಗಳ ಪಾಲನೆ ಮಾಡದೇ ಸರ್ಕಾರದವರ ಆದೇಶದ ಜೊತೆ ಈ ಸಭೆ ಕರೆಯುವ ಸ್ಥಿತಿಯನ್ನು ನಿರ್ಮಾಣ ಮಾಡಿರುವುದು ನಿಯಮಗಳಿಗೆ ವಿರುದ್ಧವಾಗಿದೆ. ಸಂವಿಧಾನಕ್ಕೆ ವಿರುದ್ಧವಾಗಿದೆ. ಇದು ನಮ್ಮ ಸ್ಪಷ್ಟ ಅಭಿಪ್ರಾಯ, ನಮ್ಮ ಅಭಿಪ್ರಾಯ ನಾವು ಹೇಳಬೇಕಲ್ಲವೇ? ನಾವು ಇತಿಹಾಸಕ್ಕೆ ಹೋಗುತ್ತೇವೆ ಅಲ್ಲವೇ? ನಮ್ಮನ್ನು ನಾಳೆ ಕೇಳುತ್ತಾರೆ ಅಲ್ಲವೇ? ಏನು ಯಾರಿಗೂ ಪ್ರಶ್ನೆ ಮಾಡುವ ಹಕ್ಕು ಈ ಸಭೆಯಲ್ಲಿ ಇರಲಿಲ್ಲವೇ? ದಿಢೀರ್ ಎಂದು ಈ ಸಭೆ ನಡೆಯಿತೇ? ಡಿಸಿಷನ್ ಆಗಿದ್ದು ಯವಾಗ? ತೀರ್ಮಾನ ತೆಗೆದುಕೊಂಡವರು ಯಾರು? Yes, ತೀರ್ಮಾನವನ್ನು ಸರ್ಕಾರದವರೇ ತೆಗೆದುಕೊಂಡಿದ್ದರೂ ನೀವು ನೋಟಿಫಿಕೇಷನ್ ಮಾಡಬೇಕಾಗಿತ್ತು. ತಮ್ಮಿಂದಲೇ ಮೊದಲನೇ ಮಾಹಿತಿ ನಮಗೆ ಬರಬೇಕಾಗಿತ್ತು. ತಾವು ಹೇಳಬೇಕಾಗಿತ್ತು, ಇಂತಹ ದಿವಸ ವಿಶೇಷ ಅಧಿವೇಶನವನ್ನು ಬೆಳಗಾವಿಯಲ್ಲಿ ನಾನು ಕರೆಯುತ್ತಿದ್ದೇನೆ, ಇಂತಹ ಕಡೆ ಆಫೀಸ್ ಇದೆ, ಇಂಥ ಆಫೀಸರ್ಸ್ ಅಲ್ಲಿರುತ್ತಾರೆ. ಮಾಹಿತಿಯನ್ನು ಇಂಥಹವರು ಕೊಡುತ್ತಾರೆ. ನೀವು ಹೋದಾಗ ಇಂಥಹವರನ್ನು contact ಮಾಡಿ ಎಂದು ನೀವು ನಮೆ ಹೇಳಲಿಲ್ಲ. ನಮಗೆ ಡಿ.ಸಿ. ಯವರು ಹೇಳುತ್ತಿದ್ದಾರೆ. ಡಿ.ಸಿ. ಆಫೀಸ್‌ನಲ್ಲಿರುವ ಅಸಿಸ್ಟೆಂಟ್ ಮಾತನಾಡಿ, ಡಿ.ಸಿ. ಆಫೀಸ್‌ನಲ್ಲಿರುವ Head Quarters Assistant ಮಾತನಾಡಿ, ಡಿ.ಸಿ. ಆಫೀಸ್‌ನಲ್ಲಿರುವ ಪಿ.ಎ. ಮಾತನಾಡಿ, ನಾವು ಡಿ.ಸಿ. ಆಫೀಸ್‌ಗೆ ಮಾತನಾಡಿ ಶಾಸನಸಭೆ ಈ ರೀತಿ ನಡೆಸಬೇಕಾಗಿತ್ತೇ ಎಂಬುದು ನಮ್ಮ ಪ್ರಶ್ನೆ? ನಿಮ್ಮ ಆಫೀಸರ್ಸ್ ಏನಾಗಿದ್ದರು? ನಿಮ್ಮ ಸೆಕ್ರೆಟರಿಯಟ್ ಏನಾಗಿತ್ತು? ಏನು ಮಾಡುವುದಕ್ಕೆ ನೂರಾರು ಜನರನ್ನು ವಿಧಾನಸೌಧದಲ್ಲಿ ಇಟ್ಟುಕೊಂಡಿದ್ದೀರಿ? ನೀವು ಅವರನ್ನೆಲ್ಲಾ ಏತಕ್ಕೆ ಬಳಸಿಕೊಳ್ಳಲಿಲ್ಲ? ಮಾಡಲೇಬೇಕು, ಡೆಪ್ಯೂಟ್ ಮಾಡಿ, ಮತ್ತೆ ಅವರು ಹದಿನೈದು ದಿವಸ ಒಂದು ತಿಂಗಳೂ ಇಲ್ಲಿರಲಿ, organize ಮಾಡಲಿ, ಅಸೆಂಬ್ಲಿಯನ್ನು ಕರೆಯಲಿ, ಬುಲೆಟಿನ್ ಕೊಡಲಿ, ಅಜೆಂಡಾ ಕೊಡಲಿ, ಅದಕ್ಕೆ ಪೂರಕವಾದಂಥ ನೋಟ್ಸ್ ಕೊಡಲಿ, ಇವೆಲ್ಲಾ ಏನೂ ಇಲ್ಲದೆ ನಾವು ಇಲ್ಲಿ ಬಂದು ಏನು ಚರ್ಚೆ ಮಾಡಬೇಕು? ನಮಗೆ ಅಜೆಂಡಾ ಇಲ್ಲದೇ ಏನೂ ಗೊತ್ತಿಲ್ಲ, ಸಾಕಷ್ಟು ಕಾಲಾವಕಾಶವಿಲ್ಲದೆ ಏನು ಕರೆದಿದ್ದೀರಿ ತಾವು ನಮ್ಮ ಹಕ್ಕಿಗೆ ಚ್ಯುತಿ ತಂದಿದ್ದೀರಿ. ನಮಗೆ ಮಾಹಿತಿಯನ್ನು ಒದಗಿಸದೇ ತಾವು ನಮ್ಮ ಹಕ್ಕಿಗೆ ಚ್ಯುತಿ ತಂದಿದ್ದೀರಿ. ನಾವು ಈ ಸಭೆಯಲ್ಲಿ ನಿಷ್ಪಕ್ಷಪಾತವಾಗಿ ಈ ಸಭೆಯಲ್ಲಿ ಮಾಹಿತಿ ಸಹಿತ ಮಾತನಾಡಲಿಕ್ಕೆ ಅಡಚಣೆ ಆಗಿದೆ. ಇಲ್ಲಿ ನಾವು ಬಂದಾಗ ಇದು

ಶಾಸನಸಭೆ ಎಂಬ ಭಾವನೆ ಬರಲಿಲ್ಲ. ಆದರೆ ಬೆಳಗಾವಿಗೆ ನಾವು ಏನೋ ಮಾಡಲು ಬಂದಿದ್ದೇವೆ ಅನ್ನಿಸಿತು. ನಾಗರೀಕರಿಗೆ ಸ್ಪಂದಿಸಬೇಕು, ನಿಜ. ಆದರೆ ನಾವು ಅವರಿಗೋಸ್ಕರ ನಾವು ಶಾಸನಸಭೆ ನಡೆಸಲು ಆಗುವುದಿಲ್ಲ. ನಾವು ನಿಯಮಗಳನ್ನು ಮಾಡಿಕೊಂಡಿದ್ದೇವೆ. Business has to be conducted in alegal and provisional way. ಕಾನೂನಿನ ಒಳಗೆ ಮಾಡಬೇಕಾದ್ದನ್ನು ಇವರು ಮಾಡಿಲ್ಲ. ಇದು ನಮ್ಮ ಹಕ್ಕುಚ್ಯುತಿ ನೋಟಿಸಿನ ಕಂಟೆಂಟ್. ಇದಕ್ಕೆ ಅಧ್ಯಕ್ಷರು ಏನು ರೂಲಿಂಗ್ ಕೊಡುತ್ತಾರೆ ಅಂತ ನಾವು ಕಾದು ನೋಡುತ್ತೇವೆ. ನಾವು ಯಾವ ಅಪಚಾರ ಮಾಡಿಲ್ಲ. ಪತ್ರಿಕೆಗಳಲ್ಲಿ ಬಂದ ಹಾಗೆ ನಾವು ಇಲ್ಲಿ ಸಭೆಯ ಸಮಯ ಹಾಳು ಮಾಡಬೇಕು, ಸಭೆಯನ್ನು ಮೂರು ದಿನ ನಡೆಯದ ಹಾಗೆ ಮಾಡಬೇಕು, ಬೆಳಗಾವಿ ಸಭೆಯನ್ನೂ ಬೆಂಗಳೂರಿನ ಸಬೆ ತರಹ ಮಾಡಬೇಕು ಎಂದು ಬಂದಿಲ್ಲ. ಇವತ್ತಿನವರೆಗೂ ಅಧಿವೇಶನಕ್ಕೆ ಅಡಚಣೆ ಮಾಡಬೇಕು ಅಂತ ಮಾತನಾಡಿಲ್ಲ. ಸ್ಪಷ್ಟವಾಗಿ ನಿಯಮಗಳನ್ನು ಮೀರಿ ತಾವು ನಡೆಸುತ್ತಿರುವುದು ತಪ್ಪು. ತಾವು ಅದನ್ನು reconsider ಮಾಡಬೇಕು. ತಾವು ಏನು ಮಾಡಿದ್ದೀರೋ ಅದನ್ನು ಕನಿಷ್ಠ ಸದಸ್ಯರು ಬಂದ ತಕ್ಷಣ ಅವರಿಗೆ ಹೇಳುವ ಸೌಜನ್ಯ ತೋರಿಸಬೇಕಾಗಿತ್ತು. ಮತ್ತೆ ಎಲ್ಲಾ ಮಾಹಿತಿಯನ್ನು bulletin ನಲ್ಲಿ ತಾವು ನಮಗೆ ಕೊಡಬೇಕಾಗಿತ್ತು. It is the requirement under rule, ನಮ್ಮ ದೊಡ್ಡಸ್ತಿಕೆಗಲ್ಲ. ನಿಯಮದ ಕೆಳಗೆ ಆ ಕೆಲಸ ಆಗಿಲ್ಲ. ಹಾಗಾಗಿ ನಮ್ಮ ಹಕ್ಕಿಗೆ ಚ್ಯುತಿ ಬಂದಿದೆ ಅಂತ ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಅಧ್ಯಕ್ಷರೇ, ಮುಖ್ಯವಾಗಿ ನಾನು ಸದನದ ಹೆಚ್ಚು ಸಮಯ ತೆಗೆದುಕೊಳ್ಳಲು ಹೋಗುವುದಿಲ್ಲ. ಇದರ ಬಗ್ಗೆ ರೆಡ್ಡಿಯವರು ಹಾಗೂ ಮಾಧುಸ್ವಾಮಿಯವರು ಬಹಳ ವಿವರವಾಗಿ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಶಾಸನಸಭೆ ಬೆಳಗಾವಿಯಲ್ಲಿ ಆಗುತ್ತದೆ ಎಂಬುದು ನಮಗೆಲ್ಲರಿಗೂ ಸಂತೋಷದ ವಿಷಯ. ಹೀಗಾಗಿ ನಾವಿದನ್ನು ಸ್ವಾಗತ ಮಾಡಿದ್ದೇವೆ. ಆದರೆ ಈ privilege motion move ಮಾಡಿದ ಉದ್ದೇಶವೇನು? ಇಲ್ಲಿ proceedings stall ಮಾಡಬೇಕು, Constitutional Crisis ಮಾಡಬೇಕು ಎಂಬುದು ನಮ್ಮ ಉದ್ದೇಶ ಅಲ್ಲ. ಯಾವುದೋ ಒಂದು ನಮ್ಮ ದೃಷ್ಟಿಯಿಂದ, ನಿಮ್ಮ ದೃಷ್ಟಿಯಲ್ಲಿ ಸರಿ ಇರಬಹುದು. ಸರ್ಕಾರದಿಂದ ಅಥವಾ Speaker's secretariat ಯಿಂದ ಲೋಪ ಆಗಿದೆ ಅಂತ ಗೊತ್ತಿದ್ದಾಗ ಅದನ್ನು ನಾವು ಇಲ್ಲಿ ತಮ್ಮ ಗಮನಕ್ಕೆ ತರಬೇಕಾಗುತ್ತೆ. ಅಧ್ಯಕ್ಷರೇ ತಾವು supreme, ತಮ್ಮ ನಾಯಕತ್ವದಲ್ಲಿ ತಮ್ಮ ಆದೇಶದಲ್ಲಿ ಈ ಸದನ ನಡೆಯಬೇಕು. ಈ ಸದನ ಸರ್ಕಾರಕ್ಕೆ ಅಧೀನವಾಗಿ ನಡೆಯಲು ಆಗುವುದಿಲ್ಲ. ಇದನ್ನು ಸಂವಿಧಾನದಲ್ಲೂ ಹೇಳಲಾಗಿದೆ, ನಮ್ಮ rules book ಸಹ ಹೇಳುತ್ತದೆ. ಇವತ್ತು ಬೆಳಗಾವಿಯಲ್ಲಿ ಅಧಿವೇಶನ ಮಾಡಿದಿರಿ, ನಮಗೆ ಬಹಳ ಸಂತೋಷವಿದೆ, ವಾಟಾಳ್ ನಾಗರಾಜ್ ಈ ಬೇಡಿಕೆ ಬಹಳ ದಿವಸದಿಂದ ಇಡುತ್ತ ಬಂದಿದ್ದಾರೆ. Secretariat office ಮಾಡಿ, MLA ಗಳಿಗೆ ಹಾಸ್ಟೆಲ್ ಮಾಡಿ. ದರೆ ಇವತ್ತೇನಾಗಿದೆ, ಅಧ್ಯಕ್ಷರು ತಾವು ಪರದೇಶಕ್ಕೆ ಹೋಗಿದ್ದಿರಿ.

ನಿಮ್ಮ ಅಸೆಂಟನ್ನು ತೆಗೆದುಕೊಳ್ಳಲಿಲ್ಲ. ಡೆಪ್ಯುಟಿ ಸ್ಪೀಕರ್ ಇದ್ದಾರೆ. ಅವರ ಆದೇಶವನ್ನು ತೆಗೆದುಕೊಂಡಿಲ್ಲ. ಸರ್ಕಾರದ ಉದ್ದೇಶ ಚೆನ್ನಾಗಿರಬಹುದು, ಈ ಅಧಿವೇಶನ ಚೆನ್ನಾಗಿ ಆಗಬೇಕು ಎಂದು ಇರಬಹುದು. ಆದರೆ ಅಧಿವೇಶನ ಪಕ್ಷಾತೀತವಾಗಿ ಆಗಬೇಕಾಗುತ್ತದೆ. ಆದರೆ ನೀವು ವಿರೋಧ ಪಕ್ಷದವರನ್ನು ಸಂಪರ್ಕಿಸಲಿಲ್ಲ. Rule 2 ಪ್ರಕಾರ ಇಲ್ಲಿ camp office ಮಾಡಬೇಕಾಗುತ್ತದೆ. ಅದರ ಮುಖಾಂತರ ಎಲ್ಲಾ ಪತ್ರವ್ಯವಹಾರ ನಡೆಯಬೇಕಾಗುತ್ತದೆ. ಆದರೆ ಇಲ್ಲಿ ಜಿಲ್ಲಾಧಿಕಾರಿಗಳು ನಮಗೆ ತಿಳಿಸಿಸುತ್ತಾರೆ. ಅದೇ ಸರ್ಕಾರದ ಆದೇಶದಂತೆ ಇದು ನಡೆಯಬಾರದು ಎಂಬುದೇ ನಮ್ಮ ವಾದ. ನಾನು September 12 ರಂದು ಬೆಳಗಾವಿಯಲ್ಲಿದ್ದೆ, ಆ ಸಂದರ್ಭದಲ್ಲಿ ನನಗೆ ಹೇಳಿದರು ಬೆಂಗಳೂರಿನಿಂದ Phone ಬಂದಿದೆ. CM Office ನಿಂದ, ಇಲ್ಲಿ ಅಧಿವೇಶನ ಮಾಡಬೇಕು ಅಂತ. ನಾನು ಸಂತೋಷ ಅಂದೆ. ಅಧಿಕಾರಿಗಳು ಇಲ್ಲಿ ಪ್ರಭಾಕರ ಕೋರೆ ಇನ್ನಿತರರನ್ನು ಕೇಳಿ ಎಲ್ಲಾ ವ್ಯವಸ್ಥೆಗಳನ್ನು ಮಾಡಿದ್ದಾರೆ. ಪ್ರಭಾಕರ ಕೋರೆ ಯಾರು? ಅವರು ನಮ್ಮ ಕಾಂಗ್ರೆಸ್ ಪಕ್ಷದ ಸದಸ್ಯರು. ಹಾಗಾಗಿ ಇಲ್ಲಿ ಅಧಿವೇಶನ ಆಗುತ್ತಿರುವುದು ನಮಗೆ ಸಂತೋಷವಿದೆ. ಆದರೆ ಆಗುವಾಗ ತಪ್ಪು Precedent ಕೂಡ ಆಗಬಾರದಲ್ಲಾ. ಇದನ್ನು ಸರ್ಕಾರದ ಗಮನಕ್ಕೆ ಜನತೆಯ ಗಮನಕ್ಕೆ ತರುವುದು ನಮ್ಮ ಕರ್ತವ್ಯವಾಗುತ್ತದೆ. ನನಗೆ 60 ವರ್ಷಗಳು, 60 ವರ್ಷದಿಂದ ಬೆಳಗಾವಿಗೆ ಬರುತ್ತಿದ್ದೇನೆ, ಆದರೆ ಈ ಸಲ ಬಂದಾಗ, ಇಲ್ಲೇನು assembly session ನಡೆದಿದೆಯೋ ಅಥವಾ political parties convention ನಡೆದಿದೆಯೊ ಎಂಬ ಭಾವನೆ ಬಂತು. ಈ ಭಾಗದ ಹೋರಾಟಗಾರರು ಕರ್ನಾಟಕ ಏಕೀಕರಣಕ್ಕೆ ಶ್ರಮಿಸಿದವರ posters ಇಲ್ಲ. ದೇವರಾಜ ಅರಸು, ವೀರೇಂದ್ರ ಪಾಟೀಲರು, ರಾಮಕೃಷ್ಣ ಹೆಗಡೆಯವರ ಬಗ್ಗೆ ಈ ಬಗ್ಗೆ ಇಲ್ಲಿ ಟೀಕೆ ಆಯಿತು. 1958 ರಲ್ಲಿ ಅವರು ಮುಖ್ಯಮಂತ್ರಿಯಾಗಿದ್ದಾಗ ಟೀಕೆ ಬರುತ್ತದೆ. ನಮ್ಮ ಗುರೂಜಿ, ಸಿದ್ದನಗೌಡ ಪಾಟೀಲರು, ವಾಟಾಳ್ ನಾಗರಾಜ್, ಸ್ಥಳೀಯರಾದ ಪಾಟೀಲ ಪುಟ್ಟಪ್ಪ, ಟೋಪಣ್ಣವರ್ ಹೀಗೆ ಬಹಳ ಮಹನೀಯರಿದ್ದರು, ಅವರ cut outs ಹಾಕಬೇಕಾಗಿತ್ತು. ಅವರನ್ನು ಅಧಿವೇಶನಕ್ಕೆ ಆಹ್ವಾನಿಸಬೇಕಾಗಿತ್ತು. ಹಾಗೆ ತಾವು ಮಾಡಲಿಲ್ಲ. ಇದು ಸರಿಯೇ ಅಂತ ನಾವು ವಿಚಾರ ಮಾಡಬೇಕಾಗಿತ್ತು. ಸರಿಯೋ ತಪ್ಪೋ ತಿಳಿದುಕೊಳ್ಳಬೇಕಾಗುತ್ತದಲ್ಲಾ. ಯಾವ ದುರುದ್ದೇಶದಿಂದ ನಾವು ಇಲ್ಲಿ ಮಾತನಾಡುತ್ತಿಲ್ಲ. ಘನ ಸರ್ಕಾರ ಕೂಡ ಇದಕ್ಕೆ ಉತ್ತರ ಕೊಡುವಾಗ ಪ್ರಾಮಾಣಿಕವಾಗಿ ಎಲ್ಲಿ ತಪ್ಪಾಗಿದೆ ಅಂತ ಒಪ್ಪಿಕೊಳ್ಳಬೇಕು. ತಪ್ಪು ಎಲ್ಲರೂ ಮಾಡುತ್ತಾರೆ, ನಾವು ಅಧಿಕಾರದಲ್ಲಿದ್ದಾಗ ತಪ್ಪು ಮಾಡಲಿಲ್ಲ ಅಂತ ಹೇಳುವುದಿಲ್ಲ. ದುರುದ್ದೇಶದಿಂದ ಮಾಡಿದ್ದೀರಿ ಅಂತಲೂ ಹೇಳುವುದಿಲ್ಲ. ಆದರೆ ಇವತ್ತು ಏನು ಲೋಪಗಳಾಗಿವೆ ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇನ್ನು ಮುಂದೆ ಇಂತಹ ಲೋಪವಾಗದಂತೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ನಾನು ವಿನಂತಿ ಮಾಡುತ್ತೇನೆ; ಈ ಮನೆ ಅಧೀನದಲ್ಲಿ ಸರ್ಕಾರ ಇರಬೇಕು. Government is the creation of this House. So we are not subordinate to the Government. ಹಾಗಾಗಿ ಶಾಸಕರು ಸರ್ಕಾರಕ್ಕೆ Subordinate ಆಗಿ ಕೆಲಸ ಮಡಲು ಆಗುವುದಿಲ್ಲ. ಆ ದೃಷ್ಟಿಯಿಂದ ಇವತ್ತು privilege motion move ಮಾಡಿದ್ದೇವೆ. ಅದಕ್ಕೆ ನ್ಯಾಯ ಕೊಡಬೇಕು ಅಂತ ತಮ್ಮಲ್ಲಿ ಕೋರುತ್ತಾ ಇನ್ನು ಮುಂದೆ ಎಲ್ಲೇ session ಆದರೂ ಅದರ

ಪಾವಿತ್ರ್ಯತೆ ಕಾಪಾಡಬೇಕು. ಮುಖ್ಯಮಂತ್ರಿಗಳು ಉಪ ಮುಖ್ಯಮಂತ್ರಿಗಳು ಬಂದಾಗ ಅವರನ್ನು ಸ್ವಾಗತಿಸಬಾರದು ಅಂತ ನಾನು ಹೇಳುವುದಿಲ್ಲ. ಬೆಳಗಾಂನಲ್ಲಿ ನೋಡಿದರೆ JDS, BJP Convention ತರಹ ಕಾಣುತ್ತದೆ ವಿನಾ session ನ ಪಾವಿತ್ರ್ಯತೆ ಕಾಣುವುದಿಲ್ಲ, ಎಂದು ನಾನು ಹೇಳುತ್ತಾ ಅದರ ಮಹತ್ವ ಕಡಿಮೆ ಮಾಡಬೇಡಿ ಅಂತ ನಾನು ಬಹಳ ವಿನಯದಿಂದ ಕೇಳಿಕೊಳ್ಳುತ್ತೇನೆ. ವಂದನೆಗಳು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಅಧ್ಯಕ್ಷರೇ, ನಾವು ಉದ್ದೇಶಪೂರ್ವಕವಾಗಿ ಹಕ್ಕುಚ್ಯುತಿ ನಿರ್ಣಯ ತಂದು ಸಮಯ ಹಾಳು ಮಾಡಬೇಕೆಂದು ಯಾರೂ ಇಲ್ಲ. ಆದರೆ ಶಾಸನಸಭೆ ಅಂದಾಗ ಸಂವಿಧಾನ ಶಾಸನಸಭೆಗೆ ತನ್ನದೇ ಆದ ಶಕ್ತಿಯನ್ನು ಕೊಟ್ಟಿದೆ. ತನ್ನದೇ ಆದ ಆದರ್ಶ ನಿಯಮಗಳನ್ನು ಮಾಡಿದೆ. ಈ ಸದನದ ಸರ್ವಸ್ವ ಇರುವುದು ಅಧ್ಯಕ್ಷರ ಜವಾಬ್ದಾರಿ. ಈ ಸದನ ನಡೆದದ್ದೇನೋ ನನಗೆ ನಿಜಕ್ಕೂ ಬಹಳ ಸಂತೊಷ. ಅತ್ಯುನ್ನತವಾಗಿ ಒಂದು ಹಂಡೆ ಹಾಲು ಕುಡಿದಷ್ಟು ಸಂತೋಷವಾಗಿದೆ. ಈ ನಾಡಿನಲ್ಲಿ ಗಂಡುಮೆಟ್ಟಿದ ಈ ನೆಲದಲ್ಲಿ ಅಧಿವೇಶನ ಆಗಬೇಕಾಗಿತ್ತು. ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಆದರೆ ಸದನ ನಡೆಸುವಾಗ ವಿಧಾನಗಳಿವೆಯಲ್ಲಾ, ಅವುಗಳ ಬಗ್ಗೆ ನಮ್ಮದು ಪ್ರಾಮಾಣಿಕತೆ ತಕರಾರಿದೆ. ಸದನದ ವ್ಯವಸ್ಥೆ ಅಧ್ಯಕ್ಷರದ್ದು. ತಾವು ಈ ಸದನದ ಅಧ್ಯಕ್ಷರಾಗಿದ್ದೀರಿ. ನಮ್ಮ ಬೆಂಗಳೂರಿನಲ್ಲಿ, ರಾಜಧಾನಿಯಲ್ಲಿ ನಡೆಯತಕ್ಕ ಅಧಿವೇಶನ, ಅದರ ವ್ಯವಸ್ಥೆ ಅಧಿವೇಶನ ನಡೆಯತಕ್ಕ ರೀತಿಯಲ್ಲಿ ಎಲ್ಲವನ್ನೂ ಇಲ್ಲಿ ಮಾಡಬೇಕಾಗುತ್ತದೆ. ಅನೇಕ ಲೋಪಗಳು ಆಗಿವೆ. ಮೊದಲನೆಯದಾಗಿ ಸದನ ಸೇರುವುದಕ್ಕಿಂತ ಮುಂಚೆ ಸದನದ ಸಲಹಾ ಸಮಿತಿಯನ್ನು ತಾವು ನೇರವಾಗಿ ಕರೆಯಬೇಕಾಗಿತ್ತು. ಸಲಹಾ ಸಮಿತಿಯನ್ನು ಕರೆದು ಸಲಹಾ ಸಮಿತಿಯಲ್ಲಿ ಈ ಬೆಳಗಾಂಯಲ್ಲಿ ನಡೆಯತಕ್ಕಂಥ ಅಧಿವೇಶನದಲ್ಲಿ ಯಾವ ಯಾವ ವಿಚಾರಗಳ ಬಗ್ಗೆ ನಾವು ಚರ್ಚೆ ಮಾಡಬೇಕು, ಏನು ವಿಚಾರಗಳನ್ನು ಮಾಡಬೇಕು ಎನ್ನುವುದಲ್ಲದೇ ಇನ್ನೂ ಅನೇಕ ವಿಚಾರಗಳನ್ನು ಚರ್ಚೆ ಮಾಡಲು ನಿರ್ಧರಿಸಲು ತಮಗೆ ಅಧಿಕಾರ ಇದೆ. ಈ ವಿಚಾರದಲ್ಲಿ ಅತ್ಯಂತ ಲೋಪ ಆಗಿದೆ. ಎರಡನೆಯದಾಗಿ ಈ ಸದನ ನಡೆಯುತ್ತಿರುವುದು ಕರ್ನಾಟಕ ಏಕೀಕರಣ ಆದ ನಂತರ. ಬೆಂಗಳೂರಿನಲ್ಲಿ 25ನೇ ವರ್ಷದ ಅಧಿವೇಶನ ನಡೆಯಿತು. ಬಹುಶಃ ಈ ಅಧಿವೇಶನ ನವೆಂಬರ್‌ನಲ್ಲಿ ಕರೆದಿದ್ದರೆ ಬಹಳ ಅತ್ಯಂತ ಮತ್ತು ಇತಿಹಾಸ ನಿರ್ಮಾಣ ಆಗುತ್ತಿತ್ತು. ಈಗಲೂ ಇತಿಹಾಸಕ್ಕೆ ಏನೂ ಭಂಗ ಆಗಿದೆ ಎಂದು ನಾನು ಹೇಳುತ್ತಿಲ್ಲ. ನವೆಂಬರ್ ಬಂದಿದ್ದರೆ, ಚೆನ್ನಾಗಿತ್ತು. ನವೆಂಬರ್ ತಿಂಗಳಲ್ಲಿ ಏನು ವಿಶೇಷ? 50ನೇ ವರ್ಷದ ಸಮಾರಂಭ ನಾವು ಕಾಣುತ್ತಿರುವುದು ನವೆಂಬರ್‌ನಲ್ಲಿ. ನನಗೆ ಅನ್ನಿಸುತ್ತದೆ. ತಾವು ಕುಳಿತಿರತಕ್ಕ ಪೀಠ ಬಹಳ ಗಂಭೀರವಾಗಿ ಮಾಡಿದ್ದಾರೆ. ಮೇಲೆ ತಕ್ಕಡಿ. ಈ ಸದನ ಹೇಗಿರಬೇಕು? ನೀವು ಆಲೋಚನೆ ಮಾಡಬೇಕಾಗಿತ್ತು. ಈ ಸದನವನ್ನೇ ಪರಿವರ್ತನೆ ಮಾಡಿದ ಮೇಲೆ ಬೆಂಗಳೂರಿನ ವಿಧಾನ ಸಭೆಯಲ್ಲಿನ ಚಿತ್ರಗಳು ಇರುವಂತೆ ಇಲ್ಲೂ ಇರಬೇಕಾಗಿತ್ತು. ಸದನದಲ್ಲಿ ಎಲ್ಲಾ ರಾಷ್ಟ್ರ ನಾಯಕರ ಚಿತ್ರ ಪಟ ಇರಬೇಕಾಗಿತ್ತು. ಈ ಸದನ ಇಲ್ಲಿ ಆಗಬೇಕು ಎಂದು ಹೇಳಿ ಯಾರ್ಯಾರು ಚಿಂತನೆ ಮಾಡಿದರು? ಆ ಚಿಂತಕರ ಬಗ್ಗೆ ಆದರೂ ಚರ್ಚೆ ಆಗಬೇಕಾಗಿತ್ತು. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಸದನ ಮಾಡುತ್ತೇವೆಂದು ಹೇಳಿ

ನಮ್ಮೆಲ್ಲರನ್ನೂ ಕರೆದರು. ಮಾನ್ಯ ಪ್ರಕಾಶ್ ಅವರು ನಮ್ಮನ್ನು ಕರೆಯಬಹುದಿತ್ತಲ್ಲಾ. "ಈ ತರಹ ಸದನ ಮಾಡುತ್ತಿದ್ದೇವೆ. ಈ ಸಾರಿ ಬೆಳಗಾವಿಯಲ್ಲಿ ಮಾಡುತ್ತಿದ್ದೇವೆ" ಎಂದು ಹೇಳಬಹುದಿತ್ತು. ನಾವು ನಿಮ್ಮನ್ನು ಬಿಟ್ಟು ಬೇರೆ ಸದನ ನಡೆಸುತ್ತಿದ್ದೆವಾ? ನೀವು ಕರೆದ ತಕ್ಷಣ ನಾವು ಬಂದೆವು. ಸೌಜನ್ಯಕ್ಕಾದರೂ ಕರೆಯಬಹುದಾಗಿತ್ತು. ನೀವು ಕರೆಯಲೇ ಬೇಕು. ಅದು ನಿಮ್ಮ ಕರ್ತವ್ಯ. ನಾವು ಯಾರೂ ಇಲ್ಲಿ ಅಧಿಕಾರಿಗಳು ಮಾಡಿದರು, ಅದರ ಬಗ್ಗೆ ನಾವು ಆಕ್ಷೇಪಣೆ ಮಾಡುತ್ತಾ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : 1, 2, 3, 4 ಈ ರೀತಿಯಾದಂತಹ ಕೆಲಸಗಳನ್ನು ಮಾಡಿಲ್ಲ, ಮುಂದೆ ಮಾಡಿ ಎಂದು ಹೇಳಿ ಎರಡು ನಿಮಿಷದಲ್ಲಿ ಮುಗಿಸಿಬಿಡಿ.

ಶ್ರೀ ವಾಟಾಳ್ ನಾಗರಾಜ್ : ತಾವು ವಿರೋಧ ಪಕ್ಷದ ನಾಯಕನ ಸ್ಥಾನದಲ್ಲಿ ಕೆಲಸ ಮಾಡಿದ್ದೀರಿ. ಈಗ ತಾವು ಮಾನ್ಯ ಉಪ ಮುಖ್ಯಮಂತ್ರಿಗಳಾಗಿ ಕುಳಿತಿದ್ದೀರಿ, ಸಂತೋಷ. ವಿರೋಧ ಪಕ್ಷದ ನಾಯಕರಾಗಿ ತಾವು ಇಲ್ಲಿ ಕುಳಿತಿದ್ದರೆ ತಮಗೆ ಗೊತ್ತಾಗುತ್ತಿತ್ತು. ನಾನು ಹಿಂದೆ ಅನೇಕ ಸಾರಿ ಹೇಳಿದ್ದೇನೆ. ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಸತ್ತ ಶವಕ್ಕೆ ಜೀವವನ್ನು ಕೊಟ್ಟು, ಆ ಶವದಲ್ಲಿ ಮಾತನಾಡಿಸುತ್ತಿದ್ದರು. ಈಗ ಅಲ್ಲಿ ಹೋದಾಗ ಅವರು ಬೇರೆ ಪಾತ್ರವಾಗಿದ್ದಾರೆ. ಆದರೆ ನನಗೆ ಅನಿಸುತ್ತದೆ. ಇವತ್ತು ಅನೇಕ ವಿಚಾರಗಳಲ್ಲಿ ಲೋಪ ನೇರವಾಗಿ ಕಂಡು ಬಂದಿದೆ. ಅದರ ಬಗ್ಗೆ ಏನೂ ಸಂದೇಹ ಇಲ್ಲ. ಎರಡು ಮಾತುಗಳನ್ನು ಇಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. ಇಲ್ಲಿ ಬಹಳ ಪ್ರಾಮುಖ್ಯವಾಗಿ ಬೆಳಗಾವಿಯಲ್ಲಿ ನಡೆಯುವ ಅಧಿವೇಶನ ಕುರಿತಂತೆ ಸಲಹಾ ಸಮಿತಿಯನ್ನು ಕರೆಯದೇ ಮಾಡಿರತಕ್ಕಂಥ ಸಭೆ ಎಂದು ಹೇಳುತ್ತೇನೆ. ಇದು ಒಂದು ಎರಡನೇಯದಾಗಿ ಹಕ್ಕುಚ್ಯುತಿ ನಿರ್ಣಯವನ್ನು ತಮಗೆ ಕೊಡಲು, ಎಲ್ಲಿ ಕೊಡಬೇಕು? ನೀವೆಲ್ಲಿದ್ದಿರಿ? ತಮ್ಮ ಸ್ಥಳ ಯಾವುದು? Speaker ಗೆ ಒಂದು ಕಾರ್ಯಾಲಯ ಬೇಕಲ್ಲಾ? ಅದು ಎಲ್ಲಿದೆ? ನಾನು ಹಾಗೂ ಮಾನ್ಯ ಮಾಧುಸ್ವಾಮಿ ಅವರೆಲ್ಲಾ ಎಲ್ಲಿದ್ದಾರೆ Speaker ಅವರು ವಿದೇಶದಿಂದ ಬಂದರಂತೆ ಎಂದು ಕೇಳುತ್ತಿದ್ದೆವು. ನೀವು ಎಲ್ಲಿದ್ದೀರಿ ಎನ್ನತಕ್ಕ ವಿಚಾರ ನಮಗೆ ಗೊತ್ತಾಗಲಿಲ್ಲ. ಅದರಿಂದ ನನಗೆ ಅನಿಸುತ್ತದೆ, ಸದನವನ್ನು ಕಾನೂನು ಬಾಹಿರವಾಗಿ ನಡೆಸತಕ್ಕ ವಿಚಾರ, ಆಗಬಾರದು. ಇದು ಶಾಸಕರ ಸಭೆ ಆಗುತ್ತದೆಯೇ ಹೊರತು ಶಾಸನಸಭೆ ಆಗುವುದಿಲ್ಲ. ಆದ್ದರಿಂದ ಹೀಗೆ ಮಾಡಕೂಡದು. ಸಭೆ ಎಂದರೆ ಯಾರು ಬೇಕಾದರೂ ಬರಬಹುದು. ಶಾಸನಸಭೆ ನಡೆಸುವಾಗ ಅದಕ್ಕೆ ವಿಶಿಷ್ಟವಾದಂಥ ಸಂವಿಧಾನ ಬದ್ಧವಾಗಿ ಅದಕ್ಕೆ ಸಮಗ್ರವಾಗಿ ಒಂದು ಇತಿಹಾಸ ಇದೆ. ಆದ್ದರಿಂದ ಆ ದೃಷ್ಟಿಯಿಂದ ಈ ವಿಷಯದಲ್ಲಿ ಸಂಪೂರ್ಣವಾಗಿ ಹಕ್ಕು ಚ್ಯುತಿ ಆಗುತ್ತದೆ. ಹಕ್ಕುಚ್ಯುತಿ ಸೂಚನೆ ಕಳಿಸಬೇಕು ಎಂದರೆ ಎಲ್ಲಿಗೆ ಕಳಿಸಬೇಕಾಗಿತ್ತು ಎಂದೇ ಪ್ರಶ್ನೆ ಆಗಿರುವುದು. ಇಲ್ಲಿ ಸಭೆ ನಡೆದುದರ ಬಗ್ಗೆ ಸ್ವಾಗತ ಮಾಡುತ್ತೇನೆ. ಅದರ ಬಗ್ಗೆ ಎರಡನೇ ಮಾತಿಲ್ಲ. ಮಾನ್ಯ ದೇಶಪಾಂಡೆಯವರು ಹೇಳಿದ ರೀತಿಯಲ್ಲಿ ಅನೇಕರು ಬೆಳಗಾವಿಯಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯ ವಿರುದ್ಧ ಹೋರಾಟ ಮಾಡಿದಂಥ ಅನೇಕ ಜನ ಹರಿಕಾರರಲ್ಲಿ ಹರಿ ದೇಶಪಾಂಡೆ ಎನ್ನುವವರು ಇಲ್ಲಿನ ಸುಭಾಷ್ ನಗರದಲ್ಲಿ ಇದ್ದರು. ಅವರು ನಿಧನ ಆಗಿ ಬಹಳ ವರ್ಷಗಳೇ ಆದರೂ ಅವರ ಬಗ್ಗೆ ನಾವು ಸಂತಾಪ ಸೂಚನೆಯನ್ನು ತೆಗೆದುಕೊಳ್ಳಬೇಕಾಗಿತ್ತು. ಹೀಗೆ ಅನೇಕರು ಹೋರಾಟ ಮಾಡಿದಂಥವರು ಇದ್ದಾರೆ. ಪತ್ರಕರ್ತರು

ಇದ್ದಾರೆ. ರಾಜಕಾರಣಿಗಳು ಇದ್ದಾರೆ. ಸರ್ವ ಪಕ್ಷದ ಮುಖಂಡರು ಇದ್ದಾರೆ. ಅವರೆಲ್ಲರನ್ನೂ ಕರೆದು ನಾವು ಮಾತನಾಡಿ ಇಲ್ಲಿ ಸದನ ಆಗಬೇಕು ಎಂದು ಹೇಳಿ ಅವರ ಸಮಾಲೋಚನೆ ತೆಗೆದುಕೊಳ್ಳಬೇಕಿತ್ತು. ಇಲ್ಲಿ ಸದನ ನಡೆಯಬೇಕು ಎಂದು ಹತ್ತಾರು ವರ್ಷ ಹೋರಾಟ ಮಾಡಿಕೊಂಡು ಬಂದಂಥವರ ಬಗ್ಗೆ ಗಮನ ಹರಿಸಿಲ್ಲ. ಈ ರೀತಿ ಹಕ್ಕುಚ್ಯುತಿ ಆಗಿರುವ ವಿಚಾರಗಳ ಬಗ್ಗೆ ತಾವು ತೀರ್ಮ ಕೊಡಬೇಕಾಗುತ್ತದೆ ಎಂದು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) : ಮಾನ್ಯ ಸಭಾಧ್ಯಕ್ಷರೆ, ಈಗ ಹಕ್ಕುಚ್ಯುತಿ ಬಗ್ಗೆ ಎಲ್ಲರೂ ಮಾತನಾಡಿದರು. Welcome to Belgaum-Deputy Commissioner ಎಂದು ಬರೆದಿದ್ದರೆ ಸಂತೋಷ. Deputy commissioner-Welcome to specific Session ಎಂದರೆ ತಪ್ಪಾಗುತ್ತದೆ. ನಾವು ಮಾತನಾಡುವ time ನಲ್ಲಿ ಹೇಳಿದೆವು. Deputy Commissioner ಬಹಳ ಚೆನ್ನಾಗಿ ಏರ್ಪಾಡು ಮಾಡಿದರು. ನಿಜ. ಸಿನೆಮಾ ಕೂಡ ನೋಡಿದ್ದೇವೆ. ನಾವು appreciate ಮಾಡಬೇಕು. ಇಷ್ಟು ಬೇಗ fast time ನಲ್ಲಿ ಈ Session ವಿಧಾನ ಸೌಧ ತರಹ ಇದೆ, ಬಹಳ ಸಂತೋಷ. ಇದನ್ನು Development ನಲ್ಲಿ ತೋರಿಸಬೇಕಾಗಿತ್ತು. ನಾವು ಏನಾದರೂ ಸಲಹೆ ಕೊಟ್ಟರೆ, ಒಂದು ಆರು ತಿಂಗಳು ತೆಗೆದುಕೊಂಡು, ಒಂದು ವರ್ಷ ತೆಗೆದುಕೊಂಡು ಮಾಡುವುದಲ್ಲ. ಈ ಬೆಳಗಾಮ್ ವಿಧಾನಸೌಧದ ತರಹ ಕೆಲಸ ಮಾಡಬೇಕು. ಜನ ಅಲೆಯಬಾರದು. ಅವರಿಗೆ ಸಂತೋಷ ಆಗುತ್ತದೆ. ಅಧ್ಯಕ್ಷರೆ, ಎಲ್ಲಿ ಹಕ್ಕುಚ್ಯುತಿ ಆಯಿತು ಎಂದರೆ ಒಂದು ಉದಾಹರಣೆ ಕೊಡುತ್ತೇನೆ. ಸಾಮಾನ್ಯ ಒಬ್ಬ ಬಡವ ಮತ್ತು ಸಾಹುಕಾರ, ದುಡ್ಡು ಇಟ್ಟುಕೊಂಡವನು ಹೆಣ್ಣು ಮಗಳನ್ನು ಮದುವೆ ಮಾಡಿ ಕೊಡಬೇಕೆಂದಾಗ ಬಡವನಿಗೆ ಇವಳ ಮೇಲೆ ಬಹಳ ಪ್ರೀತಿ. ಇವಳನ್ನು ಹೇಗಾದರೂ ಮದುವೆ ಮಾಡಿಕೊಳ್ಳಬೇಕು ಎಂದು. ಅವನು ಬಡವನು, ಅವನಿಗೆ ಕೊಡುವುದಕ್ಕೆ ಆಗುವುದಿಲ್ಲ. ಏನೋ ಒಂದು time, ಗ್ರಹಚಾರ ಇವನಿಗೆ ಹೆಣ್ಣು ಮಗಳನ್ನು ಕೊಡಬೇಕೆಂದು ಸಾಹುಕಾರ ಯೋಚನೆ ಮಾಡಿ. ಅವನನ್ನು ಕರೆದು ಸ್ನಾನ ಮಾಡಿಸಿ, ಒಳ್ಳೆಯ ಬಟ್ಟೆ ಹಾಕಿ, ಕಾಲರ್, Muffler ಎಲ್ಲಾ ಕೊಟ್ಟು ಮದುವೆ ಮಾಡಬೇಕು ಎಂದು ಹೇಳಿದ ಕ್ಷಣ ಬಡವನಿಗೆ ಒಂದು ಚಿಂತನೆ ಬರುತ್ತದೆ. ನಾನು ಬಡವನು, ಏನು ಕಾಲರ್, muffler ಹಾಕಿಕೊಂಡರೆ ಇಂತಹ ಸುಂದರ ಹುಡುಗಿಗೆ ಏನಾದರೂ kidney failure ಆಗಿರಬಹುದು. ಕಣ್ಣು ಕಾಣಿಸದೇ ಇರಬಹುದು. ಈ ತರಹ ಒಂದು ಯೋಚನೆ ಬರುತ್ತದೆ. ಆದುದರಿಂದ ಏಕೆ ಚಿಂತೆ ಆಗುತ್ತದೆ ಎಂದರೆ ಏನು ಇಷ್ಟು ಬೇಗ ಬೇಗ ಬೆಳಗಾಮ್‌ನಲ್ಲಿ ಎಲ್ಲಾ ಕರೆದು ಇಷ್ಟು ಬೇಗ ಅಧಿವೇಶನ ಮಾಡುತ್ತಿದ್ದಾರೆ. ನಮಗೆ ಏನೂ ಕೊಡಲಿಲ್ಲವೇ, ಅದ್ದರಿಂದ ಇದು ಹಕ್ಕುಚ್ಯುತಿ ಹೇಗಾಗುತ್ತದೆ ಎಂದರೆ, ನಮಗೆ ನಿಜವಾಗಲೂ ಬೆಳಗಾಂನಲ್ಲಿ Session ಇದೆ ಇಂದು ಗೊತ್ತಿರಲಿಲ್ಲ. ಬಹುಶಃ BJP ಯವರಿಗೆ ಗೊತ್ತಿಲ್ಲ ಎನ್ನುವ ಸುದ್ದಿ. ಅವರಿಗೂ ಗೊತ್ತಿಲ್ಲ ಎಂದು ಕಾಣಿಸುತ್ತದೆ. ಈಗಲೂ ಅವರಿಗೂ ಗೊತ್ತಿಲ್ಲ. ನಮಗೂ ಗೊತ್ತಿಲ್ಲ ಬೆಳಗಾಂನಲ್ಲಿ Session ನಡೆಯಲೇಬೇಕು. ನಾವು co-operate ಮಾಡಬೇಕು. ನಾವು ನಿಜವಾಗಲೂ ಪೂರ್ತಿಯಾಗಿ co-operate ಮಾಡಿದೆವು. ಆದರೂ ಒಂದೆರಡು ನಿಮಿಷ Speaker

ಸಾಹೇಬರೇ, ಅವಕಾಶ ಕೊಟ್ಟು ಬಿಟ್ಟಿದ್ದರೆ ಈ ಗೊಂದಲ ಆಗುತ್ತಿರಲಿಲ್ಲ. ನಾವು ಮುಗಿಸಿ ಬಿಡುತ್ತಿದ್ದೆವು. ಎಲ್ಲಾ ಬೆಳಗಾಮ್‌ನಲ್ಲಿ ಏರ್ಪಾಡು ಚೆನ್ನಾಗಿದೆ. Session ಪೂರ್ತಿ ವಿಧಾನಸೌಧ ತರಹ ಇದೆ. But still a change. Speaker ಸರಿ ಇಲ್ಲ. ಅಂದರೆ Speaker system ಸರಿ ಇಲ್ಲ.

ಶ್ರೀ ಆರಗ ಜ್ಞಾನೇಂದ್ರ : ಧ್ವನಿ ವರ್ಧಕ ಸರಿ ಇಲ್ಲ. Speaker ಸರಿ ಇಲ್ಲ ಅಂದರೆ ಹೇಗಾಗುತ್ತದೆ?

(ಅಡಚಣೆ)

ಶ್ರೀ ಆರಗ ಜ್ಞಾನೇಂದ್ರ : ಅದು ಇನ್ನೊಂದು ಹಕ್ಕುಚ್ಯುತಿ ಆಗುತ್ತದೆ.

2.30. P.M.

ಶ್ರೀ ಎಸ್. ರಾಜೇಂದ್ರನ್ : ಸ್ಪೀಕರ್ ಸ್ಥಾನ ಬಹಳ ದೊಡ್ಡದು. ಈ ಪೀಠ ಯಾವಾಗಲೂ ಉನ್ನತ. ಮಾನ್ಯ ಪಾಟೀಲ್ ನಾಗರಾಜ್ ಸಾಹೇಬರು ಹೇಳಿದರು. ಶ್ರೀ ವೈಕುಂಠ ಬಾಳಿಗಾ ತರಹ ಇರುವುದಕ್ಕೆ ಆಗುವುದಿಲ್ಲ. ಇನ್ನೊಂದು Generation first ನಮ್ಮ ಕೃಷ್ಣ ಸಾಹೇಬರು ಕುಳಿತಂಥ ಪೀಠ ಇದು. ಆದರೂ ಪೀಠದ ಗೌರವ ಇರುತ್ತದೆ. Next Session Belgaum ನಲ್ಲಿ ಮಾಡುವುದಾದರೆ ಒಳ್ಳೆಯ Speaker system ಮಾಡಿ ಬಿಟ್ಟರೆ ಒಳ್ಳೆಯದು. Loud speaker System ಒಳ್ಳೆಯದು ಮಾಡಿ. ಅದೊಂದೇ ಗೊಂದಲ ಇಲ್ಲಿ. ಮಿಕ್ಕಿದ್ದು ಎಲ್ಲಾ ಚೆನ್ನಾಗಿದೆ. Next Time, ನಮಗೂ privilege ಇದೆ. ನಮಗೆ ಅವಕಾಶ ಕೊಡಬೇಕು. Deputy Commissioner Letter ಬರೆದಿದ್ದರು. ಏನೆಂದು ಬರೆದಿದ್ದರು? ಇಂಥ ಇಂಥ ನಂಬರ್‌ಗೆ ಇಂಥಿಂಥವರನ್ನು contact ಮಾಡಿ, ಬೆಳಗಾಂನಲ್ಲಿ ಇರುವವರನ್ನು contact ಮಾಡಿ ಪತ್ರ ಬರೆದಿದ್ದರು. ನಾನು ಬಹಳ ಖುಷಿಯಾಗಿ phone ಮಾಡಿದೆ. ಬೆಂಗಳೂರಿನಲ್ಲಿ particular office ಇದೆ. Sorry Sir, I cannot make arrangements for Flight ticket, ನೀವೇ arrangement ಮಾಡಿಕೊಳ್ಳಬೇಕು ಎಂದು ಹೇಳಿದರು. ಇದನ್ನು ಹೇಳುವುದಕ್ಕೆ ಅವರು ಇದ್ದ ಹಾಗೆ ಆಯಿತು. ನಾವು Arrangements ಮಾಡಿಕೊಳ್ಳಬೇಕು. ನಾನು bullock cart ನಲ್ಲಿ ಬರುತ್ತೇನೋ, ಬೈಸಿಕಲ್‌ನಲ್ಲಿ ಬರುತ್ತೇನೋ. ಇದೆಲ್ಲಾ ಬಿಟ್ಟು ಅವರನ್ನು ಕಾಂಟ್ಯಾಕ್ಟ್ ಮಾಡಿದರೆ ನಾವು only PRO ಎನ್ನುತ್ತಾರೆ. ಎಲ್ಲಿ ರೈಲ್ವೆ ಸ್ಟೇಶನ್ ಇದೆ, ಎಲ್ಲಿ ಏರ್‌ಪೋರ್ಟ್ ಇದೆಯೆಂದು ನಮಗೆ ಗೊತ್ತಿಲ್ಲವೇ? ಆದ ಕಾರಣ, ಇರುವ ಗೊಂದಲಗಳೆಲ್ಲವನ್ನೂ ಸರಿಪಡಿಸಿಕೊಂಡರೆ ನಾವೆಲ್ಲರೂ ಅವರಿಗೆ ಪೂರ್ತಿ ಬೆಂಬಲ ಕೊಡುತ್ತೇನೆ. ಇನ್ನು ಹಕ್ಕುಚ್ಯುತಿಗೆ ಸಂಬಂಧಿಸಿದಂತೆ ನಾನು ಅವರ ಪರವಾಗಿಯೂ ಮಾತನಾಡುವುದಿಲ್ಲ, ಇವರ ಪರವಾಗಿಯೂ ಮಾತನಾಡುವುದಿಲ್ಲ. ಈ ಸದನದೊಳಗೆ ಸತ್ಯಾಂಶ ಮಾತನಾಡಬೇಕು. ನಾನು ಈಗ ಅದನ್ನೇ ಮಾಡುತ್ತಿದ್ದೇನೆ. ಹಕ್ಕುಚ್ಯುತಿ ಬಗ್ಗೆ ತಾವು ರೂಲಿಂಗ್ ಕೊಡುತ್ತೀರಿ. ತಾವು ಒಳ್ಳೆಯ ರೂಲಿಂಗ್ ಕೊಡಬೇಕು. ನೋಟೀಸ್ ತೆಗೆದುಕೊಂಡು ಬಂದಿದ್ದೇವೆ. ತಾವು ಏನು ರೂಲಿಂಗ್ ಕೊಡುತ್ತೀರೋ, ಕೊಡಿ. ನಾವು ಅದನ್ನು ಸ್ವಾಗತಿಸುತ್ತೇವೆ.

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ) : ಸನ್ಮಾನ್ಯ ಅಧ್ಯಕ್ಷರೆ, ಬೆಳಗಾವಿಯಲ್ಲಿ ಪ್ರಥಮಬಾರಿಗೆ ಅಧಿವೇಶನ ನಡೆಸುತ್ತಿರುವುದನ್ನು ನಾನು ಮತ್ತು ನಮ್ಮ ಕಾಂಗ್ರೆಸ್ ಪಕ್ಷದ ಎಲ್ಲಾ ನಾಯಕರು ವಿಧಾನಸಭಾ ಸದಸ್ಯರೆಲ್ಲರೂ ಸಂಪೂರ್ಣವಾಗಿ ಸ್ವಾಗತಿಸುತ್ತೇವೆ. ಇದೊಂದು ಐತಿಹಾಸಿಕ ನಿರ್ಣಯ. ಸುವರ್ಣ ಮಹೋತ್ಸವ ಆಚರಿಸುತ್ತಿರುವ ಸಂದರ್ಭದಲ್ಲಿ ಇಲ್ಲಿ ಸದನ ಸೇರಬೇಕೆಂದು ತೆಗೆದುಕೊಂಡಂಥ ತೀರ್ಮಾನವನ್ನು ನಾವೆಲ್ಲರೂ ಪಕ್ಷಾತೀತವಾಗಿ ಸ್ವಾಗತಿಸಬೇಕಾಗುತ್ತದೆ. ಇವೊತ್ತು ಬೆಳಗಾವಿಯಲ್ಲಾಗಲಿ ಅಥವಾ ಬೇರೆ ಕಡೆ ಅಧಿವೇಶನ ನಡೆಯಬೇಕೆಂದು ಕಳೆದ ಹಲವಾರು ದಶಕಗಳಿಂದ ಚರ್ಚೆಯಾಗುತ್ತಲೇ ಬಂದಿತ್ತು. ತಮಗೆ ಗೊತ್ತಿದೆ. ನೀವು ಬೋರೇಗೌಡರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಕೂಡ ನೇಮಕ ಮಾಡಿದ್ದೀರಿ. ಹಿಂದೆ ಧರ್ಮಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಈ ವಿಷಯ ಪ್ರಸ್ತಾಪವಾದಾಗ ಹೊರಗಡೆ ಅಧಿವೇಶನ ಆಗಬೇಕೆಂಬ ಉದ್ದೇಶಕ್ಕಾಗಿ ಒಂದು ಸಮಿತಿಯನ್ನೂ ಕೂಡ ನೀವು ರಚಿಸಿದ್ದೀರಿ. ಆ ಸಮಿತಿಯ ವರದಿ ಅನ್ವಯ ಅಥವಾ ಇವೊತ್ತಿನ ಕುಮಾರಸ್ವಾಮಿಯರ ನೇತೃತ್ವದ ಸಮ್ಮಿಶ್ರ ಸರ್ಕಾರ ಬೆಳಗಾವಿಯಲ್ಲಿ ಅಧಿವೇಶನ ನಡೆಸಬೇಕೆಂಬ ತೀರ್ಮಾನ ತೆಗೆದುಕೊಂಡಿರುವುದು ನಮಗೆ ಸಂತೋಷವಾಗಿದೆ. ಆದರೆ, ಅಧ್ಯಕ್ಷರೆ, ಒಂದು ಅಧಿವೇಶನ ಆಗಬೇಕಾದರೆ, ಅದು ಸಂವಿಧಾನದ ಚೌಕಟ್ಟಿನಲ್ಲಿ ನಡೆಯಬೇಕು ಮತ್ತು ಕರ್ನಾಟಕ ವಿಧಾನಸಭೆಯ ನಿಯಮಾವಳಿಯ ಚೌಕಟ್ಟಿನಲ್ಲಿ ನಡೆಯಬೇಕಾಗುತ್ತದೆ. ಆದರೆ, ಆ ನಿಯಮಾವಳಿ ರೀತ್ಯಾ ನಡೆದಿಲ್ಲ ಎನ್ನುವುದಕ್ಕಾಗಿಯೇ ನಾನು 22ನೇ ತಾರೀಖಿನ ದಿವಸ ತಮಗೆ ಒಂದು ಪತ್ರವನ್ನು ಬರೆದು ಅದನ್ನು ತಮ್ಮ ಕಚೇರಿಗೆ ತಲುಪಿಸಿದ್ದೆ. ಅದರಲ್ಲಿ ಹಲವಾರು ವಿಚಾರಗಳನ್ನು, ಏನೇನು ನ್ಯೂನತೆಗಳಿವೆ, ಏಕೆ ತರಾತುರಿಯಲ್ಲಿ ಅಧಿವೇಶನ ಕರೆದಿರಿ, ಇದರಿಂದ ಏನು ಪ್ರಯೋಜನವಾಗುತ್ತದೆ, ಇಲ್ಲದಿದ್ದರೆ, ಇದೊಂದು ದೊಡ್ಡ ಜಾತ್ರೆಯಾಗುತ್ತದೆ ಎನ್ನುವಂತಹ ಮಾತನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಇವೊತ್ತು ಅದೇ ತರಹ ಆಗುತ್ತಿದೆ. ಈ ರೀತಿ ಆಗಬಾರದೆಂಬ ಸಲುವಾಗಿ, ಏನೇನು ನ್ಯೂನತೆಗಳಿವೆಯೋ, ಅವೆಲ್ಲವನ್ನೂ ಸರಿಪಡಿಸಬೇಕು. ಇಲ್ಲದಿದ್ದರೆ, ಇದು ಸದನದ ಹಕ್ಕುಚ್ಯುತಿಯಾಗುತ್ತದೆ ಮತ್ತು ಸಂವಿಧಾನಕ್ಕೆ ಅಪಚಾರವಾಗುತ್ತದೆ, ರಾಜ್ಯಪಾಲರಿಗೆ ಅವಮಾನವಾಗಿದೆ. ಈ ಎಲ್ಲಾ ವಿಚಾರಗಳ ಬಗ್ಗೆಯೂ ನೀವು ಕ್ರಮ ಕೈಗೊಳ್ಳಬೇಕಾಗುತ್ತದೆನ್ನುವ ಪತ್ರವನ್ನೂ ಕೂಡ ಬರೆದಿದ್ದೆ. ಆದರೆ, ನನ್ನ ಈ ಪತ್ರಕ್ಕೆ ಉತ್ತರ ಬರಲಿಲ್ಲ. ಇವೊತ್ತಿನವರೆಗೂ ಉತ್ತರ ಬರಲಿಲ್ಲ. ಹೀಗಾಗಿ, ಅನಿವಾರ್ಯವಾಗಿ ಇದೊಂದು ಹಕ್ಕುಚ್ಯುತಿಯಾಗಿದ್ದು, ಸದನದಲ್ಲಿ ಪ್ರಸ್ತಾಪಿಸಲೇಬೇಕಾಗುತ್ತದೆ. ನಿಯಮಾವಳಿಯ ಚೌಕಟ್ಟಿನಲ್ಲಿ ನಡೆಯಬೇಕಾಗುತ್ತದೆ. ಈ ವಿಚಾರದಲ್ಲಿ ನಾನೂ ಕೂಡ ನಮ್ಮ ವಿರೋಧ ಪಕ್ಷದ ಮುಖಂಡರ ಮತ್ತು ನಮ್ಮ ಎಲ್ಲಾ floor leaders ಹಕ್ಕುಚ್ಯುತಿ ಪ್ರಸ್ತಾವ ಕಳುಹಿಸಿದ್ದೇವೆ. ನಾನೂ ಕೂಡ ಅದಕ್ಕೆ signatrure ಹಾಕಿದ್ದೇನೆ. ಅಧ್ಯಕ್ಷರೆ, ತಮಗೆ ಗೊತ್ತಿದೆ. ಈ ಬೆಳಗಾವಿ ಅಧಿವೇಶನ ಕರೆಯಬೇಕಾಗಿದ್ದರೆ, ಮೊಟ್ಟಮೊದಲನೆಯದಾಗಿ, Business Advisory Committee ಅಂದರೆ, ಸದನದ ವ್ಯವಹಾರಗಳ ಸಲಹಾ ಸಮಿತಿ ಸಭೆಯನ್ನು ತಾವು

ಕರೆಯಬೇಕಾಗಿತ್ತು. ಆದರೆ, ತಾವು ವಿದೇಶದಲ್ಲಿದ್ದಿರಿ. ವಿದೇಶದಲ್ಲಿ ಇದ್ದುದರಿಂದ ತಾವು ಸಭೆ ಕರೆಯುವುದಕ್ಕೆ ಆಗದಿದ್ದರೂ ಉಪಾಧ್ಯಕ್ಷರಿದ್ದಾರೆ. ಉಪಾಧ್ಯಕ್ಷರಿಗಾದರೂ ಕೂಡ ತಾವು ಸೂಚನೆ ಕೊಡಬೇಕಾಗಿತ್ತು. ಏಕೆಂದರೆ ಆರ್ಟಿಕಲ್ 180(1) ರಲ್ಲಿ ಬಹಳ ಸ್ಪಷ್ಟವಾಗಿದೆ. Presiding Officer ಆಗಿ ತಾವು ಇಲ್ಲದಿದ್ದ ಸಂದರ್ಭದಲ್ಲಿ ಉಪಾಧ್ಯಕ್ಷರು ಕೆಲವು ಕೆಲಸಗಳನ್ನು ನಿರ್ವಹಿಸಬೇಕಾಗುತ್ತದೆ. ಹೀಗಾಗಿ, ಅವರಾದರೂ ಕೂಡ Business Advisory Committee ಸಭೆ ಕರೆಯುವುದಕ್ಕೆ ತಾವು ಅವರಿಗೆ ಸೂಚನೆ ಕೊಡಬೇಕು. ಸೂಚನೆ ಕೊಡದೇ ಮಾಡುವುದಕ್ಕೆ ಬರುವುದಿಲ್ಲ. ಅಧ್ಯಕ್ಷರಾದ ನೀವು ಪರ್ಮಿಶನ್ ಕೊಡದೇ ಇದ್ದುದರಿಂದ ಆ Business Advisory Committee ಸಭೆಯೂ ಆಗಲಿಲ್ಲ ಓಕೆ. ಇನ್ನು ಸದನದ ನಿಯಮಾವಳಿ 2ರ ಪ್ರಕಾರ ಯಾರು ಮುಖ್ಯಮಂತ್ರಿಗಳಾಗಿರುತ್ತಾರೆ, ಅವರನ್ನು Leader of the House ಎಂದು ನಾವು ಕರೆಯುತ್ತೇವೆ. ಅಂದರೆ, ಸಭಾ ನಾಯಕರಾದ ಸನ್ಮಾನ್ಯ ಕುಮಾರಸ್ವಾಮಿಯವರೇನಿದ್ದಾರೆ, ಈ ಸದನದ ನಿಯಮಾವಳಿ 2ರ ಪ್ರಕಾರ, He is the Leader of the House. He is not only the Leader of the JD(s). He is also our Leader. Leader of the House ಅಂದ ಮೇಲೆ ನಮಗೂ ಲೀಡರ್ ಹಾಗೂ ಈ ಸದನಕ್ಕೂ ಅವರು ಲೀಡರ್. ನೀವು ಒಂದು Business Advisory Committee ಸಭೆಯನ್ನಾದರೂ ಕರೆಯುವುದಕ್ಕೆ ಆಗದಿದ್ದರೆ, ನೀವಾದರೂ ಕೂಡ ಕನಿಷ್ಠ ಸೌಜನ್ಯಕ್ಕಾದರೂ ವಿರೋಧ ಪಕ್ಷದ ನಾಯಕರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಧರ್ಮಸಿಂಗ್‌ರವರು, ಖರ್ಗೆಯವರು ಎಂಟು ಸಲ ವಿಧಾನಸಭೆಗೆ ಆರಿಸಿ ಬಂದಿದ್ದಾರೆ. ಅವರುಗಳಿಗೆ ಅಪಾರ ಸಂಸದೀಯ ಅನುಭವವಿದೆ. ರಮೇಶ್‌ಕುಮಾರ್ ಅವರು ಸ್ಪೀಕರ್ ಆಗಿ ಕೆಲಸ ಮಾಡಿದವರು. ಅವರೂ ಅಪಾರ ಅನುಭವ ಇದ್ದವರು. ಮೇಲ್ಮನೆ ವಿರೋಧ ಪಕ್ಷದ ನಾಯಕರು, floor leaders, ಜಯಪ್ರಕಾಶ್ ಎಲ್ಲಾ floor leaders ಸಹ ಇದ್ದಾರೆ. ಈ floor leaders ಕರೆದು 'ಸುವರ್ಣ ಕರ್ನಾಟಕ ಆಚರಣೆ ಮಾಡುತ್ತಿರುವ ಈ ಸಂದರ್ಭದಲ್ಲಿ ನಾವು ಬೆಳಗಾವಿಯಲ್ಲಿ ಒಂದು ಅಧಿವೇಶನ ಮಾಡೋಣ'ವೆಂಬ ವಿಚಾರ ಪ್ರಸ್ತಾಪಿಸುವ ಮೂಲಕ ವಿರೋಧ ಪಕ್ಷ ಮತ್ತು ಎಲ್ಲಾ ಸಭಾನಾಯಕರುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾಡಿದ್ದರೆ, ಅದಕ್ಕೆ ಬಹಳ ಘನತೆ ಬರುತ್ತಿತ್ತು. ಆದರೆ, ಅದನ್ನು ಮಾಡಲಿಲ್ಲ. ಇದು ಏಕಾಏಕಿ ಮಾಡಿದಂತಹ ನಿರ್ಣಯ, ಒಂದು ಪಕ್ಷದ ನಿರ್ಣಯವಾಗಿ ನೀವು ತೆಗೆದುಕೊಂಡಿರಿ. ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಗಳಾಗಿ ಆ ರೀತಿ ನಡೆದುಕೊಂಡಿರುವುದಕ್ಕೆ ನಮಗೆ ನೋವಾಗಿದೆ. ಮತ್ತು ಇದಾದನಂತರ ಇನ್ನು ಸದನವನ್ನು ಯಾರು ಕರೆಯಬೇಕು? ಒಂದು ಸಾರಿ ಅಧಿವೇಶನ prorogue ಆದನಂತರ, ಮುಂದೂಡಿದ ನಂತರ ಸರ್ಕಾರ ತಿಳಿಸಬಹುದು. ಸುವರ್ಣ ಕರ್ನಾಟಕ ಆಚರಣೆ ಮಾಡುತ್ತಿರುವ ಸಂದರ್ಭದಲ್ಲಿ ಬೆಳಗಾವಿಯಲ್ಲಿ ನಾವು ಅಧಿವೇಶನ ಮಾಡುತ್ತೇವೆ, ಅದಕ್ಕೆ ಅನುಮತಿ ಕೊಡಿ ಎಂದು ಕೇಳಲು ಸರ್ಕಾರಕ್ಕೆ ಹಕ್ಕು ಇದೆ. ಆದರೆ, ಅಧಿವೇಶನ ಕರೆಯುವಂತಹ ಸಂಪೂರ್ಣ ಹಕ್ಕು ವಿಧಾನಸಭೆ ಒಂದು ಸಲ prorogue ಆದನಂತರ, ರಾಜ್ಯಪಾಲರಿಗೆ under

Article 174/1 ಪ್ರಕಾರ ಇದೆ. ಇವೊತ್ತು ನಿಮ್ಮ ಸೆಕ್ರೆಟೇರಿಯಟ್‌ನವರು ಒಂದು ನೋಟಿಸ್ ಹೊರಡಿಸಿದ್ದಾರೆ. ನಮಗೆ ಒಂದು ಪತ್ರ ಬರೆದಿದ್ದಾರೆ. ಪತ್ರ ಏನು ಬರೆದಿದ್ದಾರೆಂದರೆ, ರಾಜ್ಯಪಾಲರು, Article 174/1 ರ ನಿಯಮದಂತೆ ಬೆಳಗಾವಿಯ ಕೆ.ಎಲ್.ಎ. ಸೊಸೈಟಿಯ ಜವಾಹರಲಾಲ್ ನೆಹರು ವೈದ್ಯಕೀಯ ಮಹಾವಿದ್ಯಾಲಯ ಆವರಣದಲ್ಲಿರುವ ಡಾ: ಬಿ.ಎಸ್. ಜೀರಗೆ ಸಭಾಂಗಣದಲ್ಲಿ ಅಧಿವೇಶನ ಕರೆದಿದ್ದೇವೆಂಬ ಪತ್ರವನ್ನು ಎಲ್ಲಾ ಸದಸ್ಯರುಗಳಿಗೂ ಬರೆದಿದ್ದಾರೆ. ಅಧ್ಯಕ್ಷರೆ, ದಯಮಾಡಿ ಆ ನೋಟೀಸ್ ನೋಡಿ. ಬೆಳಗಾವಿಯಲ್ಲಿರುವ ಯಾರೊಬ್ಬರಿಗೆ ಅದರ ಕಾಪಿ ಹಾಕಿಲ್ಲ. ಕಾಪಿ ಹಾಕಿರುವುದು ಯಾರಿಗೆ ಗೊತ್ತೇ? ಮುಂಬೈ, ದೆಹಲಿ ಮತ್ತು ಬೆಂಗಳೂರಿನ ಕೆಲವು ಸೆಕ್ರೆಟರಿಗಳಿಗೆ. ಬೆಳಗಾವಿಯಲ್ಲಿ ನಿಮ್ಮ ಕ್ಯಾಂಪ್ ಆಫೀಸ್ ಇಲ್ಲ. ನೋಡಿ ನಿಮ್ಮ ನೋಟೀಸಿನಲ್ಲಿ ಬೆಳಗಾವಿ ಎಂದು ಒಂದು ಅಕ್ಷರ ತೋರಿಸಿ ಆ ಅಕ್ಷರ ಇದೆಯೇ? ತೋರಿಸಿ. ಪ್ರಿನ್ಸಿಪಲ್ ಸೆಕ್ರೆಟರಿಯವರಾದ ನೀವು ಏನು ಸಹಿ ಮಾಡಿ ಕಳುಹಿಸಿದ್ದೀರಿ, ಬೆಳಗಾವಿಯಲ್ಲಿರುವ ಯಾರಿಗೆ ನೀವು ಕಳುಹಿಸಿದ್ದೀರಿ? Belgaum name is not there. You have not marked a copy to any Belgaum camp officer. ಅದಕ್ಕೆ ಸಂವಿಧಾನದಲ್ಲಿ ಸ್ಪಷ್ಟವಾಗಿ ಮತ್ತು ನಿಯಮಾವಳಿ 2ರಲ್ಲೂ ಸ್ಪಷ್ಟವಾಗಿ ಹೇಳಿದ್ದಾರೆ. ಬೇರೆ ಕಡೆ ಏನಾದರೂ ಅಧಿವೇಶನ ನಡೆಯುತ್ತಿದ್ದರೆ, ಅಲ್ಲಿ ಮೊದಲು ಕ್ಯಾಂಪ್ ಆಫೀಸ್ ಆಗಬೇಕು. ಒಂದು ಸಚಿವಾಲಯ ಅಂದರೆ, ವಿಧಾನಮಂಡಲದ ಸಚಿವಾಲಯ ಆಗಲೇಬೇಕೆನ್ನುವಂತಹ ಮಾತು ನಿಯಮಾವಳಿಯಲ್ಲಿ ಸ್ಪಷ್ಟವಾಗಿದೆ. ಆದರೆ, ಇಲ್ಲಿ ಅದು ಆಗಲಿಲ್ಲ. ನೀವು ಕಳುಹಿಸಿರುವ ಬುಲೆಟಿನ್‌ನಲ್ಲಿ 'ಬೆಳಗಾಂ' ಹೆಸರು ಇದೆಯೇ ಹೊರತು 'Office of Belgaum' ಎನ್ನುವ word ಇಲ್ಲ. ದಯವಿಟ್ಟು ತಾವು ತೆಗೆದು ನೋಡಿ. ಹೀಗಾಗಿ, ಎಲ್ಲಾ ಸದಸ್ಯರಿಗೂ ಏನಾಯಿತೆಂದರೆ, ನಾವು ನೋಟೀಸ್ ಅನ್ನು ಎಲ್ಲಿ, ಯಾರ ಕಡೆ ಕೊಡಬೇಕು? ಕಚೇರಿ ಎಲ್ಲಿದೆ ಎಂದು ಕೇಳುತ್ತಿದ್ದರು. ಅಷ್ಟೇ ಅಲ್ಲ, ನಿನ್ನೆ ಎಂತಹ ಅವಾಂತರ ಆಯಿತೆಂದರೆ, ನಿನ್ನೆ ನಾವು ಹಕ್ಕುಚ್ಯುತಿಗೆ ಸಂಬಂಧಿಸಿದಂತೆ ನೋಟೀಸ್ ಕೇಳಿದರೆ, ನಿಲುವಳಿ ಸೂಚನೆ ನೋಟೀಸ್ ಕೊಟ್ಟರು! ಇದು ತರಾತುರಿಯಲ್ಲಿ ಆಗಿದ್ದರಿಂದ ಇಷ್ಟಕ್ಕೆಲ್ಲಾ ಕಾರಣವಾಗಿದೆ. ಇಲ್ಲಿ ಇದೆ ನೋಡಿ. ನಾವು ನಿಲುವಳಿ ಸೂಚನೆ ಮಂಡಿಸುವುದಕ್ಕಲ್ಲ, ಹಕ್ಕುಚ್ಯುತಿ ಮಂಡಿಸಲು ನೋಟೀಸ್ ಕೇಳಿದ್ದು ಎಂದಾಗ, ಅವರು ಅದನ್ನೇ 'ಹಕ್ಕುಚ್ಯುತಿ ನೋಟೀಸ್' ಎಂದು ತಿದ್ದುಪಡಿ ಮಾಡಿಕೊಟ್ಟರು. ಇದು ತರಾತುರಿಯಲ್ಲಿ ಆದದ್ದರಿಂದ ಬಹಳಷ್ಟು ಅವಾಂತರಗಳಾಗುತ್ತವೆ ಎನ್ನುವುದಕ್ಕಾಗಿ ನಾನು ಹೇಳಿದ್ದು. ಸ್ಪಷ್ಟವಾಗಿ ಸಚಿವಾಲಯ ಆಗಬೇಕು, ಅಲ್ಲಿ ಒಬ್ಬರು ಕಾರ್ಯದರ್ಶಿಯವರು ಇರಬೇಕು ಎನ್ನುವುದಕ್ಕಾಗಿಯೇ ಹೇಳಿದ್ದು. ಆದರೆ ಇಲ್ಲಿ ತರಾತುರಿಯಲ್ಲಿ ಆಗಿದ್ದರಿಂದ ಏನಾಗಿದೆಯೆಂದರೆ, ಸರ್ಕಾರವೇ decision ತೆಗೆದುಕೊಳ್ಳುತ್ತದೆ, Principal Secretary, Revenue is the Nodal Officer for the Belgaum Session. I have a strong objection to this. ಸಂವಿಧಾನದ Article 187 ಏನು ಹೇಳುತ್ತದೆ? ಶಾಸಕಾಂಗಕ್ಕೆ ಒಂದು ಸಚಿವಾಲಯ ಇರಲೇಬೇಕೆಂದು ಇದು ಸ್ಪಷ್ಟವಾಗಿ ಹೇಳುತ್ತದೆ.

There should be a Secretariat. ಹಾಗಿದ್ದರೆ, ಏಕೆ ಇವರು Principal Secretary, Revenue ಅವರನ್ನು Nodal officer ಆಗಿ ಇಲ್ಲಿ ನೇಮಕ ಮಾಡುತ್ತಾರೆ? ಸರ್ಕಾರ ಹೇಗೆ ಅದನ್ನು ಹೇಳುತ್ತದೆ? ಅದಕ್ಕೆ ಮೂಲಭೂತವಾಗಿ ಮಾಧುಸ್ವಾಮಿಯವರು ಕೇಳಿದ್ದರು. Legislatures are not subordinate to the Government. We are subordinate to you. We are subordinate to the House. ಇಲ್ಲಿ ಲೋಪವಾಗಿದೆ. ಅದರ ಜೊತೆಗೆ ನಾನು ಬೆಳಗಾವಿ ಜಿಲ್ಲಾಧಿಕಾರಿಗಳ ಬಗ್ಗೆ ನಾನು ಸ್ಪಷ್ಟವಾದ ಮಾತುಗಳಲ್ಲಿ ಹೇಳಬಯಸುತ್ತೇನೆ. ಅವರು ಇಲ್ಲಿ ಒಳ್ಳೆಯ ರೀತಿಯಲ್ಲಿ arrangement ಮಾಡಿದ್ದಾರೆ, ಸೌಜನ್ಯದಿಂದ ಎಲ್ಲರನ್ನೂ ಸ್ವಾಗತ ಮಾಡಿದ್ದಾರೆ, ಬಹಳ ಸಂತೋಷ. ಆದರೆ ನಿಯಮಾವಳಿಯನ್ನು ಉಲ್ಲಂಘನೆ ಮಾಡಬಾರದು. ಇಲ್ಲಿ ನಿಯಮಾವಳಿಗಳ ಉಲ್ಲಂಘನೆ ಹೇಗಾಗುತ್ತದೆ ಎಂದರೆ, ಅವರು ನಮಗೊಂದು ಪತ್ರ ಬರೆದಿದ್ದಾರೆ. ದಯವಿಟ್ಟು ಅವರು ಏನು ಬರೆದಿದ್ದಾರೆ ಎಂಬುದನ್ನು ನೋಡಿ. ಘನ ಸರ್ಕಾರ ನಿರ್ಧಾರದಂತೆ ದಿನಾಂಕ 29.06.2006 ರಿಂದ 28.09.2006 ರವರೆಗೆ ಬೆಳಗಾವಿಯಲ್ಲಿ ನಡೆಯಲಿರುವ ವಿಧಾನ ಮಂಡಲದ ಐತಿಹಾಸಿಕ ವಿಶೇಷ ಅಧಿವೇಶನದಲ್ಲಿ ಭಾಗವಹಿಸಲು ಬರುತ್ತಿರುವ ತಮಗೆಲ್ಲಾ ಜಿಲ್ಲಾಡಳಿತದ ಪರವಾಗಿ ಹಾರ್ದಿಕ ಸ್ವಾಗತವನ್ನು ಕೋರುತ್ತೇವೆ. ಅವರು ಸ್ವಾಗತ ಕೋರಲಿ, ಅದಕ್ಕೆ ನಮ್ಮದೇನೂ ಅಭ್ಯಂತರ ಇಲ್ಲ. ಇಲ್ಲಿ Session ಕರೆಯಬೇಕೆಂಬುದು ಘನ ಸರ್ಕಾರದ ನಿರ್ಧಾರವಲ್ಲ, ಅದು ಅವರ ಕೋರಿಕೆ ಮಾತ್ರ. Request is different, decision is different. ಈ decision ತೆಗೆದುಕೊಳ್ಳಬೇಕಾದವರು ಮಾನ್ಯ ರಾಜ್ಯಪಾಲರು ಮತ್ತು ನೀವು. ಅದಕ್ಕಾಗಿಯೇ ಮಾನ್ಯ ಮಾಧುಸ್ವಾಮಿಯವರು ಉದಾಹರಣೆಯನ್ನು ಕೊಟ್ಟು ಓದಿ ಹೇಳಿದರು. ನಾನು ಅದನ್ನು repeat ಮಾಡುವಂತಹ ಅವಶ್ಯಕತೆ ಇಲ್ಲ. ಹಿಂದೆ Mavalankar ಅವರು Lok Sabha Speaker ಆಗಿದ್ದಾಗ, ನಾವು ಸರ್ಕಾರಕ್ಕೆ ಕಾಯಬೇಕಾಗಿಲ್ಲ ಎನ್ನುವಂತಹ ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಅದನ್ನು ನಾನಿಲ್ಲಿ ಮತ್ತೆ ಹೇಳಬೇಕಾಗಿಲ್ಲ. ಇದು ಸರ್ಕಾರದ ಕಾರ್ಯಕ್ರಮ ಎಂದು ಅವರು ಹೇಳಬಾರದಾಗಿತ್ತು. ಅದರ ಜೊತೆಗೆ ಬೆಳಗಿನ ತಿಂಡಿ ಇತ್ಯಾದಿ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳುತ್ತಾರೆ. ನಾನು ಇದನ್ನು ಏಕೆ ಹೇಳುತ್ತೇನೆ ಎಂದರೆ, ಎಲ್ಲಾ ವ್ಯವಸ್ಥೆ ಮಾಡಿದ್ದೀರಿ ನಿಜ. ಇವತ್ತು ಪ್ರಭಾಕರ ಕೋರೆಯವರು ಏನು ಈ ಒಂದು building ಅನ್ನು ಕೊಟ್ಟಿದ್ದಾರೆ, ಈ building ಅನ್ನು ಮೊದಲು ತಾವು notify ಮಾಡಬೇಕಾಗಿತ್ತು. ಆ ರೀತಿಯಾಗಿ notify ಮಾಡಲಾದ copy ನಮಗೆ ಬರಲಿಲ್ಲ. ಇನ್ನೂ ನಾವು KLE Society ಸಭಾಂಗಣದಲ್ಲಿ ಇದ್ದೇವೋ ಅಥವಾ ನಾವು temporary Legislature House ನಲ್ಲಿ ಇದ್ದೇವೋ ಎಂದು ಇವತ್ತು ನಮಗೆ ಯಾರಿಗೂ ಗೊತ್ತಿಲ್ಲ. ಅದರ ಜೊತೆಗೆ ನಿಮಗೆಲ್ಲಾ ಊಟ, ತಿಂಡಿ ಕೊಡುತ್ತೇವೆ ಎಂದು ಅಲ್ಲಿನ ಡಿ.ಸಿ.ಯವರು ಹೇಳಿದ್ದಾರೆ. ಪತ್ರಿಕೆಗಳಲ್ಲೆಲ್ಲಾ ಆ ತಿಂಡಿ ಇದೆ, ಈ ತಿಂಡಿ ಇದೆ ಎಂದೆಲ್ಲಾ ಪ್ರಕಟವಾಯಿತು. ನನಗೆ ಸಾಹಿತ್ಯ ಸಮ್ಮೇಳನದ ನೆನಪಾಗುತ್ತಿದೆ. ಸಾಹಿತ್ಯ ಸಮ್ಮೇಳನಕ್ಕೆ ಆಹ್ವಾನಿಸುವಾಗ ಸಾಹಿತ್ಯದ ಜೊತೆಗೆ ಒಳ್ಳೆಯ ಅಚ್ಚುಕಟ್ಟಾದ ವ್ಯವಸ್ಥೆ ಆಗಿದೆ,

ಈ ರೀತಿಯ ಊಟ ಮಾಡಿದ್ದಾರೆ, ತಿಂಡಿ ಮಾಡಿದ್ದಾರೆ ಎಂದು ಬರೆಯುತ್ತಾರೆ. ಅದೇ ತರಹ ಈ ಅಧಿವೇಶನಕ್ಕೂ ಅನ್ವಯಿಸಿ ಬರೆದರೆ ಶಾಸಕರುಗಳ ಗೌರವದ ಗತಿಯೇನು? ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ನಾಳೆ audit objection ಆಗುತ್ತದೆ. ನೀವು ಒಬ್ಬ ಸದಸ್ಯರಿಗೆ ಪ್ರತಿ ದಿನಕ್ಕೆ 600 ರೂ.ಗಳ DA ಕೊಡುತ್ತಿದ್ದೀರಿ. I am taking DA. If I sign, ನನಗೆ 600 ರೂ.ಗಳ DA ಬರುತ್ತದೆ. ಹಾಗಾದರೆ ಊಟ, ತಿಂಡಿ ಹೇಗೆ ಕೊಡುತ್ತಿದ್ದೀರಿ. ಯಾವ Head of Account ನಿಂದ Finance Minister ಇದಕ್ಕೆ ಖರ್ಚು ಹಾಕುತ್ತಾರೆ. ಇದಕ್ಕೆ ಕೋರೆಯವರು ಕೊಟ್ಟಿದ್ದಾರೆ ಬಹಳ ಸಂತೋಷ. We welcome it. ನಮಗೆ ಈ Building ಅನ್ನು ಉಚಿತವಾಗಿ ಕೊಟ್ಟಿದ್ದಾರಲ್ಲಾ, ಅದಕ್ಕಾಗಿ ನಾವು ಇವತ್ತು ಮಾನ್ಯ ಪ್ರಭಾಕರ ಕೋರೆಯವರನ್ನು ಅಭಿನಂದಿಸಬೇಕಾಗುತ್ತದೆ. ಹಾಗೆಯೇ ಆ Karnataka Lingayath Education Society ಯನ್ನೂ ಸಹ ನಾವು ಇವತ್ತು ಹೊಗಳಬೇಕಾಗುತ್ತದೆ. ಅವರು ಈ Building ಅನ್ನು ಕೊಟ್ಟಿದ್ದಾರೆ. ಇವತ್ತು ಅವರೇನಾದರೂ ಊಟ ಹಾಕುತ್ತಿದ್ದಾರಾ? ಸರ್ಕಾರ ಏನಾದರೂ ಊಟ ಹಾಕುತ್ತಿದ್ದರೆ ಯಾವ ಔದಾರ್ಯಕ್ಕೆ ಹಾಕುತ್ತಿದ್ದೀರಿ? ನಾಳೆ ಇದರ ಬಗ್ಗೆ Audit Objection ಆಗಬಾರದು. ಇವತ್ತು ವ್ಯಕ್ತಿಗತವಾಗಿ ಮಂತ್ರಿಗಳು ಕರೆದರೆ ತಪ್ಪಿಲ್ಲ. ನಿನ್ನೆ Chief Minister ರವರು ಕರೆದಿದ್ದರು. That is your right. I have no objection. That is your courtesy. ಅದಕ್ಕಾಗಿ ನಾನು ಆ ಮಾತನ್ನು ಹೇಳಿದೆ. DC ಯವರು ಹೇಗೆ ಆ ರೀತಿ ಹೇಳುತ್ತಾರೆ? ಜಿಲ್ಲಾಡಳಿತದಿಂದ ಇದಕ್ಕೇನಾದರೂ ಖರ್ಚು ಮಾಡುತ್ತೀರಾ? ಅದರ ಜೊತೆಗೆ ಡಿಸಿಯವರು ಇನ್ನೊಂದು ಮಾತನ್ನು ಹೇಳುತ್ತಾರೆ. ಪ್ರತಿ ದಿನ ಮಾನ್ಯ ಶಾಸಕರುಗಳಿಗೆ ಮನರಂಜನಾ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಇದಕ್ಕೆ ನನ್ನ objection ಇದೆ. ಅಧಿವೇಶನ ನಡೆಯುವಂತಹ ಸಂದರ್ಭದಲ್ಲಿ ಮನರಂಜನಾ ಕಾರ್ಯಕ್ರಮ ಇಟ್ಟರೆ next business ಗೆ ನಾವು ಹೇಗೆ ತಯಾರಾಗಿ ಬರಲು ಸಾಧ್ಯವಾಗುತ್ತದೆ? ರಾತ್ರಿ 9–10 ಗಂಟೆ ಸಮಯದವರೆಗೆ ಇದು ಆಗುತ್ತದೆ. ಹಾಗಾದರೆ ನಾವು ಓದುವುದೇ ಬೇಡವೇ? ಅದರ ಜೊತೆಗೆ ಜಿಲ್ಲಾಧಿಕಾರಿಯವರು ಇನ್ನೂ ಒಂದು ಪತ್ರವನ್ನು ಬರೆಯುತ್ತಾರೆ. ಅಧಿವೇಶನದ ಕೊನೆಯ ದಿವಸ ಸವದತ್ತಿ, ಗೋಕಾಕ್ ಪ್ರವಾಸವನ್ನು ವಿಧಾನ ಸಭಾ ಸದಸ್ಯರುಗಳಿಗೆ ಏರ್ಪಡಿಸಲಾಗಿದೆ ಎಂದು ಅದರಲ್ಲಿ ಹೇಳಿದ್ದಾರೆ. ಇದು ತಪ್ಪಾಗುವುದಿಲ್ಲವೇ? ಅವರು ತಮ್ಮ ಪತ್ರದ ಕೊನೆಯಲ್ಲಿ ಏನು ಹೇಳುತ್ತಾರೆ ಎಂದರೆ, ಈ ಅಧಿವೇಶನವನ್ನು ಯಶಸ್ವಿಗೊಳಿಸಲು ಬೆಳಗಾವಿ ಜಿಲ್ಲಾಡಳಿತವು ಸರ್ವ ರೀತಿಯಿಂದ ಸಜ್ಜಾಗಿದ್ದು, ಅಲ್ಪ ಸ್ವಲ್ಪ ವ್ಯತ್ಯಾಸಗಳಾಗಿದ್ದಲ್ಲಿ ಶಾಸಕರು ಸಹಕರಿಸಬೇಕಾಗಿ ವಿನಂತಿ. This is my strong objection. How can District Administration ಸಜ್ಜುಗೊಳಿಸಿದ್ದೇವೆ ಎಂದು ಹೇಳುತ್ತಾರೆ? Who they are? Whether it is Government function or Legislature function? ಇದು ತಾವು ಮಾಡಬೇಕಾಗಿತ್ತು, ಜಿಲ್ಲಾಡಳಿತವಲ್ಲ. ಜಿಲ್ಲಾಡಳಿತ ಹೇಗೆ ತಯಾರಿ ಮಾಡಲಿಕ್ಕೆ ಸಾಧ್ಯವಾಗುತ್ತದೆ? ಇದು ಸರ್ಕಾರಿ ಫಂಕ್ಷನ್ನಾ? ನಿಮ್ಮ Secretary ಯವರು

ಬರೆದಿದ್ದರೆ I would have appreciated ಅಥವಾ ತಾವು ಪತ್ರ ಬರೆದು, ಮೊದಲನೇ ಸಾರಿ ಇಲ್ಲಿ ಅಧಿವೇಶನವಾಗುತ್ತಿದೆ, ಏನಾದರೂ ಹೆಚ್ಚು ಕಡಿಮೆ ಆದರೆ ಸಹಕರಿಸಿ ಎನ್ನಬಹುದಾಗಿತ್ತು. ಹಾಗಾದರೆ ಬೆಳಗಾವಿ ಜಿಲ್ಲಾಧಿಕಾರಿಗಳನ್ನು ತಾವು ಸಂವಿಧಾನದ ಅನುಚ್ಛೇದ 187ರ ಪ್ರಕಾರ ತಾವೇನಾದರೂ ಅವರನ್ನು ಸಚಿವಾಲಯದ ಅಧಿಕಾರಿಯನ್ನಾಗಿ ನೇಮಕ ಮಾಡಿದ್ದೀರೋ, ಹೇಗೆ? ಇಲ್ಲದಿದ್ದರೆ ಅವರು ಆ ರೀತಿ ಹೇಳಲಿಕ್ಕೆ ಬರುವುದಿಲ್ಲ. ಅದೇ ತರಹ Principal Secretary, Revenue ಅವರೂ ಕೂಡ. ತಪ್ಪಾಗುತ್ತದೆ, ದಯವಿಟ್ಟು ತಾವು ಸಂವಿಧಾನದ Article 187ನ್ನು ನೋಡಿ. ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಶಶಿಕಾಂತ ನಾಯಿಕ್‌ರವರು ಒಳ್ಳೆಯ ಸಜ್ಜನ ವ್ಯಕ್ತಿಗಳಾಗಿದ್ದಾರೆ. ನನಗೆ ಅವರ ಬಗ್ಗೆ ಅಪಾರವಾದ ಗೌರವ ಇದೆ. ಆದರೆ ಅವರ ಕಾನೂನಿನ ಅನುಭವದಿಂದ ಎಂತಹ ದುರ್ಘಟನೆ ನಡೆದಿದೆ ಎಂದರೆ, ದಯಮಾಡಿ ತಾವು ಈ ಬಗ್ಗೆ ಯೋಚನೆ ಮಾಡಬೇಕು. It is a clear cut violation of the Article 180 of the Construction. ಇದನ್ನು ಹೇಗೆ ಮಾಡಿದ್ದಾರೆ? ಜಿಲ್ಲಾ ಉಸ್ತುವಾರಿ ಸಚಿವರು ಒಂದು ಸಭೆಯನ್ನು ಕರೆಯುತ್ತಾರೆ. ಈ ಬಗ್ಗೆ ನನಗೂ ಕೂಡ ಪತ್ರ ಬರುತ್ತದೆ. Head Quarters Assistant of DC, Koppal ನನಗೊಂದು ಪತ್ರ ಬರೆಯುತ್ತಾರೆ. ಅವರು "ಬೆಳಗಾವಿಯಲ್ಲಿ ನಡೆಯಲಿರುವ ವಿಶೇಷ ಅಧಿವೇಶನದ ಹಿನ್ನೆಲೆಯಲ್ಲಿ ಪೂರ್ವಭಾವಿ ಸಮಾಲೋಚನಾ ಸಭೆಯನ್ನು ಉತ್ತರ ಕರ್ನಾಟಕ ಭಾಗದ ಮಾನ್ಯ ಸದಸ್ಯರು ಹಾಗೂ ಸಂಸತ್ ಸದಸ್ಯರೊಡನೆ ಬೆಳಗಾವಿಯ JNMC ನಲ್ಲಿ, ಅಂದರೆ ಇದೇ ಹಾಲ್‌ನಲ್ಲಿ, ದಿನಾಂಕ 19.09.2006 ರಂದು ಮಧ್ಯಾಹ್ನ 3 ಗಂಟೆಗೆ ನಡೆಸಲು ಮಾನ್ಯ ತೋಟಗಾರಿಕಾ ಸಚಿವರಾದ ಶಶಿಕಾಂತ ನಾಯಿಕ್‌ರವರು ನಿಗಧಿಪಡಿಸಿದ್ದು, ಸದರಿ ಸಭೆಗೆ ಹಾಜರಾಗುವಂತೆ ತಮ್ಮನ್ನು ಕೋರುವಂತೆ ಮಾನ್ಯ ಸಚಿವರಿಂದ ನಿರ್ದೇಶಿತನಾಗಿದ್ದೇನೆ. ತಮ್ಮ ವಿಶ್ವಾಸಿ, Head Quarters Assistant". ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಇಷ್ಟೇ. ಪ್ರಥಮ ಬಾರಿಗೆ Session ನಡೆಯುತ್ತಿದೆ, ಅದರ ಬಗ್ಗೆ ಮಾನ್ಯ ಸಚಿವರು ಉತ್ಸುಕತೆಯಿಂದ ಮಾನ್ಯ ಸಚಿವರು ಸಭೆ ಕರೆದಿರಬಹುದು. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಜಿಲ್ಲಾ ಉಸ್ತುವಾರಿ ಮಂತ್ರಿಗಳಾಗಿ ಅವರು ಹೇಗೆ ಈ ಒಂದು ಅಧಿವೇಶನದ ಬಗ್ಗೆ ಪೂರ್ವಭಾವಿ ಸಭೆಯನ್ನು ಉತ್ತರ ಕರ್ನಾಟಕದ ಶಾಸಕರು ಮತ್ತು ಸಂಸತ್ ಸದಸ್ಯರೊಡನೆ ನಡೆಸುತ್ತಾರೆ? How can they call ಈ ಹಾಲ್‌ನಲ್ಲಿ? ಒಂದು ಸಾರಿ ಇದನ್ನು ತಾವು notify ಮಾಡಿದ ಮೇಲೆ, ಈ ಹಾಲ್‌ನಲ್ಲಿ ಯಾರು ಸಭೆ ಮಾಡಲಿಕ್ಕೆ ಬರುವುದಿಲ್ಲ. Sanctity of the House ಉಳಿಯುವುದಿಲ್ಲ. ಹೀಗಾಗಿ ಅವರು ಸಭೆ ನಡೆಸಿ ನಿರ್ದೇಶನವನ್ನು ಕೊಟ್ಟರು. ಅದರಲ್ಲಿ ಜಿಲ್ಲಾಡಳಿತದ ಎಲ್ಲಾ ಅಧಿಕಾರಿಗಳು ಭಾಗವಹಿಸಿದ್ದರು. ತಾವು ಬೇಕಾದರೆ ಆ ಸಭೆಯ proceedings ತರಿಸಿ. Please call for the proceedings of that meeting. ಇದು ತಪ್ಪಲ್ಲವೇ? Article 180 is very clear. There should be a Presiding officer. ಅವರು ಇಲ್ಲದಿದ್ದರೆ Deputy Speaker ಅವರು ಇರುತ್ತಾರೆ. Deputy Speaker ಅವರೂ ಇಲ್ಲವೆಂದರೆ

Governor has to appoint somebody to look after the legislature business. It is very categorially clear in the Constitution. ತಾವು ವಿದೇಶದಲ್ಲಿದ್ದಿರಿ. ಅವರು ಇಲ್ಲಿದ್ದರು. ಹೀಗಾಗಿ ಇಲ್ಲಿ ಇಷ್ಟು violation ಆಗಿದೆ. ಕೊನೆಯದಾಗಿ ಒಂದು ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಅಧಿವೇಶನ ಆಗಬೇಕೆಂದು ಆತುರ ಪಟ್ಟರು. ಅವರು ಮೊನ್ನೆ ಗುಲ್ಬರ್ಗಾಕ್ಕೆ ಹೋದಾಗ ಇಲ್ಲಿ Joint Session ಮಾಡುತ್ತೇವೆ, ರಾಜ್ಯಪಾಲರಿಗೆ ಆಹ್ವಾನ ಕೊಟ್ಟಿದ್ದೇವೆ, ಅವರು ಬರುತ್ತಾರೆ, Address ಮಾಡುತ್ತಾರೆ ಎಂದರು. ಪೇಪರ್‌ನವರು, ಇಲ್ಲ, ಅವರು ಬರುವುದಿಲ್ಲವೆಂದು ಹೇಳಿದರು. ಇದೆಲ್ಲಾ ಮಾಧ್ಯಮಗಳ ಸೃಷ್ಟಿ ಎಂದು ಅವರೇ ಹೇಳಿದರು. ಅದಕ್ಕಾಗಿ ನಾನು ಇಲ್ಲಿ ಸ್ಪಷ್ಟವಾಗಿ ಕೇಳಬಯಸುತ್ತೇನೆ. ಇಲ್ಲಿ ನಾವು Joint Session ಮಾಡುತ್ತಿದ್ದೇವೆಯೇ? ನೀವು ಕೊಟ್ಟಿರುವಂತಹ agenda ಪ್ರಕಾರ there is no Joint Session. ನಿನ್ನೆಯ Business advisory Committee ಯಲ್ಲಿ ತೀರ್ಮಾನವಾದಂತೆ ಸನ್ಮಾನ್ಯ ಘನತೆವೆತ್ತ ರಾಜ್ಯಪಾಲರು 28ನೇ ತಾರೀಖಿಗೆ ಬರುತ್ತಾರೆ ಎನ್ನುವಂತಹ ಮಾತನ್ನು ನಾವು ಕೇಳಿದ್ದೇವೆ. ಹಾಗಾದರೆ ಇದು Joint Session ಆಗುತ್ತದೆಯೇ? ಏನು ಇದೆಲ್ಲಾ? Parliamentary Affairs Minister ಬಹಳ ಹಿರಿಯರು ಮತ್ತು ಅನುಭವಿಗಳು. ಅವರು ಈ ವಿಚಾರದಲ್ಲಿ ಒಂದು ತರಹದ ಹೇಳಿಕೆ ಕೊಡುತ್ತಾರೆ, ಮಾನ್ಯ ಮುಖ್ಯಮಂತ್ರಿಗಳು ಒಂದು ತರಹದ ಹೇಳಿಕೆ ಕೊಡುತ್ತಾರೆ. ಈ ತರಹ ಹೇಳಿ ರಾಜ್ಯಪಾಲರಿಗೆ ಅವಮಾನ ಮಾಡಿದ್ದಾರೆ ಮತ್ತು ಸಂವಿಧಾನಕ್ಕೆ ಅಪಚಾರ ಎಸಗಿದ್ದಾರೆ. ಅಲ್ಲದೆ ಸದನದ ಸದಸ್ಯರನ್ನು ಕತ್ತಲಿನಲ್ಲಿಟ್ಟು ಏಕಾಏಕಿ ಇದು ಒಂದು ಸರ್ಕಾರಿ ಕಾರ್ಯಕ್ರಮ ಎನ್ನುವ ಹಾಗೆ ಬಿಂಬಿಸಿದ್ದಾರಲ್ಲಾ, ಇದು ತಪ್ಪು. ಇದು ಸದನಕ್ಕೆ ಆದಂತಹ ಅವಮಾನ. Speaker ಘನತೆಗೆ ಮತ್ತು ಮಾನ್ಯ ಸದಸ್ಯರ ಹಕ್ಕುಚ್ಯುತಿಯಾಗಿದೆ. ಇದರ ಬಗ್ಗೆ ಸೂಕ್ತವಾದಂತಹ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಹಕ್ಕುಚ್ಯುತಿಯಾಗಿದೆ ಎಂಬ ಬಗ್ಗೆಯೇ ಬಸವರಾಜ ರಾಯರೆಡ್ಡಿಯವರು ತಮ್ಮ ವಿವೇಚನೆ ಮೂಲಕ ಮಾತನಾಡಿದ್ದಾರೆ. ಅವರು ಮಾತನಾಡಿದ್ದನ್ನು ನೋಡಿದರೆ "Egg comes out of hen, hen comes out of egg. Therefore, egg comes of egg" ಎಂದು argument ಮಾಡಿದಂತೆ ಮಾನ್ಯ ರಾಯರೆಡ್ಡಿಯವರು ಮಾತನಾಡುತ್ತಾರೆ. ಒಂದು ಕಡೆ ಸೌಜನ್ಯಕ್ಕಾದರೂ ನಮ್ಮನ್ನು ಕರೆಯಲಿಲ್ಲ ಎಂದು ಹೇಳುವುದು ಮತ್ತೊಂದು ಕಡೆಗೆ ಸೌಜನ್ಯಬಾಹಿರವಾಗಿರತಕ್ಕಂಥದ್ದು ಎಂದು ಹೇಳುವುದು. ಆಮೇಲೆ ಅವೆಲ್ಲವನ್ನೂ ಕೂಡ ಹಳದಿ ಕಣ್ಣಿನಿಂದ ನೋಡಿದರೆ ಈ ತರಹದ ಉದ್ದೇಶಗಳು ಕಾಣುತ್ತವೆ. ಈ ಬಗ್ಗೆ ಹೇಳಬೇಕೆಂದರೆ ಯಾವುದೇ ಹಕ್ಕುಚ್ಯುತಿಯಾಗತಕ್ಕಂಥದ್ದು ಇಲ್ಲ. ಮೂಲಭೂತವಾಗಿ ಒಂದು ಪ್ರಶ್ನೆಯನ್ನು ತಮ್ಮ ಮುಂದೆ ಇಡತಕ್ಕಂಥದ್ದು, ಮತ್ತು ಇದರ ಬಗ್ಗೆ ಹಿರಿಯರಾದಂಥವರೆಲ್ಲರೂ ಈ ಬಗ್ಗೆ ಯೋಚನೆಯನ್ನು ಮಾಡಬೇಕಾಗುತ್ತದೆ. ಹಕ್ಕುಚ್ಯುತಿ ಯಾರ ವಿರುದ್ಧ? ಮಾನ್ಯ ರಮೇಶ್‌ಕುಮಾರ್‌ರವರು ಈ

ಸಂದರ್ಭದಲ್ಲಿ ಅಥವಾ ಬೇರೆ ಪ್ರತ್ಯೇಕವಾಗಿಯಾದರೂ ಕೂಡ ಈ ಬಗ್ಗೆ ಯೋಚನೆಯನ್ನು ಮಾಡಬೇಕಾಗುತ್ತದೆ. ಏಕೆಂದರೆ debate ನಲ್ಲಿ ಒಂದು ಸಂಪ್ರದಾಯವನ್ನು ನಿರ್ಮಾಣ ಮಾಡಬೇಕಾಗುತ್ತದೆ. ಹಕ್ಕುಚ್ಯುತಿ ಯಾರ ವಿರುದ್ಧ? Speaker ವಿರುದ್ಧ ಹಕ್ಕು ಚ್ಯುತಿಯನ್ನು ತರುವುದಕ್ಕೆ ಬರುವುದಿಲ್ಲ. ಅದು ಬಹಳ ಸ್ಪಷ್ಟವಾಗಿರುವಂಥದ್ದು. ತಾವು ಹೇಳುತ್ತೀರಿ ಸರ್ಕಾರ ಮಾಡುತ್ತಿದೆ ಎಂದರೆ ಸರ್ಕಾರದ ವಿರುದ್ಧ ಹಕ್ಕುಚ್ಯುತಿ ಇರಬೇಕಾಗಿತ್ತು. ಆದರೆ ಇಲ್ಲಿ ಸರ್ಕಾರದ ವಿರುದ್ಧ ಹಕ್ಕುಚ್ಯುತಿ ಇಲ್ಲ. ಈ ರೀತಿಯಾದಂಥ ದ್ವಂದ್ವದ ಮಾತು ಇರತಕ್ಕಂಥದ್ದು. ಅದೆಲ್ಲಕ್ಕಿಂತಲೂ ಹೆಚ್ಚಾಗಿ ತಾಂತ್ರಿಕವಾಗಿ ಹಕ್ಕುಚ್ಯುತಿಯನ್ನು ಮಂಡಿಸತಕ್ಕಂಥ ಸಂದರ್ಭದಲ್ಲಿ ಯಾವ ನಿಯಮಾವಳಿಯನ್ನೂ ಇಲ್ಲಿ ಪಾಲಿಸಿಲ್ಲ. ಮೊನ್ನೆ ಈ ವಿಚಾರ ಚರ್ಚೆಗೆ ಬಂದಾಗಲೂ ಕೂಡ ಸದನ ಪ್ರಾರಂಭವಾಗುವುದಕ್ಕಿಂತ ಒಂದು ಗಂಟೆ ಮುಂಚಿತವಾಗಿ ಆ ಹಕ್ಕುಚ್ಯುತಿಯನ್ನು ಕಳುಹಿಸಿಕೊಡಬೇಕು ಎಂದು ತೀರ್ಮಾನ ಆಗಿದೆ. ಆದರೆ ಆ ರೀತಿಯಲ್ಲಿ ಆಗಿಲ್ಲವೆಂದರೆ ತಾಂತ್ರಿಕವಾಗಿ ಹಕ್ಕುಚ್ಯುತಿಯನ್ನು ತಾವು ಚರ್ಚೆಗೆ ತೆಗೆದುಕೊಳ್ಳಬೇಕಾದ ಅವಶ್ಯಕತೆ ಇಲ್ಲ. ತಮ್ಮ ಕೊಠಡಿಯಲ್ಲಿಯೇ ತಾವು ಅದನ್ನು ತಿರಸ್ಕರಿಸಬಹುದು. ಈ ದೃಷ್ಟಿಯಿಂದ ಯಾವ ಕಾರಣಕ್ಕಾಗಿಯೂ ಯಾವ ಪ್ರಶ್ನೆಯನ್ನೂ ಉದ್ಭವ ಮಾಡತಕ್ಕಂಥದ್ದು ಆಗುವುದಿಲ್ಲ. ಈ ಹಕ್ಕುಚ್ಯುತಿ ನಿರ್ಣಯ ಸರ್ಕಾರದ ವಿರುದ್ಧ ಇರತಕ್ಕಂಥದ್ದಕ್ಕೆ ಅವರು ಏನು camp office ಇರಬೇಕು ಎಂದು ಹೇಳಿದ್ದಾರೆ, ಆ ಬಗ್ಗೆ liaison officer ಅನ್ನು ಮಾಡಿರತಕ್ಕಂಥದ್ದೂ ಇದೆ. ಬೆಂಗಳೂರಿನ ಆಚೆ ಮಾಡಬೇಕು ಎನ್ನತಕ್ಕಂಥವರ ಬಗ್ಗೆ ಕೂಡ ಅವರು ಹೇಳುತ್ತಾರೆ. ವಿಧಾನ ಮಂಡಲ ಸಚಿವಾಲಯ ಎಂದರೆ ಬೆಂಗಳೂರಿನಲ್ಲಿರುವ ಸಚಿವಾಲಯ ಹಾಗೂ ತಾತ್ಕಾಲಿಕವಾಗಿ ಬೆಂಗಳೂರಿನ ಹೊರಗಿನ ಯಾವುದೇ ಸ್ಥಳದಲ್ಲಿ ಅಥವಾ ಅಧ್ಯಕ್ಷರ ಆದೇಶದ ಮೇರೆಗೆ ವ್ಯವಸ್ಥೆ ಮಾಡಲಾಗುವ ಯಾವುದೇ ಬಿಡಾರದ ಮೊಕ್ಕಾಂ ಕಛೇರಿಯೂ ಒಳಗೊಳ್ಳುತ್ತದೆ. ಆ ರೀತಿಯಾಗಿ ಬೆಳಗಾವಿಯಲ್ಲಿ ಮೊಕ್ಕಾಂ ಕಛೇರಿಯನ್ನು, ಬಿಡದಿಯನ್ನು ತಾವು ಏರ್ಪಾಡು ಮಾಡಿದ್ದೀರಿ. ಅದರ ಪ್ರಕಾರ liaison officer ರನ್ನೂ ಕೂಡ ತಾವು ನೇಮಕ ಮಾಡಿದ್ದೀರಿ. ಮತ್ತೆ ತಾವು ಕಳುಹಿಸಿರತಕ್ಕಂಥ ನೋಟೀಸಿನಲ್ಲಿ ಕೂಡ ಸರ್ಕಾರಿ ಕಲಾಪಗಳು, ಖಾಸಗಿ ಕಲಾಪ 25 ರಿಂದ 29 ನೇ ತಾರೀಖಿನವರೆಗೂ ನಡೆಯುತ್ತದೆ ಎಂಬುದನ್ನು ಎಲ್ಲರಿಗೂ ತಾವು ವಿವರವಾಗಿ ಕಳುಹಿಸಿಕೊಟ್ಟಿದ್ದೀರಿ. ಅವರೇನು ಪತ್ರವನ್ನು ಈಗ ಓದಿದರು ಅದು ಜಿಲ್ಲಾಧಿಕಾರಿಗಳು ಬರೆದಿರುವ ಪತ್ರವಾದರೂ ಕೂಡ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ, ಕರ್ನಾಟಕದ ಸರ್ಕಾರ ನಿರ್ಧರಿಸಿದಂತೆ ಎಂದಿದ್ದಾರೆ. ಹೌದು. ಸರ್ಕಾರ ಯಾವಾಗಲೂ ಕೂಡ ಅಧಿವೇಶನವನ್ನು ಕರೆಯಬೇಕು ಎನ್ನತಕ್ಕಂಥದ್ದರ ಬಗ್ಗೆ ಸಚಿವ ಸಂಪುಟದಲ್ಲಿ ನಿರ್ಧಾರ ಮಾಡುತ್ತದೆ. ಮಾನ್ಯ ರಾಯರೆಡ್ಡಿಯವರೂ ಕೂಡ ಮಂತ್ರಿಗಳಾಗಿದ್ದರು. ಅವರು ಹಿರಿಯರೂ ಕೂಡ ಇದ್ದಾರೆ. ಆದ್ದರಿಂದ ಇಂಥದ್ದನ್ನು ಕರೆಯಬೇಕು ಎನ್ನತಕ್ಕಂಥದ್ದನ್ನು ನಿರ್ಧಾರ ಮಾಡಿ, ಅದರ ಪರವಾಗಿ prorogue ಆಗಿರತಕ್ಕಂಥದ್ದು, ಉಪಶಮನ ಆಗಿರತಕ್ಕಂಥ ಸಂದರ್ಭ ಬಂದಾಗ ನಾವು ರಾಜ್ಯಪಾಲರ ಬಳಿಗೆ ಹೋಗಿ ವಿನಂತಿಯನ್ನು ಮಾಡಿಕೊಳ್ಳುತ್ತೇವೆ. ಅದರ ಪ್ರಕಾರ ಮಾನ್ಯ

ಮುಖ್ಯಮಂತ್ರಿಗಳು ರಾಜ್ಯಪಾಲರನ್ನು ಕರೆದು "ಸದನವನ್ನು ಬೆಳಗಾವಿಯಲ್ಲಿ ಕರೆಯಬೇಕೆಂದು ನಿರ್ಧರಿಸಿದ್ದೇವೆ, ಆದ್ದರಿಂದ ತಾವು ದಯವಿಟ್ಟು ಸದನವನ್ನು ಕರೆಬೇಕು" ಎಂದು ಹೇಳಿ ಅವರಿಗೆ ಆಹ್ವಾನವನ್ನು ಕೊಟ್ಟರು. ಪ್ರಥಮದಲ್ಲಿ ಕೆಲವರು ತಪ್ಪಾದಂಥ ಅಭಿಪ್ರಾಯದ ಮೂಲಕ ಮಾನ್ಯ ರಾಜ್ಯಪಾಲರನ್ನು ಜಂಟಿ ಅಧಿವೇಶನವನ್ನು ಕುರಿತು ಭಾಷಣ ಮಾಡಲು ಕರೆಯದೇ ಅವರನ್ನು ಅಪಮಾನಿಸಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳಿದರು. ಆ ಸ್ಥಾನವನ್ನು ಅಪಮಾನಿಸಬೇಕು ಎನ್ನುವಂಥ ಉದ್ದೇಶ ನಮಗಿರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ನಿಯಮಾವಳಿಗಳನ್ನು ತಿಳಿದುಕೊಂಡೇ ಒಂದು ವರ್ಷದಲ್ಲಿ ಎರಡು ವಿಶೇಷ ಅಧಿವೇಶನಗಳನ್ನು ಅವರು ಕರೆದು ಅದರ ಬಗ್ಗೆ ಬಾಷಣ ಮಾಡುವುದಕ್ಕೆ ಅವಕಾಶವಿಲ್ಲ ಎನ್ನುವ ಕಾರಣಕ್ಕಾಗಿಯೇ ಅವರು ರಾಜ್ಯಪಾಲರನ್ನು ಆಹ್ವಾನಿಸಲಿಲ್ಲ. ಆದ್ದರಿಂದಲೇ ರಾಜ್ಯಪಾಲರು ಅವರು ನೇರವಾಗಿ ಹೇಳಿದರು, 25ನೇ ತಾರೀಖು ಬೆಳಗಾವಿಯಲ್ಲಿ ಅಧಿವೇಶನ ನಡೆಸಬೇಕು ಎಂದ ನಂತರ ತಮ್ಮ ಕಾರ್ಯವನ್ನು ಇದರ ಬಗ್ಗೆ ಮಾಡಬೇಕಾದಂಥ ಪೂರಕವಾದಂಥ ಸರ್ವ ಸಿದ್ಧತೆಗಳನ್ನು ಮಾಡಿ ಅದಕ್ಕೆ ಬೇಕಾಗಿರತಕ್ಕಂಥ ಅಧಿಕೃತವಾದಂಥ ಒಂದು ಅಧಿಸೂಚನೆಯನ್ನೂ ಕೂಡ ತಾವು ಹೊರಡಿಸಿದ್ದೀರಿ. ಒಂದು ತಾವೆಲ್ಲರೂ ಮಾತನಾಡಿದ ಅರ್ಥ ಹೇಗಿತ್ತೆಂದರೆ ನಮಗೆ ಅಕ್ಕಿ ಮೇಲೆ ಪ್ರೀತಿ ಹಾಗೂ ನೆಂಟರ ಮೇಲೆ ಕೂಡ ಪ್ರೀತಿ ಎಂದು, ಎರಡರ ಮೇಲೆ ಪ್ರೀತಿ ಎಂದರೆ ಅದು ಆಗುವುದಿಲ್ಲ. ನೆಂಟರನ್ನು ಆಹ್ವಾನಿಸಿದ್ದೇವೆ ಎಂದರೆ ಅಕ್ಕಿ ಖರ್ಚು ಆಗೇ ಆಗುತ್ತದೆ. ನೀವು ಕರೆದ ಅಧಿವೇಶನದ ಬಗ್ಗೆ ನಮ್ಮದು ಯಾವ ಆಕ್ಷೇಪಣೆ ಇಲ್ಲ, ಬಹಳ ಉತ್ತಮವಾಗಿರತಕ್ಕಂಥ ಅನುಕೂಲತೆಗಳನ್ನೆಲ್ಲಾ ಮಾಡಿದ್ದೀರಿ. ಈ ಅಧಿವೇಶನ ಆಗಲೇಬೇಕಾಗಿತ್ತು. ಹೀಗಿರುವಾಗ ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಎನ್ನುವಂಥ ರೀತಿಯಲ್ಲಿ ತಾಂತ್ರಿಕವಾದಂಥ ಕಾರಣಗಳನ್ನು ತಾವು ಎತ್ತಿದ್ದೀರಿ. ಆದರೆ ಅವರು ಸೂಕ್ಷ್ಮವಾಗಿ ಸುಸ್ವಾಗತವನ್ನು ಮಾಡುತ್ತೇವೆ ಎನ್ನತಕ್ಕಂಥ ಪದವನ್ನು ಬಳಸಿದ್ದಾರೆಯೇ ವಿನಃ ಅವರು ಯಾವಾಗಲೂ ಕೂಡ ಈ ನಮ್ಮ ಶಾಸನಸಭೆಯ ಕಾರ್ಯಾಂಗದ ಅಧಿಕಾರವನ್ನು ತೆಗೆದುಕೊಂಡಿಲ್ಲ. ಕರ್ನಾಟಕ ಸರ್ಕಾರ ನಿರ್ಧರಿಸಿದಂತೆ ದಿನಾಂಕ 25.09.2006 ರಿಂದ 29.09.20006 ರವರೆಗೆ ಬೆಳಗಾವಿಯಲ್ಲಿ ನಡೆಯಲ್ಲಿರುವ ವಿಧಾನ ಮಂಡಲದ ವಿಶೇಷ ಐತಿಹಾಸಿಕ ಅಧಿವೇಶನದಲ್ಲಿ ಭಾಗವಹಿಸಲು ಬರುತ್ತಿರುವ ತಮಗೆಲ್ಲಾ ಜಿಲ್ಲಾಡಳಿತದ ಪರವಾಗಿ ಹಾರ್ದಿಕ ಸ್ವಾಗತವನ್ನು ಕೋರುತ್ತೇನೆ ಎಂದಿದ್ದಾರೆ. ವಿಶೇಷ ಅಧಿವೇಶನ ಎಂದು ಪದವನ್ನು ಬಳಸಿದ್ದಕ್ಕೆ ತಮ್ಮ ಆಕ್ಷೇಪಣೆ ಇದ್ದರೆ ನಾನು ಒಪ್ಪಿಕೊಳ್ಳುತ್ತೇನೆ. ಪ್ರತಿಯೊಂದು ಪತ್ರಿಕೆಗಳಲ್ಲಿ ನಾವು ಯಾವಾಗಲೂ ಮಾತನಾಡುವಾಗ ಇದೊಂದು ಐತಿಹಾಸಿಕವಾದದ್ದು, ಇದು ಒಂದು ಮರೆಯಲಾಗದಂಥ ಅಚ್ಚಳಿಯದೇ ಮೂಡಿದಂಥ ಅಧಿವೇಶನ, ಈ ರೀತಿ ಏಕೆ ಮಾತನಾಡುತ್ತೇವೆ ಎಂದರೆ ನಾವು ಬೆಂಗಳೂರು ರಾಜಧಾನಿಯನ್ನು ಬಿಟ್ಟು ಪ್ರಥಮವಾಗಿ ಬೇರೆ ಕಡೆ ಅಧಿವೇಶನವನ್ನು ಮಾಡುತ್ತಿರುವುದರಿಂದ ಇದು ಒಂದು ಐತಿಹಾಸಿಕ ಅಧಿವೇಶನವಾಗಿದೆ. ಬಹಳ ವರ್ಷಗಳ ಬೇಡಿಕೆಗಳ ನಂತರ ಈ ಭಾಗದಲ್ಲಿ ವಿಧಾನಸಭೆಯನ್ನು ನಡೆಸುವುದರ ಮೂಲಕವಾಗಿ ಬಹಳ ಜನಗಳ ಬೇಡಿಕೆಗೆ ಸ್ಪಂದಿಸಿರತಕ್ಕಂಥ ಒಂದು ನಿರ್ಣಯವಾಗಿರತಕ್ಕಂಥ ಒಂದು ಕಾರಣಕ್ಕಾಗಿಯೇ ಇದು ಒಂದು ಐತಿಹಾಸಿಕ ಅಧಿವೇಶನ ಎಂದು ಎಲ್ಲರೂ ಪದ ಬಳಸಿದ ರೀತಿಯಲ್ಲಿ ಅವರು ಪದ ಬಳಕೆಯನ್ನು ಮಾಡಿದ್ದಾರೆ. ಅವರು ನಿಮಗೆ ಸ್ವಾಗತವನ್ನು ಮಾಡಿದ್ದಾರೆ. ಆಮೇಲೆ ಪ್ರಥಮವಾಗಿ

3.00 P.M.

ತಿಳಿದುಕೊಳ್ಳಬೇಕಾಗಿರುವುದು, ಊಟದ ವಿಚಾರದಂಥ ಕ್ಷುಲ್ಲಕ ವಿಷಯಗಳನ್ನು ಇಲ್ಲಿ ಪ್ರಸ್ತಾವ ಮಾಡುವುದು ಸರಿಯಲ್ಲ. ಇದು ಹಕ್ಕು ಚ್ಯುತಿಗೆ ಘನತೆ ತರತಕ್ಕಂಥ ವಿಚಾರವೂ ಕೂಡ ಅಲ್ಲ. ಅವರು ಅದನ್ನು ಪ್ರಸ್ತಾಪಿಸಬಾರದಿತ್ತು. ಬೆಂಗಳೂರಿನಲ್ಲೂ ಕೂಡ ನಮಗೆ 600–00 ರೂಪಾಯಿ ನಮಗೆ ಬರುತ್ತಿತ್ತು. ಬೆಂಗಳೂರಿನಲ್ಲಿ ದಿನಭತ್ಯೆ ಕೊಟ್ಟರೂ ಕೂಡ, ಶಾಸಕರು, ವಿರೋಧ ಪಕ್ಷದ ನಾಯಕರು ಅಥವಾ ಸ್ಪೀಕರ್ ಆದಂಥವರು ಹಾಗೂ ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಸಚಿವರುಗಳು ಅನೇಕ ಬಾರಿ ಶಿಷ್ಟಾಚಾರ ಮತ್ತು ಸಂಪ್ರದಾಯಕ್ಕೆ ಅನುಗುಣವಾದಂಥ ರೀತಿಯಲ್ಲಿ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಭೋಜನ ಕೂಟ ಮಾಡಿ ಆಹ್ವಾನ ಮಾಡಲಾಗುತ್ತಿತ್ತು. ಹೀಗಿರುವಾಗ ತಾವು ಯಾವ ಲೆಕ್ಕ ಶೀರ್ಷಿಕೆಯಡಿಯಲ್ಲಿ ಭತ್ಯೆಯನ್ನು ಸ್ವೀಕಾರ ಮಾಡಿದ್ದೀರಿ? ಅಲ್ಲಿ ಊಟ ಮಾಡಿದ್ದಂತೂ ನಿಜವಾಗಿದೆಯಲ್ಲಾ. ಕರೆದಿರತಕ್ಕಂಥದ್ದೂ ನಿಜವಾಗಿದೆಯಲ್ಲಾ. 600–00 ರೂಪಾಯಿ ಪಡೆದುಕೊಂಡಿರುವುದು ನಿಜವೇ ತಾನೇ? ಆಗ ತಮ್ಮ ಭೋಜನದ ಖರ್ಚನ್ನು ಮೈನಸ್ ಮಾಡಿಸಬಹುದಿತ್ತಲ್ಲಾ. ಅಥವಾ ಅದನ್ನು ಸ್ವೀಕಾರ ಮಾಡದೆಯೇ ತಾವು ಪ್ರತಿಭಟನೆ ಮಾಡಬಹುದಿತ್ತಲ್ಲಾ.

Sri K.R. Ramesh Kumar : Kindly yield, ಅಧ್ಯಕ್ಷರೆ, ಇದರಲ್ಲಿ ವಿಷಯ ಇಷ್ಟೆ. ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆ ನಮಗೆ ಒಂದು ರಾತ್ರಿಯಲ್ಲಿ ಬರಲಿಲ್ಲ. ಹಲವಾರು ವರ್ಷಗಳ ಹೋರಾಟದ ಫಲ. ನಾವು ಯಾರು ಆ ಹೋರಾಟದಲ್ಲಿ ಭಾಗಿಯಾಗಿರಲಿಲ್ಲ. ನಮ್ಮ ಹಿಂದಿನವರ ಹೋರಾಟದ ಫಲವನ್ನು ನಾವು ಅನುಭವಿಸುತ್ತಿದ್ದೇವೆ. ಅತ್ಯಂತ ಕಳಕಳಿಯಿಂದ ನಾವು ಮನವಿ ಮಾಡಿಕೊಳ್ಳುವುದೇನೆಂದರೆ ಸಂಸದೀಯ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಸಂಸತ್ತು ಅಥವಾ ಶಾಸನ ಸಭೆಗೆ ಏನು ಸಾರ್ವಭೌಮತ್ವ ಇದೆ ಅದಕ್ಕೆ ಎಲ್ಲೋ ಒಂದು ಕಡೆ ಅಪಾಯ ಆಗುವುದಿದ್ದರೆ ಅದು ಆಗಬಾರದು ಎನ್ನತಕ್ಕಂಥದ್ದು ಅಷ್ಟೇ ನಮ್ಮ concern. Parliament v/s Judiciary, Parliament v/s Executive, Executive v/s Judiciary ಈ ಸಂಘರ್ಷ ಹಂತ ಹಂತದಲ್ಲಿ ಈ ದೇಶದಲ್ಲಿ ನಡೆಯುತ್ತಲೇ ಇದೆ. ಈ ಎಲ್ಲಾ ಸದಸ್ಯರು ಹೇಳಿದ ಮಾತುಗಳಲ್ಲಿ ಕೆಲವು ಅನಪೇಕ್ಷಣೀಯವಾದ ಮಾತುಗಳು ಬಂದಿದ್ದರೂ ಕೂಡ ಯಾವ ಕಾರ್ಯವನ್ನು ಶಾಸಕಾಂಗ ನಿರ್ವಹಿಸಬೇಕಾಗಿತ್ತು ಅದರ ಬದಲಿಗೆ ಸ್ವಲ್ಪ ಮಟ್ಟಿಗೆ ಅತಿಕ್ರಮಿಸಿ ಅತ್ಯುತ್ಸಾಹದಿಂದ ಇರಬಹುದು, It might be out of good intention ಸರ್ಕಾರ ಮಾಡಿದೆ, ಅದು ಒಳ್ಳೆಯದಲ್ಲ, ಕ್ರಮೇಣ ನಾವು ಹೀಗೆ ಬಿಡುತ್ತಾ ಹೋದರೆ ಶಾಸಕಾಂಗದ ಸಾರ್ವಭೌಮತ್ವಕ್ಕೆ ಅಪಾಯವಾಗಬಹುದು ಎನ್ನುವುದು ಬಿಟ್ಟರೆ ಮತ್ತೇನೂ ಇಲ್ಲ. ಇದನ್ನು ನಾವು ಹೆಚ್ಚು ಬೆಳೆಸಿಕೊಂಡು ಹೋಗಬೇಕಾಗಿಲ್ಲ. ತಾವು ಹಿರಿಯರಿದ್ದೀರಿ, ನಾನು ಹೇಳಿದಂತೆ ನಾವೆಲ್ಲಾ ಫಲಾನುಭವಿಗಳು, ಸದುದ್ದೇಶದಿಂದ ಮಾಡಿರುವಂತಹ

ವಿಚಾರಕ್ಕೆ ಮತ್ತೊಮ್ಮೆ ಆಕ್ಷೇಪಣೆಗಳನ್ನು ನಾವು ಹೇಳಬೇಕಾಗಿಲ್ಲ. ಸಾರ್ವಭೌಮತ್ವವನ್ನು ಕಾಪಾಡಿಕೊಳ್ಳುವುದರಲ್ಲಿ ನಾವು ಎಲ್ಲರೊಟ್ಟಿಗೆ ಇದ್ದೇವೆ. ಅತ್ಯುತ್ಸಾಹದಿಂದ ಒಂದು ವೇಳೆ ಲೋಪದೋಷಗಳೇನಾದರೂ ಆಗಿದ್ದರೆ ಅದನ್ನು ದೊಡ್ಡದು ಮಾಡುವುದು ಬೇಡವೆಂದರೆ ಬಹುಶಃ ಇದಕ್ಕೆ ಇತಿಶ್ರೀ ಹಾಡಬಹುದು ಎಂದು ನನಗೆ ಅನಿಸುತ್ತದೆ. This is my humble suggestion. I will leave it to you to treat it with respect it deserves.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ರಮೇಶ್‌ಕುಮಾರ್ ರವರು ಪ್ರಸ್ತಾಪ ಮಾಡಿದ್ದು ನಿಜವಾಗಿ ಕೂಡ ಸ್ವಾಗತಾರ್ಹ. ಪ್ರಜಾಪ್ರಭುತ್ವದ ಸಂಸದೀಯ ವ್ಯವಸ್ಥೆಗೆ ಮಾತೃ ಸಂಸ್ಥೆ ಎಂದು ಇಂಗ್ಲೆಂಡ್ ಅನ್ನು ನಾವು ಕರೆಯುತ್ತೇವೆ. ಅದು ಅಮೇರಿಕಾದ ಅಧ್ಯಕ್ಷೀಯ ವ್ಯವಸ್ಥೆ. ಇಲ್ಲಿ ನಾವು ಅನುಭವಗಳ ಮೂಲಕ ಕಲಿಯಬೇಕಾಗುತ್ತದೆ. ಅಲ್ಲಿ ಸಂಪ್ರದಾಯಗಳ ಮೂಲಕವಾಗಿ ತಮ್ಮ ವಿಚಾರಗಳನ್ನು ಬಹಳ ಸರಿಯಾದಂತಹ ರೀತಿಯಲ್ಲಿ ನಡೆಸಿಕೊಂಡು ಹೋಗುವಂತಹ ಪ್ರಬುದ್ಧವಾದಂತಹ ಜನಜೀವನ ಮತ್ತು ಸಮಸ್ಯೆ ಅಲ್ಲಿ ಇದೆ. ಆ ಕಾರಣಕ್ಕಾಗಿ ಅಲ್ಲಿರತಕ್ಕಂಥ ಸಂಸದೀಯ ಪದ್ಧತಿಗಳನ್ನು ನಾವು ಅಳವಡಿಸಿಕೊಳ್ಳುವುದಕ್ಕೆ ಆಗಲಿಲ್ಲ. ಈಗ ಉದಾಹರಣೆಗೆ Mace ಅನ್ನು ಅಲ್ಲಿ ಇಟ್ಟಿದ್ದೇವೆ. ತಮಗೆ ಗೊತ್ತಿರಬಹುದು ಮೊದಲು ಕೂಡ mace ಅನ್ನು ಅಲ್ಲಿ ಇಡದೇ ಇದ್ದರೆ ಸ್ಪೀಕರ್ ಕುಳಿತುಕೊಂಡಿದ್ದರೂ ಕೂಡ ಅದಕ್ಕೆ ಗೌರವ ಬರುತ್ತಿರಲಿಲ್ಲ. ಈ ಸಂಪ್ರದಾಯ ಮೊದಲು ಇರಲಿಲ್ಲ. ಅದಾದನಂತರ ನಾವು ಬೆಳೆಸಿಕೊಂಡೆವು. ಇಂಗ್ಲೆಂಡ್‌ನಲ್ಲಾದರೂ ಕೂಡ ಅದು ಬೆಳೆದಿದ್ದು ಕ್ರಾಮ್‌ವೆಲ್ ಬಂದು ಜೇಮ್ಸ್‌ಸ್ಟೀಫರ್‌ಸನ್‌ನ ರುಂಡ ಚೆಂಡಾಡಿ ಪಾರ್ಲಿಮೆಂಟ್‌ನಲ್ಲಿ ಮಾಡಿದ ಮೇಲೆ ಅದಕ್ಕೆ ಒಂದು ಸಂಪ್ರದಾಯ ಬೆಳೆಸಿಕೊಂಡು ಬಂದಿರುವುದನ್ನು ನಾವು ಕಂಡಿದ್ದೇವೆ. ಆದ್ದರಿಂದ ಇಲ್ಲಿ ಸರ್ಕಾರದ ಮೇಲುಗೈ ಆಗಬಾರದು ಎನ್ನುವುದಕ್ಕೆ ಸಂಪೂರ್ಣವಾದ ಸಹಮತಿ ನಮಗೆ ಇದೆ. ಆ ರೀತಿಯಾದ ಸುವರ್ಣ ರೇಖೆಯನ್ನು ಎಳೆಯಬೇಕಾದ ಅಗತ್ಯ ಕೂಡ ಇದೆ. ಇಲ್ಲಿ ಅಚಾತುರ್ಯವಾಗಿಲ್ಲ ಎಂದು ನಮ್ಮ ಸರ್ಕಾರದ ವಾದ. ತಮ್ಮ ವಾದದ ಪ್ರಕಾರ ಅಚಾತುರ್ಯವಾಗಿದೆಯೆಂದು ಭಾವಿಸಿಕೊಂಡಿದ್ದರೆ, ಅದನ್ನು ಮಾನ್ಯ ಸಭಾಧ್ಯಕ್ಷರ ವಿವೇಚನೆಗೆ ಬಿಟ್ಟುಬಿಡೋಣ. ಇನ್ನೂ ಕೂಡ ನೋಟಿಫಿಕೇಷನ್ ಆಗಿಲ್ಲ ಎನ್ನುವುದು ಇದೆ. ಈಗ ವಾಡಿಕೆಯಾಗಿ ಕೆ.ಎಲ್.ಇ. ಸೊಸೈಟಿ ಎಂದು ಕರೆದರು ಎಂದು ಹೇಳುವುದಾದರೆ ಜನಗಳಿಗೆ ವಿದಾನಸಭೆಯ ಈ ಅಧಿಕಾರದ ವ್ಯಾಪ್ತಿಯ ವಿಷಯವನ್ನು ಹೇಳಿದರೆ ಬಹಳ ಜನಕ್ಕೆ ಗೊತ್ತಾಗುವುದಿಲ್ಲ ಎನ್ನುವ ಕಾರಣಕ್ಕಾಗಿಯೇ ಈ ಪದವನ್ನು ಬಳಸಿದ್ದಾರೆಯೇ ವಿನಃ ಇಲ್ಲಿ ನಿಮ್ಮ ಅಧಿಕಾರದ ವ್ಯಾಪ್ತಿ ಇಲ್ಲವೆಂದು ಅಲ್ಲ. ಈಗ ಪೊಲೀಸರು ಕೆಲವು ಬಂದೋಬಸ್ತ್‌ಗಳನ್ನು ತೆಗೆದುಕೊಂಡಿದ್ದಾರೆ. ಅವರು ಯಾರು ತೆಗೆದುಕೊಳ್ಳುವುದಕ್ಕೆ ಎಂದು ತಾವು ತಾಂತ್ರಿಕ ಕಾರಣಗಳನ್ನು ಎತ್ತಬಹುದು. ಅಲ್ಲಿ ಮಾರ್ಷಲ್‌ಗಳೇ ಇರಬೇಕಾಗಿತ್ತಲ್ಲ. ಆದ್ದರಿಂದ ಈ ತಾಂತ್ರಿಕ ಕಾರಣಗಳನ್ನು ವಿಸ್ತರಿಸುತ್ತಾ, ವಿಸ್ತರಿಸುತ್ತಾ ಹೋಗುವಂತಾದ್ದು ಅನುಭವಗಳ ಮೂಲಕವಾಗಿ ಪಡೆಯಬೇಕಾಗುತ್ತದೆ. ಇವತ್ತು ಪ್ರಥಮ ಬಾರಿಗೆ ನಡೆಯುತ್ತಿರುವಂತಹ

ಒಂದು ಐತಿಹಾಸಿಕ ಅಧಿವೇಶನದಲ್ಲಿ ಮಾನ್ಯ ಶಶಿಕಾಂತ ಅಕ್ಕಪ್ಪ ನಾಯಕ್, ಜಿಲ್ಲಾ ಉಸ್ತುವಾರಿ ಸಚಿವರು ಸಂಸದರನ್ನು ಆಹ್ವಾನ ಮಾಡಿದ್ದಾರೆಂದರೆ ಎಂದರೆ ಅದರ ಅರ್ಥ ಸಂಸದರು ಇಲ್ಲಿ ಬಂದು ಭಾಗವಹಿಸುತ್ತಾರೆಂದು ಅರ್ಥನಾ? ಅಲ್ಲ, ಅವರ ಉದ್ದೇಶ ಇರತಕ್ಕಂಥಾದ್ದು ಒಂದು ಮಹತ್ವಪೂರ್ಣವಾದಂತಹ ಒಂದು ಅಧಿವೇಶನ ನಡೆಯುವಾಗ ಅದಕ್ಕೆ ಪೂರ್ವಭಾವಿ ಸಮಾಲೋಚನೆಯಲ್ಲಿ ಮಾನ್ಯ ಸದಸ್ಯರು ಭಾಗವಹಿಸಿದಾಗ ಯಾವ ರೀತಿ ಅನುಕೂಲಗಳನ್ನು ಮಾಡಬೇಕು, ಅವರಿಗೆ ಅನಾನುಕೂಲವಾಗಲಾರದ ಹಾಗೆ ಹೇಗೆ ಅವರನ್ನು ನೋಡಿಕೊಳ್ಳಬೇಕು ಎನ್ನುವ ಕಾರಣಕ್ಕೆ ಕರೆದಿದ್ದಾರೆಯೇ ಹೊರತು ಅವರು ಒಂದು ಹಕ್ಕುಚ್ಯುತಿ ಮಾಡಿದ್ದಾರೆಂದು ತಾವು ತಪ್ಪಾಗಿ ಭಾವಿಸಬಾರದು ಎಂದು ಮಾನ್ಯ ರಾಯರೆಡ್ಡಿಯವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಅಂತಹ ಉದ್ದೇಶ ಕೂಡ ಮಾನ್ಯ ಶಶಿಕಾಂತ ನಾಯಕ್ ರವರಿಗೆ ಇರಲಿಲ್ಲ. ನಿಮ್ಮ ವಾಸ್ತವ್ಯ ಚೆನ್ನಾಗಿರಬೇಕು, ಬೆಳಗಾವಿಯ ಹವಾಗುಣವನ್ನು ತಾವು ಸಂತೋಷದಿಂದ ಸ್ವೀಕರಿಸಬೇಕು. ತಮ್ಮ ಈ ಮಾತುಕತೆ ಚರ್ಚೆ ಇವುಗಳು ಆಗುವಂತಹ ಸಂದರ್ಭದಲ್ಲಿ ನಿಮಗೆ ದೈಹಿಕವಾಗಿ ಹಾಗೂ ಮಾನಸಿಕವಾಗಿ ತೊಂದರೆಯಾಗದ ಹಾಗೆ ವಾತಾವರಣ ಇರಬೇಕು ಎನ್ನುವ ಕಾರಣಕ್ಕಾಗಿ ಮನೋರಂಜನೆ ಕಾರ್ಯಕ್ರಮವನ್ನು ಇಟ್ಟಿದ್ದೇವೆಂದು ಹೇಳಿ ಆರು ಗಂಟೆ ಮೇಲೆ ಮನೋರಂಜನೆಯನ್ನು ಇಟ್ಟಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ದೈಹಿಕವಾಗಿ ಎಂದರೆ ಹೇಗೆ?

ಶ್ರೀ ಎಂ.ಪಿ. ಪ್ರಕಾಶ್ : ದೈಹಿಕವಾಗಿ ಎಂದರೆ ಊಟ ಸರಿಯಾಗಿ ಸಿಗಲಿಲ್ಲ, ಹೊತ್ತಿಗೆ ಸರಿಯಾಗಿ ಸಿಗಲಿಲ್ಲವೆನ್ನುವ ಕಾರಣಕ್ಕಾಗಿ, ದಯವಿಟ್ಟು ಈ ವಿಚಾರವನ್ನು ದೀರ್ಘವಾಗಿ ಬೆಳೆಸಬಾರದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕೊನೆಗೆ ತಾವು ಹೇಳಿದಿರಿ, ಅಕ್ಕಿ ಮೇಲೆ ಆಸೆ ನೆಂಟರ ಮೇಲೆ ಪ್ರೀತಿ ಎಂದು, ನಾವು ನಿಮಗೆ ಹೇಳಬೇಕಾದರೆ ನಮ್ಮ ಮೇಲೆ ನಿಮಗೆ ಪ್ರೀತಿ ಇದೆ. ಆದರೆ ಪುರುಸೊತ್ತಿಲ್ಲ. ಪ್ರೀತಿ ಬಹಳ ಇದೆ. ಆದರೆ ಇದೆಲ್ಲಾ ಮಾಡುವುದಕ್ಕೆ ಪುರುಸೊತ್ತು ಇಲ್ಲ. ಅದಕ್ಕಾಗಿ ಪುರುಸೊತ್ತು ಜಾಸ್ತಿಯಿದ್ದರೆ ಚೆನ್ನಾಗಿ ಆಗುತ್ತಿತ್ತು. ಆದರೆ ಈಗ ತರಾತುರಿಯಲ್ಲಿ ಮಾಡಿದಿರಿ. ಅದಕ್ಕೆ ಇದನ್ನು ಇಲ್ಲಿಗೆ ಮುಗಿಸಿಬಿಡಿ. ಇಲ್ಲದೇ ಇದ್ದರೆ ನಮ್ಮ ಭತ್ಯೆಯಲ್ಲಿ ಊಟ ಹಾಗೂ ತಿಂಡಿ ಖರ್ಚು ಕಟ್ ಮಾಡಿಕೊಂಡು ಕೊಡಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಅವಸರದ ಪ್ರೀತಿ ಬಹಳ ಪರಿಣಾಮಕಾರಿಯಾಗಿ ಇರುತ್ತದೆ. Love at first sight ಎಂದು ಹೇಳುತ್ತಾರಲ್ಲಾ ಹಾಗೆ, ಅದೇನೇ ಇರಲಿ ಅದನ್ನು ತಮಗೆ ಬಿಟ್ಟುಬಿಟ್ಟಿದ್ದೇವೆ. ದಯವಿಟ್ಟು ಇದನ್ನು ಇಲ್ಲಿಗೆ ಮುಕ್ತಾಯ ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೊದಲೇ ನೀವು ಇಷ್ಟು ದೊಡ್ಡ ತೀರ್ಪು ಕೊಡುತ್ತಿದ್ದಿರಿ ಎಂದರೆ ನಾವೆಲ್ಲರೂ ಚೆನ್ನಾಗಿ ಮಾತನಾಡುತ್ತಿದ್ದೆವು.

ಶ್ರೀ ವಾಟಾಳ್ ನಾಗರಾಜು : ತೀರ್ಮ ಯಾವಾಗ ಬರೆದಿದ್ದು ಹೇಳಿ ಸ್ವಾಮಿ? ಇದು ಯಾವಾಗ ಬರೆದಿದ್ದು? ಯಾರು ಬರೆದುಕೊಟ್ಟರು?

ಅಧ್ಯಕ್ಷರು : ಈ ದಿನ ಮಾನ್ಯ ಸಚಿವರಾದ ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ್‌ರವರು ಶಾಸಕರ ಗೌರವಾರ್ಥ ಭೋಜನ ಕೂಟವನ್ನು ಏರ್ಪಾಡು ಮಾಡಿದ್ದಾರೆ, ಎಲ್ಲರೂ ಭಾಗವಹಿಸಬೇಕೆಂದು ಕೋರಲಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಈ ತೀರ್ಮ ಯಾವಾಗ ಬರೆದಿದ್ದು ಹೇಳಿ ಎಂದರೆ ಹೇಳುವುದಿಲ್ಲವಲ್ಲಾ.

ಅಧ್ಯಕ್ಷರು : ಈಗ ಸದನವನ್ನು 4–00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ತನ್ನ ಕಲಾಪವನ್ನು 3–10ಕ್ಕೆ ಮುಂದೂಡಲ್ಪಟ್ಟು ಮತ್ತೆ ಸಂಜೆ 4–00 ಗಂಟೆಗೆ ಸೇರಲು ನಿಶ್ಚಯಿಸಿತು)

(ಅ) ಅಧ್ಯಕ್ಷರ ತೀರ್ಮ

ಅಧ್ಯಕ್ಷರು : ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಜೆ.ಸಿ. ಮಾಧುಸ್ವಾಮಿ, ಶ್ರೀ ಬಸವರಾಜ್ ರಾಯರೆಡ್ಡಿ, ಶ್ರೀ ಕೆ.ಆರ್. ರಮೇಶ್‌ಕುಮಾರ್, ಶ್ರೀ ಜಿ.ವಿ. ಶ್ರೀರಾಮರೆಡ್ಡಿ, ಶ್ರೀ ವಾಟಾಳ್ ನಾಗರಾಜ್ ಹಾಗೂ ಇತರರು ನನಗೆ ನೀಡಿರುವ ಹಕ್ಕುಚ್ಯುತಿ ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ವಿಷಯಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ತಿಳಿಸಬಯಸುತ್ತೇನೆ.

1) ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಮತ್ತು ನಿಯಮಾವಳಿಗಳ ನಿಯಮ 241ರ ಮೇರೆಗೆ ಸರ್ಕಾರಿ ವಿದೇಯಕಗಳ ಮತ್ತು ಇತರ ಕಾರ್ಯಕಲಾಪಗಳ ಹಂತ ಅಥವಾ ಹಂತಗಳನ್ನು ಕುರಿತು ಚರ್ಚಿಸುವುದಕ್ಕಾಗಿ ಕಾಲಾವಧಿಯ ಹಂಚಿಕೆಗೆ ಶಿಫಾರಸ್ಸು ಮಾಡುವುದು ಕಾರ್ಯಕಲಾಪಗಳ ಸಲಹಾ ಸಮಿತಿಯ ಕರ್ತವ್ಯವಾಗಿರುತ್ತದೆ. ದಿನಾಂಕ: 25.09.2006 ರಂದು ಕಾರ್ಯಕಲಾಪಗಳ ಪಟ್ಟಿಯ ರೀತ್ಯಾ ಸಂತಾಪ ಸೂಚನೆ ನಂತರ ವಿಧಾನ ಸಭೆಯ ಕಾರ್ಯಕಲಾಪಗಳ ಸಮಿತಿಯ ಸಭೆಯನ್ನು ಕರೆದು ಸದನದ ಕಾರ್ಯಕಲಾಪಗಳನ್ನು ನಡೆಸುವ ಕುರಿತು ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ.

2) ಕರ್ನಾಟಕ ವಿಧಾನ ಸಭೆಯ ನಿಯಮಾವಳಿಗಳ ನಿಯಮ 2, ಅರ್ಥ ಮತ್ತು ವಿವರಣೆಯಲ್ಲಿ ವಿಧಾನ ಸಭಾ ಕಾರ್ಯಾಲಯ ವಿಧಾನ ಮಂಡಲ ಸಚಿವಾಲಯ ಸಂಬಂಧಿಸಿದಂತೆ ಈ ಕೆಳಕಂಡಂತೆ ಉಲ್ಲೇಖಿತವಾಗಿದೆ.

"ವಿಧಾನ ಸಭಾ ಸಚಿವಾಲಯ" ಎಂದರೆ ಬೆಂಗಳೂರಿನಲ್ಲಿರುವ ಸಚಿವಾಲಯ ಹಾಗೂ ತಾತ್ಕಾಲಿಕವಾಗಿ ಬೆಂಗಳೂರಿನ ಹೊರಗಿನ ಯಾವುದೇ ಸ್ಥಳದಲ್ಲಿ ಅಥವಾ